
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

03 ಮೇ 2017 ಪುಟ 20 ರೂ. 15/-



ಗುರುಪ್ರಸಾದ್‌ಗೆ ಅಂಬೇಡ್ಕರ್ ಪ್ರಶಸ್ತಿ



ಬಂಧನ ಎಂಬ ಪ್ರಹಸನ

ಾಂಬ್ ನಾಗನ

ಹಳೇ ನೋಟು ಎಕ್ಸ್‌ಚೇಂಜ್ ರಾಕೆಟ್




ನಾಗಮಂಗಲ
ಚಲುವಣ್ಣನ ಗರ್ವಭಂಗಕ್ಕೆ
ಗೌಡರ ಶಪಥ

ಶಿರಸಿ: ಕಾಂಗ್ರೆಸ್
ಕೊಳಕರ ಮುನ್ಸಿಪಾಲ್ಟಿ
ಪಾಲಿಟಿಕ್ಸ್‌ನ ಕ್ಲೈಮಾಕ್ಸ್!!

ರಾಯಚೂರು:
ಅಟ್ರಾಸಿಟಿ ತಿಪ್ಪರಾಜನ
ದರ್ಪಿಷ್ಟ ಶಾಸಕಗಿರಿ

ಹರಿಹರ:
'ಹರಿ'ಯ ಅವಾಂತರಗಳ
ನಡುವೆ 'ಹರ'ನ ಲೀಲೆಗಳು!

ಕಳೆದ ವಾರ ಇಲ್ಲಿ ಬರೆದದ್ದಕ್ಕಿಂತ ನಮ್ಮ ಮಾಧ್ಯಮಗಳು ನೀಚ ಮಟ್ಟಕ್ಕಿಳಿದ



ಸ್ನೇಹಿತರೇ,


ಈ ಬರಹವನ್ನು ಅತ್ಯಂತ ನೋವಿನಿಂದ ಬರೆಯುತ್ತಿದ್ದೇನೆ. ಕಳೆದ ವಾರ ಈ ಅಂಕಣದಲ್ಲಿ ಒಂದು ಕೊಲೆಯ ಕುರಿತು ಬರೆಯಲಾಗಿತ್ತು. ಕೊಲೆಯಾದ ಹುಡುಗಿಯ ಊರು, ಕುಟುಂಬದ ವಿವರಗಳನ್ನೆಲ್ಲಾ ಬದಲಿಸಲಾಗಿತ್ತು ಎಂಬುದನ್ನು ಬಿಟ್ಟರೆ, ಅದು ಅಂದಿಗೆ ಮೂರು ದಿನಗಳ ಹಿಂದೆ ನಡೆದ ಕೊಲೆಯೊಂದರ ಅಸಲೀ ಚಿತ್ರಣವಾಗಿತ್ತು. ವ್ಯಕ್ತಿಗತವಾಗಿ ಪರಿಚಿತವಿದ್ದ ಆ ಹುಡುಗಿಯ ಕೊಲೆಯು ನಮ್ಮ ವಲಯದಲ್ಲಿ ತಲ್ಲಣ ಮೂಡಿಸಿತ್ತು. ಆದರೆ ಮಾರನೆಯ ದಿನದ ಪತ್ರಿಕೆ ನೋಡಿದವರಿಗೆ ಇನ್ನೂ ಹೆಚ್ಚಿನ ಶಾಕ್ ಆಗಿತ್ತು. ಏಕೆಂದರೆ, ನಾವೆಲ್ಲರೂ ವಿಶ್ವಾಸದಿಂದ ಓದುವ ಪತ್ರಿಕೆಯು ಪೋಲೀಸ್ ಇಲಾಖೆಯ ಕೆಲವು ಸಂವೇದನಾ ರಹಿತರು ನೀಡಿದ ಸುದ್ದಿಯನ್ನು ಯಥಾವತ್ ಪ್ರಕಟಿಸಿತ್ತು. ಅದರಲ್ಲಿ ಕೊಲೆಯ ಕುರಿತು ಸ್ವಲ್ಪವೂ ವಿಷಾದವಿರಲಿಲ್ಲ. ಬದಲಿಗೆ ಆ ಹುಡುಗಿಯ ಫೋನಿನಿಂದ ಸುಮಾರು 1000ಕ್ಕೂ ಹೆಚ್ಚು ಬಾರಿ ಕೊಲೆಗಾರನ ಫೋನಿಗೆ ಕರೆಗಳು ಹೋಗಿದ್ದವು ಎಂಬ ಪೋಲೀಸ್ ಹೇಳಿಕೆಯನ್ನು ಬಾಕ್ಸ್ ಮಾಡಿ ಮುದ್ರಿಸಲಾಗಿತ್ತು. ಐಪಿಸಿ ಸೆಕ್ಷನ್ನಿನ 302 ಕೇಸು ಅದು. ಕೊಲೆಯೆಂದರೆ ಕೊಲೆ. ಪ್ರೀತಿ, ಮಾನವೀಯತೆ, ಮನುಷ್ಯರ ಮೇಲಿನ ವಿಶ್ವಾಸ ಎಲ್ಲವನ್ನೂ ಮಾಯ ಮಾಡಿ, ಪರಿಚಿತವಿದ್ದ ಹುಡುಗಿಯೊಬ್ಬಳನ್ನು ಹಾಡಹಗಲಲ್ಲಿ, ಬೀದಿಯಲ್ಲಿ ಇರಿದಿರಿದು ಮಾಡಿದ ಕೊಲೆ. ಆದರೆ, ಈ ಫೋನ್ ಕರೆ ಅಂಕಿ-ಅಂಶಗಳ ಮೂಲಕ ಪೋಲೀಸರು ಕೊಲೆಗೆ ಸಮರ್ಥನೆ ನೀಡುತ್ತಿದ್ದರು. ಅದನ್ನು ಈ ನಾಡಿನಲ್ಲಿ ಇಂದಿಗೂ ವಿಶ್ವಾಸಾರ್ಹತೆ ಉಳಿಸಿಕೊಂಡಿರುವ ಪತ್ರಿಕೆ ಯಥಾವತ್ತಾಗಿ ಮುದ್ರಿಸಿತ್ತು.

ಟಿವಿ ಮಾಧ್ಯಮಗಳು ಇದನ್ನು ಕೊಲೆಗೆ ಸಮರ್ಥನೆಯಾಗಿ ಮುಂದಿಟ್ಟು 'ಸ್ಟೋರಿ'ಗಳನ್ನು ಮಾಡುತ್ತವೆಂದು ಊಹಿಸಿ, ಈ ಅಂಕಣದಲ್ಲಿ ಅದನ್ನು ಬರೆದಿದ್ದೆ. ಆದರೆ, ನಮ್ಮ ಟಿವಿ ಚಾನೆಲ್‌ಗಳು ಅಷ್ಟಕ್ಕೆ ಸುಮ್ಮನಾಗಿಲ್ಲ. ಅವರು ಅಕ್ಷರಶಃ ಹಾದರದಲ್ಲಿ ಮುಳುಗೇಳುತ್ತಿದ್ದಾರೆ. ಯಾವ ಬಗೆಯಲ್ಲಿ ಈ ಸುದ್ದಿಯನ್ನು ತಿರುಚುತ್ತಿದ್ದಾರೆ ಮತ್ತು ವಿವರಗಳನ್ನು ಸೃಷ್ಟಿಸಿ ಬಿತ್ತರಿಸುತ್ತಿದ್ದಾರೆ ಎಂದರೆ, ಅವರಲ್ಲಿ ನೀತಿಸಂಹಿತೆಯ ಲವಲೇಶವಾಗಲೀ, ಮನುಷ್ಯ ಪ್ರಜ್ಞೆಯ ಕುರುಹುಗಳಾಗಲೀ ಇರಲು ಸಾಧ್ಯವೇ ಇಲ್ಲ. ಅದರ ವಿವರಗಳನ್ನು ಈ ಪತ್ರಿಕೆಯಲ್ಲಿ ಬರೆಯುವುದು ಸಾಧ್ಯವಿಲ್ಲ. ಆ ಮಟ್ಟಕ್ಕೆ ಕೊಲೆಯಾದ ಹುಡುಗಿಯ ವಿರುದ್ಧ ವಿಕೃತಿಯನ್ನು ತೋರುತ್ತಿದ್ದಾರೆ. ಪೋಲೀಸ್ ನ್ಯೂಸ್‌ನಂತಹ ಅಥವಾ ಇನ್ನೂ ಗಲೀಜಾದ ಸೆಕ್ಸ್ ಪತ್ರಿಕೆಗಳಿಗಿಂತ ಕೀಳಾಗಿ ಸುದ್ದಿಗಳನ್ನು ತಯಾರು ಮಾಡಿದ್ದಾರೆ. ಸ್ವತಃ ಇವರೇ ಆ ಮನೆಯೊಳಗೆ ವಾಸವಿದ್ದರೇನೋ ಎಂಬಂತೆ ವಿವರಗಳನ್ನು ಕಟ್ಟಿ ಹೇಳುತ್ತಿದ್ದಾರೆ.

ಹೀಗೆಲ್ಲಾ ಆಲೋಚಿಸುವ ಈ ಪತ್ರಕರ್ತರ ಮಾನಸಿಕ ಆರೋಗ್ಯದ ಸ್ಥಿತಿಗತಿ ಏನಿರಬಹುದು? ತಮ್ಮ ತಮ್ಮ ಮನೆಗಳಲ್ಲಿ ಬಂಧುಗಳ ಜೊತೆಗೆ ಹೇಗೆ ವ್ಯವಹರಿಸುತ್ತಾರೆ ಎಂದೆಲ್ಲಾ ಸಂದೇಹ ಹುಟ್ಟುವ ಮಟ್ಟಿಗೆ ಈ ವರದಿಗಳನ್ನು ಕಟ್ಟಲಾಗಿದೆ.

ಇಂತಹ ಸ್ಟೋರಿ ಮಾಡಿದ ಒಬ್ಬನೇ ಒಬ್ಬ ವರದಿಗಾರನೂ, ಹುಡುಗಿಯ ಕುಟುಂಬದ ಯಾರೊಬ್ಬರನ್ನೂ ಕನಿಷ್ಠ ಫೋನಿನಲ್ಲಾದರೂ ಸಂಪರ್ಕಿಸಿ ಅವರ ಅನಿಸಿಕೆ ಪಡೆದುಕೊಳ್ಳುವ ಕೆಲಸ ಮಾಡಿಲ್ಲ. ಇದ್ಯಾವ ಸೀಮೆ ಜರ್ನಲಿಸಂ? ಇದು ಅಕಸ್ಮಾತ್ತಾಗಿ ತಪ್ಪಾದ ಒಂದೇ ಒಂದು ಬಿಡಿ ಘಟನೆ ಅಲ್ಲ. ಪ್ರತಿನಿತ್ಯವೂ ನಡೆಯುವ ವಿದ್ಯಮಾನವಾಗಿದೆ. ಕೆಲವರು ಮಾಡಿದ ಸಣ್ಣ ತಪ್ಪನ್ನು ನೂರು, ಸಾವಿರ ಪಟ್ಟು ಹಿಗ್ಗಿಸಿ ಪ್ರಸಾರ ಮಾಡುತ್ತಾರಾದರೆ, ಕೆಲವರು ಮಾಡದೇ ಇರುವ ತಪ್ಪನ್ನು ಮಾಡಿದ್ದಾರೆಂದು ಬಿಂಬಿಸಲಾಗುತ್ತದೆ. ಇದಕ್ಕಿಂತ ಹೀನವಾದದ್ದು ಇನ್ನೂ ಒಂದಿದೆ. ಅದು ಬಲಿಪಶುವನ್ನೇ ಅಪರಾಧಿಯನ್ನಾಗಿಸುವ ಪ್ರಯತ್ನ. ಅದರಲ್ಲೂ ಸಂಬಂಧಪಟ್ಟ ವ್ಯಕ್ತಿ ದಲಿತ, ಮುಸ್ಲಿಂ ಅಥವಾ ಮಹಿಳಾ ಸಮುದಾಯಕ್ಕೆ ಸೇರಿದವರಾಗಿದ್ದರೆ, ಇನ್ನೂ ಸಲೀಸಾಗಿ ಇಂತಹ ಪ್ರಯತ್ನಗಳು ನಡೆಯುತ್ತವೆ. ಈ ಪ್ರಕರಣದಲ್ಲಿ ಆ ಹುಡುಗಿ ದಲಿತಳು, ಮಹಿಳೆ ಮತ್ತು ಆರ್ಥಿಕವಾಗಿ ದುರ್ಬಲಳು.

ಸದಾಕಾಲ ಇತರರಿಗೆ ನೈತಿಕತೆ ಬೋಧಿಸುವ ಪತ್ರಕರ್ತರಿಂದ ಕನಿಷ್ಠ ನೈತಿಕತೆ ನಿರೀಕ್ಷೆ ಮಾಡಲು ಸಾಧ್ಯವಿಲ್ಲ ಎನ್ನುವುದಕ್ಕೆ ಇನ್ನೂ ಹಲವಾರು ನಿದರ್ಶನಗಳನ್ನು ಕೊಡಬಹುದು. ಡುಂಡಿ ಕಾದಂಬರಿ ವಿವಾದಕ್ಕೀಡಾದಾಗ ಒಂದು ಚಾನೆಲ್ ಯೋಗೀಶ್ ಮಾಸ್ಟರ್ ಅವರ ಬಗ್ಗೆ ಒಂದು ವಿಶೇಷ ಸುದ್ದಿ ಪ್ರಸಾರ ಮಾಡಿತು. ರಂಗಕರ್ಮಿಯೂ ಆಗಿರುವ ಯೋಗೀಶ್ ಮಾಸ್ಟರ್ ತಮ್ಮ ವೆಬ್‌ಸೈಟ್‌ನಲ್ಲಿ ತಮ್ಮ ವಿವಿಧ ಭಂಗಿಗಳ ಫೋಟೋಗಳನ್ನು ಹಾಕಿಕೊಂಡಿದ್ದರು. ಸಾಮಾನ್ಯವಾಗಿ ದಿನನಿತ್ಯದ ಬದುಕಿನಲ್ಲಿ ಎಲ್ಲರೂ ಸಲೀಸಾಗಿ ಒಪ್ಪಿಕೊಳ್ಳದ ಕೆಲವು ಭಂಗಿಗಳೂ ಅದರಲ್ಲಿರಬಹುದು. ಆದರೆ, ಯೋಗೀಶ್ ಮಾಸ್ಟರ್ ಯಾರು? ಅವರು ಯಾವ್ಯಾವ ಕೃತಿಗಳನ್ನು ಬರೆದಿದ್ದಾರೆ? ಅವರ ಆಸಕ್ತಿಗಳೇನು? ಹಲವಾರು ಕ್ಷೇತ್ರಗಳಲ್ಲಿ ಅವರು ತೋರಿರುವ ಸಾಧನೆಗಳೇನು? ಇಂತಹ ಯಾವ ವಿವರಗಳೂ ಅದರಲ್ಲಿರಲಿಲ್ಲ. ಇಂತಹ ಭಂಗಿಗಳ ಫೋಟೋ ಹಾಕಿಕೊಂಡಿರುವ ವ್ಯಕ್ತಿ ವಿಕೃತ ಎಂದು ತೋರಿಸಲು ಅವರು ಸಾಕಷ್ಟು ಪದಸಂಪತ್ತು ಖರ್ಚು ಮಾಡಿದ್ದರು. ಜಾಹೀರಾತಿನ ಹೆಸರಿನಲ್ಲಿ ಚಿತ್ರವಿಚಿತ್ರವಾಗಿ ನಗ್ನತೆಯನ್ನು ಮುಂದಿಡುವ ಚಾನೆಲ್‌ಗಳಿಗೆ ತಮ್ಮ ವಿಕೃತಿಯು ಎಂದೂ ಕಂಡಿಲ್ಲ ಹೋಗಲಿ. ಆದರೆ ಅದೇ ಚಾನೆಲ್ ಅದೇ ವಾರದಲ್ಲಿ ಇನ್ನೊಂದು ಸುದ್ದಿಯನ್ನು ಸವಿವರವಾಗಿ ತೋರಿಸಿತ್ತು.



ನಟಿಯೊಬ್ಬರು ತಾನು ನಟಿಸಿದ ಸಿನಿಮಾವೊಂದರಲ್ಲಿ ತಾನು ಅಭಿನಯಿಸಿಯೇ ಇರದ ಸೀನ್‌ಗಳನ್ನು ತಿರುಚಿ ನಗ್ನ ಚಿತ್ರಗಳಿವೆ ಎಂದು ಬಿಂಬಿಸುವ ಟ್ರೈಲರ್‌ಗಳನ್ನು ಅಂತರ್ಜಾಲದಲ್ಲಿ ಪ್ರಸಾರ ಮಾಡಲಾಗುತ್ತಿದೆ ಎಂದು ಚಿತ್ರತಂಡದ ಬಗ್ಗೆ ದೂರಿದ್ದರು. ಯಾವುದು ಆಕ್ಷೇಪಾರ್ಹ ಎಂದು ಆಕೆ ಹೇಳಿದ್ದರೋ, ಅದೇ ಸೀನ್‌ಗಳ... ಸುದ್ದಿಯಲ್ಲಿ ಮತ್ತೆ ಮತ್ತೆ ತೋರಿಸಲಾಯಿತು. ಯೋ... ಮಾಸ್ಟರ್‌ರ ಬಗ್ಗೆ ಸ್ಟೋರಿ ಮಾಡಿದ್ದ ಪತ್ರ... 'ಚಾನೆಲ್‌ನ ಹಿಪಾಕ್ರಸಿ'ಯ ಕುರಿತು ನಾನು ಕೇಳಿದ... ಕುರಿತು ಸ್ಟೋರಿ ಮಾಡಿದ್ದು ತಾನಲ್ಲವೆಂದೂ, ತಾ... ಚಾನೆಲ್‌ನಲ್ಲಿ ದುಡಿಯುವ ಒಬ್ಬ ಸಿಬ್ಬಂದಿಯಷ್ಟೇ ಆ... ಅದಕ್ಕೆ ತಾನು ಜವಾಬ್ದಾರನಲ್ಲವೆಂದು ಹೇಳಿ ಸು... ಕೊಂಡರು. ಆದರೆ, ನಂತರದ ದಿನಗಳಲ್ಲಿ ಮೀ... ಹಗರಣದ ವಿಡಿಯೋವನ್ನು ಮತ್ತೆ ಮತ್ತೆ ಬಿತ್ತ... ಇದೇ ಪತ್ರಕರ್ತರು ಚಾನೆಲ್‌ನ ಮುಖ್ಯಸ್ಥರಾಗಿದ್ದ...

ಇದರ ಆಚೆಗೆ ಅಧಿಕಾರಿಗಳ ಟ್ರಾನ್ಸ್‌ಫರ್ ದಂ... ನೇರವಾಗಿ ಭಾಗವಹಿಸುವ ಪತ್ರಕರ್ತರು, ರಾಜಕಾ... ಮಧ್ಯೆ ಸಮಸ್ಯೆ ಬಂದಾಗ ಅವನ್ನು ಬಗೆಹ... ಮಧ್ಯವರ್ತಿಗಳಾಗಿಯೂ, ಬೇರೆ ಬೇರೆ ದ... ಡೀಲ್‌ಗಳನ್ನು ನಡೆಸುವವರಾಗಿಯೂ ಸಕ್ರಿಯವಾಗಿ... ಅವೆಲ್ಲಾ ಮಾಡುತ್ತಾ ಮಾಡುತ್ತಾ ಸೀದಾ ಕ್ಯಾಮರಾ... ಬಂದಾಕ್ಷಣ ದೇಶದ ಸಕಲ ನೈತಿಕಶಕ್ತಿ ಅ... ಆವಾಹನೆಯಾಗಿಬಿಡುತ್ತದೆ. ಅವರು ಮೊದಲು ಕತೆಗಾ... ಕತೆ ಸೃಷ್ಟಿ ಮಾಡುತ್ತಾರೆ; ನಂತರ ವಕೀಲರಾಗುತ್ತಾ... ನಂತರ ನ್ಯಾಯಾಧೀಶರಾಗುತ್ತಾರೆ. ಕೊನೆಯಲ್ಲಿ ಶಿ... ಜಾರಿ ಮಾಡುತ್ತಾರೆ. ಪ್ರಜಾತಂತ್ರವೊಂದರಲ್ಲಿ ಯ... ಮೌಲ್ಯಗಳು ಅಕ್ಷಮ್ಯವಾಗಿರಬೇಕಿತ್ತೋ, ಅವೆಲ್ಲಾ... ತಂದುಕೊಡುವ ಕೆಲಸ ಇಲ್ಲಿ ನಡೆಯುತ್ತದೆ.

ಕಳೆದ ವಾರದಲ್ಲಿ ಜನಶ್ರೀ ಸೀಇಒ ಬ್ಲಾಕ್... ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ವಿ... ಸಿಕ್ಕಿಹಾಕಿಕೊಂಡಿಲ್ಲ, ಇದೇ ಜನಶ್ರೀ ಚಾನೆಲ್‌ನಲ್ಲಿ... ರೈ ಅವರ ಒಂದು ಹೇಳಿಕೆಯನ್ನು ಟಾರ್ಗೆಟ್ ಹ... ರೀತಿ ಆಘಾತಕಾರಿಯಾಗಿತ್ತು. ಸ್ವತಃ ರೈ ಪ್ರಶ್ನೆ ಬಿ... ಆಕ್ರೋಶಗೊಳ್ಳುವ ಅಗತ್ಯವಿರಲಿಲ್ಲ. ಅವರು ಆಡಿದ... ಸಮಸ್ಯೆ ಹೊರತುಪಡಿಸಿದರೆ, ಆಡಿದ ಮಾ... ಸರಿಯಾಗಿದ್ದವು. ಚಾನೆಲ್ ಒಂದಕ್ಕೆ ಹೀಗೆ ಹೇಳುವ... ತೋರಿಸಿದಿರಾ ಎಂಬಂತೆ ಅವರ ಮೇಲೆ... ತಿರುಗಿಸಿಕೊಳ್ಳಲಾಯಿತು. ಇಂತಹ ಪ್ರಕರಣಗಳು... ಹಲವಾರು ಚಾನೆಲ್‌ಗಳಲ್ಲಿ ಹಲವಾರು ಸಾರಿ... ಪತ್ರಿಕೆಗಳಲ್ಲೂ ಇವಕ್ಕೆ ಹೊರತಲ್ಲ. ಸೇಡು ತೀರಿಸಿ... ವಿಚಾರ ಬಂದಾಗ 'ಪ್ರಗತಿಪರ' ಪತ್ರಕರ್ತರೂ ಹ... ಮಾಧ್ಯಮವೆನ್ನುವುದು ಅವರವರ ಈಗೋ... ಬಳಕೆಯಾದರೆ ಇನ್ನೇನು ಆಗಬಹುದು?

ಬಲಾಢ್ಯರಾಗಿರುವವರೂ ಮಾಧ್ಯಮಗಳ... ಬಂದಾಗ ಅವನ್ನು ಎದುರಿಸಲು ಹಿಂಜರಿಯುತ್ತಾರೆ... ಈ ಹುಡುಗಿಯ ಪ್ರಕರಣದಲ್ಲಿ ಮಾಧ್ಯಮಗಳು ತ... ನೀಚತನವನ್ನು ಬಯಲಿಗೆಳೆದು, ಸತ್ತ ಹುಡುಗಿಗೆ... ದಕ್ಕಿಸಿಕೊಡಬೇಕೆಂದು ಕೆಲವು ಗೆಳೆಯರು ತೀರ್ಮಾ... ಅವರ ಜೊತೆ ನಿಲ್ಲುವುದು ಎಲ್ಲಾ ಮಾನ... ಕರ್ತವ್ಯವಾಗಿದೆ.

(ಆಸಕ್ತರು ವಿನಯ್ ಅ...
ಸಂಪರ್ಕಿಸಬಹುದು: 988059...

ಇದೀಗ ಚಡ್ಡಿಗಳ 'ದೇಶಭಕ್ತಿ'ಯ ಉತ್ತುಂಗ ಕಾಲ. ಲ್ಲಿ ಯಾರೂ ಆರೆಸ್ಸೆಸ್ ನನ್ನಾಗಲಿ, ಚಡ್ಡಿಗಳ ಆರಾಧ್ಯದೈವ ೇಂದ್ರ ಮೋದಿಯನ್ನಾಗಲಿ, ಬಿಜೆಪಿಯನ್ನಾಗಲಿ, ಅದರ ಚ್ಚು ಸದಸ್ಯರ ಹುಚ್ಚಾಟದ ಹೇಳಿಕೆಗಳನ್ನಾಗಲಿ, ೋಮಾತೆಯನ್ನಾಗಲಿ, ಸೈನ್ಯವನ್ನಾಗಲಿ ಟೀಕಿಸುವಂತಿಲ್ಲ. ಾಗೊಮ್ಮೆ ಧೈರ್ಯ ಮಾಡಿ ಟೀಕಿಸಿದರೆ "ನೀನು ಕಿಸ್ತಾನಕ್ಕೆ ಹೋಗು" ಎಂದೋ, "ನೀನು ದೇಶದ್ರೋಹಿ" ದೋ, "ಹಿಂದೂ ವಿರೋಧಿ" ಎಂದೋ, "ನಕ್ಸಲೈಟ್" ದೋ ಬಣ್ಣಿಸಿಕೊಳ್ಳಬೇಕಾಗುತ್ತದೆ.

ಸಾಮಾಜಿಕ ಜಾಲತಾಣಗಳಲ್ಲಂತೂ ಇವರ ಅಬ್ಬರ ತಿ ಮೀರಿದೆ. ಸುಳ್ಳು ಸುದ್ದಿಗಳನ್ನು, ಕಾಲ್ಪನಿಕ ಇತಿಹಾಸದ ಣುಕುಗಳನ್ನು, ಟೊಳ್ಳು ಘೋಷಣೆಗಳನ್ನು ಂಚಿಕೊಳ್ಳುತ್ತಿರುತ್ತಾರೆ. ಅದೂ ಎಂತೆಂತಹ ಸುಳ್ಳುಗಳು ನ್ನುತ್ತೀರಿ? ಕಳೆದ ಎರಡು ವರ್ಷಗಳಿಂದ "ನಮ್ಮ ಷ್ಟ್ರಗೀತೆಯು ಜಗತ್ತಿನಲ್ಲೇ ಅತ್ಯುತ್ತಮವಾದದ್ದು ಎಂದು ಶ್ವ ಸಂಸ್ಥೆ ಘೋಷಿಸಿದೆ" ಎಂಬ ಪೋಸ್ಟ್‌ಅನ್ನು ಂಚಿಕೊಳ್ಳಲಾಗುತ್ತಿದೆ. ನನ್ನ ಕಾಲೇಜ್ ಮಿತ್ರರು ರಂಭಿಸಿರುವ ಒಂದು ವಾಟ್ಸ್ ಆಪ್ ಗುಂಪಿನಲ್ಲೂ ದನ್ನು ಹಂಚಿಕೊಳ್ಳಲಾಯಿತು. ಅದಕ್ಕೆ ಪ್ರತಿಕ್ರಿಯಿಸಿದ ನು "ಇದೊಂದು ಸುಳ್ಳು ಸುದ್ದಿ. ರಾಷ್ಟ್ರಗೀತೆಯನ್ನು ಟ್ ಮಾಡುವ ಕೆಲಸ ವಿಶ್ವಸಂಸ್ಥೆಯದ್ದಲ್ಲ" ಎಂದೆ. ದಕ್ಕೆ ಬಂದ ಉತ್ತರ ಮುಜುಗರದ ಕ್ಷಮೆಯೂ ಅಲ್ಲ, ಪ್ಪಿಗೆಯೂ ಅಲ್ಲ, ಬದಲಾಗಿ "ಆದರೇನಂತೆ, ನಮ್ಮ ಷ್ಟ್ರಗೀತೆಯ ಬಗ್ಗೆ ಹೆಮ್ಮೆ ಪಡುತ್ತೇನೆ" ಎಂದ ಆ ಶಿಕ್ಷಿತ, ಇಂಜಿನಿಯರ್ ಆಗಿರುವ, ಮೇಲು ವರ್ಗಕ್ಕೆ ರಿರುವ ಗೃಹಸ್ಥ ಮಿತ್ರ.

ಹಾಗೆಯೇ ಅದೇ ಗುಂಪು ಹಂಚಿಕೊಂಡ ಇನ್ನೊಂದು ಸೇಜು ಹೀಗಿತ್ತು: "ಕಾನೂನು ಇಲ್ಲದ ಪಾಕಿಸ್ತಾನದಲ್ಲಿ ಹಾಕಿಕೊಂಡಿರುವ ಕುಲಭೂಷಣ್ ಜಾಧವ್ ಪರವಾಗಿ ಎನ್‌ಯು ವಿದ್ಯಾರ್ಥಿಗಳು ಮತ್ತು ಕನ್ಹಯ್ಯ ಕುಮಾರ್ ಡೆಸಲಿರುವ ಮೊಂಬತ್ತಿ ಮೆರವಣಿಗೆಗಾಗಿ ಕಾತುರದಿಂದ ಯುತ್ತಿದ್ದೇನೆ. ಹಾಗೆಯೇ ಪಾಕಿಸ್ತಾನ ಉತ್ತಮ ದೇಶ ದಿದ್ದ ಬುದ್ಧಿಜೀವಿಗಳ ಮತ್ತು ಪತ್ರಕರ್ತರ ತಿಕ್ರಿಯೆಗಳಿಗಾಗಿಯೂ ಎದುರು ನೋಡುತ್ತಿದ್ದೇನೆ."

ನನಗೆ ಸಹಜವಾಗಿಯೇ ರೇಗಿತು. "ನನಗೆ ಗೊತ್ತಿರುವಂತೆ ಾವ ಪ್ರಗತಿಪರರೂ, ಬುದ್ಧಿ ಜೀವಿಗಳೂ ಪಾಕಿಸ್ತಾನ ತ್ತಮ ದೇಶ ಎಂದು ಭಾವಿಸಿಲ್ಲ. ನಾವು ಇಲ್ಲಿ ಂದೂತ್ವವಾದಿಗಳನ್ನು ವಿರೋಧಿಸುವುದಕ್ಕೆ ಮುಖ್ಯ ಕಾರಣ ರತ ಕೂಡ ಪಾಕಿಸ್ತಾನದಂತೆ ಕುಲಗೆಟ್ಟು ಹೋಗಬಾರದು ಬ ಕಾಳಜಿಯಿಂದ. ಹೇಳಿಕೇಳಿ ಪಾಕಿಸ್ತಾನ ಜನ್ಮವೆತ್ತಿದ್ದೇ ರ್ಮಾಂಧತೆಯಲ್ಲಿ, ಅಲ್ಲಿ ಇಸ್ಲಾಮ್ ಧರ್ಮಾಂಧತೆ ಜಕೀಯದ ಅಡಿಪಾಯವಾಗಿರುವಂತೆ ಭಾರತದಲ್ಲೂ ಂದೂ ಧರ್ಮಾಂಧತೆ ರಾಜಕೀಯದ ಅಡಿಪಾಯವಾದರೆ ರತ ಪಾಕಿಸ್ತಾನಕ್ಕಿಂತಲೂ ಕೆಟ್ಟುಹೋಗುತ್ತದೆ ಎಂಬ ಚ್ಚರ ಎಲ್ಲರಿಗೂ ಇರಲಿ. ಪಾಕಿಸ್ತಾನವನ್ನು ಆಳುತ್ತಿರುವವರು ಲ್ಲಾಗಳು ಮತ್ತು ಮಿಲಿಟರಿ. ಭಾರತವೂ ಪಾಕಿಸ್ತಾನದಂತೆ ಗಬಾರದೆಂದರೆ ಇಲ್ಲೂ ಯೋಗಿಗಳು/ ಸಾಧ್ವಿಗಳು, ರೋಹಿತ್ ಎಂಬ ಸೈನ್ಯಾಧಿಕಾರಿ ಹಿಂದೂತ್ವ ಯೋತ್ಪಾದಕ ಮತ್ತು ಮಾರಣಹೋಮಕ್ಕೆ ಕಾರಣರಾದವರು ಧಿಕಾರಕ್ಕೆ ಬಾರದಂತೆ ನೋಡಿಕೊಳ್ಳುವುದು ಎಲ್ಲಾ ಪ್ರಜೆಗಳ ರ್ತವ್ಯವಾಗಬೇಕು" ಎಂದು ಹೇಳಿದೆ. ಆದರೆ ಅದಕ್ಕೆ ಗುಂಪಿನಲ್ಲಿರುವ ಯಾರೊಬ್ಬರಿಂದಲೂ ಪ್ರತಿಕ್ರಿಯೆ ರಲಿಲ್ಲ.

ಪಡ್ಡೆ ಹುಡುಗರೋ, ನಿರುದ್ಯೋಗಿ ಯುವಕರೋ, ನರಕ್ಷಸ್ಥರೋ ಇಂತಹ ಟೊಳ್ಳು 'ದೇಶಭಕ್ತಿ'ಯಲ್ಲಿ ಳುಗಿದ್ದರೆ ಅದನ್ನು ಅರ್ಥಮಾಡಿಕೊಂಡು ಅವರಿಗೆ ವಳಿಕೆ ಹೇಳಬಹುದಿತ್ತು, ಆದರೆ ಪ್ರತಿಷ್ಠಿತ ಕಾಲೇಜುಗಳಲ್ಲಿ ದಿದ, ತಿಂಗಳಿಗೆ ಹತ್ತಿರ ಹತ್ತಿರ ಲಕ್ಷ ರೂಪಾಯಿಗಳ ಾರ ಪಡೆಯುವ, ದೇಶವಿದೇಶಗಳನ್ನು ಸುತ್ತುವ, ಪತ್ರಿಕೆ ತ್ಯಾದಿಗಳನ್ನು ಓದುವ ಮಧ್ಯಮವರ್ಗದ ಸುಶಿಕ್ಷಿತರೇ ತಹ ಮೋದಿ ಭಜನೆಯಲ್ಲಿ ಮತ್ತು ದೇಶಭಕ್ತಿಯ ಂಗಿನಲ್ಲಿ ಮುಳುಗಿದರೆ ಏನು ಮಾಡಬಹುದು?

ನೈಜ ದೇಶಭಕ್ತಿ ಮತ್ತು ಟೊಳ್ಳು ದೇಶಭಕ್ತಿಗಳನ್ನು ವರಿಸಬಹುದಷ್ಟೇ. ಆ ನಿಟ್ಟಿನಲ್ಲಿ ಇತ್ತೀಚೆಗೆ ಬೆಂಗಳೂರು ಾಸಿಯೂ ಮತ್ತು ಪತ್ರಕರ್ತೆಯೂ ಆಗಿರುವ ಪ್ರಿಯಾ ಮನಿ ಎಂಬುವವರು 'ನನ್ನ ದೇಶಭಕ್ತಿ, ನಿನ್ನ ದೇಶಭಕ್ತಿ' ಬ ಲೇಖನವನ್ನು 'ದಿ ಮಿಂಟ್' ಪತ್ರಿಕೆಗೆ ಬರೆದಿದ್ದರು. ಲೇಖನ ನನ್ನ ಅಭಿಪ್ರಾಯಗಳನ್ನು ಬಿಂಬಿಸಿದ್ದರಿಂದ ದರ ಅನುವಾದವನ್ನು ಇಲ್ಲಿ ನಮ್ಮ ಓದುಗರಿಗೆ ಡುತ್ತಿದ್ದೇನೆ.

"ನನ್ನ ದೇಶಭಕ್ತಿ ಒಂದು ಪನೋರಮಾ ಶಾಟ್ ಇದ್ದಂತೆ, ನ್ನದು ಕೇವಲ ಸೆಲ್ಫಿ, ನನ್ನ ದೇಶಭಕ್ತಿಯು ನಾನು ಬೆಳೆದ ಪರಿಸರ ವಾಸನೆ ಮತ್ತು ರುಚಿಗಳ ಆಳದಲ್ಲಿ ನೆಲೆಸಿದೆ. ನ್ನದು ಬೇರೆಯವರಿಗೆ ಫಾರ್ವರ್ಡ್ ಮಾಡುವ ವಾಟ್ಸ್‌ಆಪ್ ಮೆಸೇಜುಗಳಲ್ಲಿ, ಮತ್ತು ಟ್ವಿಟ್ಟರ್‌ನಲ್ಲಿ 'ಹೆಮ್ಮೆಯ ಭಾರತೀಯ' ಎಂದು ನಿನ್ನನ್ನೇ ಬಣ್ಣಿಸಿಕೊಳ್ಳುವುದರಲ್ಲಿದೆ. ನ್ನ ದೇಶಭಕ್ತಿ ಪ್ರೀತಿಯನ್ನು ಆಧರಿಸಿದ್ದರೆ ನಿನ್ನದು ಲವ್

ನನ್ನ ದೇಶಭಕ್ತಿ, ನಿನ್ನ ದೇಶಭಕ್ತಿ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಜಿಹಾದ್ ಮತ್ತು ರೋಮಿಯೋ ವಿರೋಧಿ ನಿಲುವನ್ನು ಆಧರಿಸಿದೆ. ನನ್ನ ದೇಶಭಕ್ತಿ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ, ನಿನ್ನದು ಅಸಮ್ಮತಿ ನಿಲ್ಲಿಸಲು ಇಂಟರ್ನೆಟ್ ಮುಚ್ಚಬೇಕು ಎನ್ನುತ್ತದೆ.

ನನ್ನ ದೇಶಭಕ್ತಿ ರಾಷ್ಟ್ರೀಯತೆಗಿಂತ ವಿಭಿನ್ನವಾಗಿದೆ, ಆದರೆ ನಿನಗೆ ಅವುಗಳ ನಡುವಿನ ವ್ಯತ್ಯಾಸವೇ ಗೊತ್ತಿಲ್ಲ, ನನ್ನ ದೇಶಭಕ್ತಿಯು ಸಾಬೀತಿಗಾಗಲಿ, ಮಾಪನಕ್ಕಾಗಲಿ ನಿಲುಕುವಂತದ್ದಲ್ಲ, ಆದರೆ ನಿನ್ನ ದೇಶಭಕ್ತಿಯು ಅತಿದೊಡ್ಡ ಧ್ವಜಸ್ತಂಭದಷ್ಟು ಎತ್ತರದ್ದು.

ನನ್ನ ದೇಶಭಕ್ತಿ ವಿಮರ್ಶೆ ಮತ್ತು ವಿಮರ್ಶಕರನ್ನು ಆಹ್ವಾನಿಸುತ್ತದೆ, ನಿನ್ನದು ಪ್ರತಿ ನಾಗರಿಕನಿಂದ ವಿಗ್ರಹಾರಾಧನೆಯನ್ನು ಬಯಸುತ್ತದೆ. ನನ್ನ ದೇಶಭಕ್ತಿ ಅರ್ಜಿಗಳಲ್ಲಿ ಮತ್ತು ಪ್ರತಿಭಟನೆಗಳಲ್ಲಿ ವ್ಯಕ್ತವಾದರೆ ನಿನ್ನದು ಇಂಟರ್ನೆಟ್ ಟ್ರೋಲ್ಸ್ ಮತ್ತು ಆದಾಯ ತೆರಿಗೆ ಅಧಿಕಾರಿಗಳಿಗೆ ಆದ್ಯತೆ ನೀಡುತ್ತದೆ.

ಪ್ರೀತಿ ಮತ್ತು ನೋವು, ಎರಡನ್ನೂ ಸಮಾನವಾಗಿ ನನ್ನ ದೇಶಭಕ್ತಿ ವ್ಯಕ್ತಪಡಿಸುತ್ತದೆ. ನಿನ್ನದು ಪಕ್ಷಪಾತ ಮಾಡುತ್ತದೆ. ನನ್ನ ದೇಶಭಕ್ತಿ ಎಲ್ಲರೂ ಸಾಮರಸ್ಯದಿಂದ ಬದುಕಲಿ ಎಂದು ಆಶಿಸುತ್ತದೆ, ನಿನ್ನದು ಭಿನ್ನಮತೀಯರು ಪಾಕಿಸ್ತಾನಕ್ಕೆ ಹೋಗಲಿ ಎಂದು ಧಮಕಿ ಹಾಕುತ್ತದೆ; ಸ್ಥಾಪಿತ ಶಕ್ತಿಗಳ ವಿರುದ್ಧ ದನಿ ಎತ್ತುವವರನ್ನು 'ದೇಶದ್ರೋಹಿಗಳು' ಎಂದು ಪಟ್ಟ ಕಟ್ಟುತ್ತದೆ. ನಿನ್ನ ದೇಶಭಕ್ತಿ ಯಾವುದೇ ವಿಚಾರ ಕುರಿತ ಹ್ಯಾಶ್‌ಟಾಗ್ ವೈರಲ್ ಆಗುವಂತೆ ನೋಡಿಕೊಳ್ಳುತ್ತದೆ, ಆದರೆ ನನ್ನ ದೇಶಭಕ್ತಿಯು ಅಷ್ಟು ತಾಂತ್ರಿಕ ತಿಳಿವಳಿಕೆಯನ್ನು ಹೊಂದಿಲ್ಲ.

ನನ್ನ ದೇಶಭಕ್ತಿಯನ್ನು 'ಅಮರ್ ಅಕ್ಬರ್ ಆಂತೋನಿ' ಮತ್ತು 'ವೀರ್-ಝರಾ'ದಂತಹ ಕಮರ್ಷಿಯಲ್


ಗೌರವಿಸಲು ಸಾಧ್ಯ? ಕರಣ್ ಜೋಹರ್ ಸಿನಿಮಾದಲ್ಲಿ ಪಾಕಿಸ್ತಾನಿ ನಟ ಫವದ್ ಖಾನ್ ನಟಿಸುವುದನ್ನು ಹೇಗೆ ಸಹಿಸಲು ಸಾಧ್ಯ?" ಎಂದು ಪ್ರಶ್ನಿಸುತ್ತದೆ. ನಿನ್ನ ದೇಶಭಕ್ತಿ ತರ್ಕಬದ್ಧವಲ್ಲದ್ದು.

ನಿನ್ನ ದೇಶಭಕ್ತಿ ನಾನು ಭಾರತವನ್ನು ತೊರೆಯಬೇಕು ಅನ್ನುತ್ತದೆ. ಆದರೆ ನನ್ನ ದೇಶಭಕ್ತಿ ನಾನೆಲ್ಲಿಗೂ ಹೋಗುವವಳಲ್ಲ ಇಲ್ಲೇ ಇರುವವಳು ಎಂದು ನಿನ್ನಂಥವರಿಗೆ ತಿಳಿಸಬಯಸುತ್ತದೆ. ನಿನ್ನ ದೇಶಭಕ್ತಿಯನ್ನು ಭೌಗೋಳಿಕ ಗಡಿಗಳು ನಿರ್ಧರಿಸುತ್ತವೆ. ನನ್ನ ದೇಶಭಕ್ತಿ ಈ ಭೌಗೋಳಿಕ ಗಡಿಗಳೊಳಗೆ ವಾಸಿಸುವ ಜನರ ಬದುಕಿನ ಬಗ್ಗೆ ಚಿಂತಿಸುತ್ತದೆ.

ನನ್ನ ದೇಶಭಕ್ತಿ ಐದು ರೂಪಾಯಿ ನಾಲ್ಕಾಣೆಗಳ ಮೌಲ್ಯವನ್ನು ಅರ್ಥಮಾಡಿಕೊಂಡಿದೆ. ಆದರೆ ನಿನ್ನ ದೇಶಭಕ್ತಿ ನಗದುರಹಿತ ವಹಿವಾಟಿನಲ್ಲಿ, ಪೇಟಿಎಮ್ ವ್ಯಾಮೋಹದಲ್ಲಿ ಹುದುಗಿಹೋಗಿದೆ.

ನನ್ನ ದೇಶಭಕ್ತಿ ಎಲ್ಲಾ ಸಜೀವಿಗಳನ್ನು ಅಪ್ಪಿಕೊಳ್ಳುತ್ತದೆ. ಆದರೆ ನಿನ್ನ ದೇಶಭಕ್ತಿ ಪ್ರಾಣಿಸಂಕುಲಗಳಲ್ಲೇ ಭೇದಭಾವ ಮಾಡುವಷ್ಟು ಧರ್ಮಾಂಧವಾಗಿದೆ. ಅದರಲ್ಲಿ ಶುದ್ಧ-ತಳಿ ದೇಸಿ ಹಸುಗಳಿಗೆ ಪ್ರಾಮುಖ್ಯತೆ ಇದ್ದು ಜೆರ್ಸಿ ಹಸುಗಳನ್ನು ಕಡೆಗಣಿಸಲಾಗುತ್ತದೆ. ನನ್ನ ದೇಶಭಕ್ತಿ ಯಾರು ಯಾವ ಮಾಂಸ ತಿಂದರೆ ನನಗೇನು ಎನ್ನುತ್ತದೆ. ಆದರೆ ನಿನ್ನ ದೇಶಭಕ್ತಿ ಯಾರ ಫ್ರಿಡ್ಜ್‌ನಲ್ಲಿ ಏನಿದೆ ಎಂಬುದರ ಕುರಿತು ಕೊಲೆಗಳನ್ನು ಮಾಡಿಸುತ್ತದೆ.

ನನ್ನ ದೇಶಭಕ್ತಿ ನನ್ನ ಲೈಂಗಿಕತೆಯೊಂದಿಗೆ ಆರಾಮದಾಯಕವಾಗಿದೆ. ಆದರೆ ನಿನ್ನ ದೇಶಭಕ್ತಿ



ಸಿನಿಮಾಗಳು ಪ್ರತಿನಿಧಿಸುತ್ತವೆ, ನಿನ್ನ ದೇಶಭಕ್ತಿಯಲ್ಲಿ ಒಂದು ದೇವರಿಗೆ ಮಾತ್ರ ಸ್ಥಳಾವಕಾಶ ಇದೆ. ನನ್ನ ದೇಶಭಕ್ತಿ ಎಲ್ಲರನ್ನೂ ಒಂದುಗೂಡಿಸುತ್ತದೆ, ನಿನ್ನದು ಎಲ್ಲರನ್ನು ವಿಭಜಿಸುತ್ತದೆ.

ನನ್ನ ದೇಶಭಕ್ತಿ ಸಾವಿತ್ರಿಬಾಯಿ ಫುಲೆ, ನಿನ್ನದು ಸಾವರ್ಕರ್. ನನ್ನ ದೇಶಭಕ್ತಿ ಮಹಿಳಾ ಶಕ್ತಿಯಿಂದ ಪ್ರೇರೇಪಣೆ ಪಡೆದಿದ್ದರೆ ನಿನ್ನದು ಮತ್ತೆಮತ್ತೆ ಪುರುಷತ್ವವನ್ನು ಪ್ರತಿಪಾದಿಸಲು ಬಯಸುತ್ತದೆ. ನೀನು ನಿನ್ನ ಪುರುಷತ್ವವು ನನ್ನನ್ನು ಮತ್ತು ನನ್ನ ಮಹಿಳಾ ಸಾಮರ್ಥ್ಯವನ್ನು ನಿಯಂತ್ರಿಸುವ ರೀತಿ ಎಂದು ಅರ್ಥಮಾಡಿಕೊಂಡಿದ್ದಿ. ಆದರೆ ನಿಜವಾದ ಪುರುಷತ್ವ ಹೆಣ್ತನದೊಂದಿಗೆ ನೆಮ್ಮದಿಯಿಂದ ಇರಬಯಸುತ್ತದೆ ಎಂಬುದೇ ನಿನಗೆ ಅರ್ಥವಾಗಿಲ್ಲ.

ನನ್ನ ದೇಶಭಕ್ತಿ ಮಳೆಬಿಲ್ಲಿನಂತೆ ವರ್ಣಮಯವಾಗಿದೆ. ನಿನ್ನದು ಬರಿ ಕಪ್ಪು ಮತ್ತು ಬಿಳಿ. ನಿನ್ನ ದೇಶಭಕ್ತಿ ಎಲ್ಲವನ್ನೂ ಕೇಸರಿಮಯ ಮಾಡಲು ಇಚ್ಛಿಸುತ್ತದೆ, ನನ್ನ ದೇಶಭಕ್ತಿ ಚೆಂಡು ಹೂವಿನ, ಜಿಲೇಬಿ ಸಿಹಿಯ, ಭೌತ ಪ್ರಪಂಚದ ಎಲ್ಲವನ್ನೂ ತ್ಯಜಿಸಿರುವ ಯೋಗಿಗಳು ಧರಿಸುವ ನಿಲುವಂಗಿಯ ಬಣ್ಣಗಳ ಜೊತೆಗೂ ಸಂತುಷ್ಟವಾಗಿರಬಲ್ಲದು. ಆದರೆ ನಿನ್ನ ಯೋಗಿಳೋ, ರಾಜ್ಯಾಧಿಕಾರಕ್ಕಾಗಿ ಹಪಹಪಿಸುವ ದಾಹಿಗಳು.

ನನ್ನ ದೇಶಭಕ್ತಿ ಸಾಮಾನ್ಯವಾಗಿ ತಟಸ್ಥ ಸ್ಥಿತಿಯಲ್ಲಿರುತ್ತದೆ, ನಿನ್ನದು ಸದಾ ಅಧಿಕ ರಕ್ತದೊತ್ತಡದಿ ಚಡಪಡಿಸುತ್ತಿರುತ್ತದೆ.

ನನ್ನ ದೇಶಭಕ್ತಿ ಶೇ. 100ರಷ್ಟು, ನಿನ್ನದು ಬರೀ ಸೊನ್ನೆ ಸಂಖ್ಯೆಯದ್ದು. ನನ್ನ ದೇಶಭಕ್ತಿ ಶಾಂತಿಯನ್ನು ಆಶಿಸುತ್ತದೆ, ನಿನ್ನದು ಹೊಡೆಯಲು ಉತ್ಸುಕವಾಗಿರುತ್ತದೆ. ನನ್ನ ದೇಶಭಕ್ತಿ ಸ್ವಹಿತಾಸಕ್ತಿಗಿಂತಲೂ ದೇಶದ ಹಿತಾಸಕ್ತಿಗೆ ಪ್ರಾಮುಖ್ಯತೆ ಕೊಡುವವರನ್ನು ಗೌರವಿಸುತ್ತದೆ. ಆದರೆ ನಿನ್ನ ದೇಶಭಕ್ತಿ ನನ್ನನ್ನು ಗೇಲಿ ಮಾಡಿ "ಶಾಂತಿಯನ್ನು ಬಯಸುವ ನೀನು ಅದು ಹೇಗೆ ಭಾರತೀಯ ಸೈನಿಕರನ್ನು

ವಿಕೃತವಾಗಿದ್ದು ಜನರು ಮಲಗುವ ಕೋಣೆಗಳನ್ನು ಇಣುಕಿ ನೋಡುತ್ತಿರುತ್ತದೆ. ನಿನ್ನ ದೇಶಭಕ್ತಿಯು ಲೂಟಿಕೋರ ಸಂಸ್ಕೃತಿಯನ್ನು ಪ್ರಚೋದಿಸಿದರೂ ಕುಟುಂಬ ಮೌಲ್ಯಗಳ ಬಗ್ಗೆ ಧರ್ಮೋಪದೇಶಗಳನ್ನು ನೀಡುತ್ತದೆ.

ನನ್ನ ದೇಶಭಕ್ತಿಯು ಸಮಾನ ಮನಸ್ಕ ಮಿತ್ರರೊಂದಿಗೆ ಒಂದು ಪೆಗ್ ಹೀರುತ್ತಾ ವ್ಯಕ್ತವಾದರೆ ನಿನ್ನ ದೇಶಭಕ್ತಿಯು ದೊಡ್ಡದನಿಯಲ್ಲಿ ವೇದಿಕೆಯ ಮೇಲಿಂದ ವ್ಯಕ್ತವಾಗುತ್ತದೆ. ಒಪ್ಪಿಕೊಳ್ಳುತ್ತೇನೆ, ನಿನ್ನ ದೇಶಭಕ್ತಿಗೆ ಭಾಷಣ ಬಿಗಿಯುವ ಕಲೆ ಕರಗತವಾಗಿದೆ.

ಯಾರು ಯಾವ ಧಿರಿಸು ಧರಿಸುತ್ತಾರೆ, ಯಾರು ಯಾರನ್ನು ಮದುವೆಯಾಗುತ್ತಾರೆ ಎಂಬುದನ್ನು ಆಧರಿಸಿ ಜನರನ್ನು ಯಾಕೆ ವ್ಯಾಖ್ಯಾನಿಸಬೇಕು ಎಂಬುದು ನನ್ನ ದೇಶಭಕ್ತಿಗೆ ಅರ್ಥವೇ ಆಗುವುದಿಲ್ಲ. ಆದರೆ ನಿನ್ನ ದೇಶಭಕ್ತಿಯಲ್ಲಿ ಕಟ್ಟುನಿಟ್ಟಾದ ನಿಯಮಗಳಿವೆ. ಆ ನಿಯಮಗಳ ಪ್ರಕಾರ ಜೀನ್ಸ್ ತೊಡುವವರು ಮತ್ತು ಅನ್ಯಧರ್ಮೀಯರನ್ನು ಪ್ರೀತಿಸುವವರೆಲ್ಲ ದೇಶದ್ರೋಹಿಗಳು.

ನನ್ನ ದೇಶಭಕ್ತಿಗೆ ತನ್ನ ಬಗ್ಗೆಯೇ ನಗುವ ಸಾಮರ್ಥ್ಯವಿದೆ. ಸೋತ ರಾಜಕಾರಣಿಯ ಬಗ್ಗೆ ಲೇವಡಿ ಮಾಡುವುದನ್ನು ಹೊರತುಪಡಿಸಿದರೆ ನಿನ್ನ ದೇಶಭಕ್ತಿಗೆ ಹಾಸ್ಯಪ್ರಜ್ಞೆಯೇ ಇಲ್ಲ, ನಿನ್ನ ದೇಶಭಕ್ತಿಯು ಪ್ರತಿಯೊಂದಕ್ಕೂ ರೇಗುವ, ಸದಾ ಆಕ್ರೋಶದಿಂದ ಕಂಪಿಸುವ ಕಲೆಯನ್ನು ವೃದ್ಧಿಸಿಕೊಂಡಿದೆ.

ವಿದ್ಯಾರ್ಥಿಗಳು ಭೌತಶಾಸ್ತ್ರ ರಸಾಯನಶಾಸ್ತ್ರ ಜೀವಶಾಸ್ತ್ರಗಳನ್ನು ಓದಿ ಡಿಗ್ರಿ ಗಿಟ್ಟಿಸಿ ಉದ್ಯೋಗ ಪಡೆಯಲೆಂದೇ ವಿಶ್ವವಿದ್ಯಾಲಯಗಳು ಇವೆ ಎಂದು ನಿನ್ನ ದೇಶಭಕ್ತಿ ನಂಬಿದೆ. ಆದರೆ ವಿಶ್ವವಿದ್ಯಾಲಯಗಳು ಕಲಿಕಾ ದೇಗುಲಗಳೆಂದೂ, ಅವು ಯಾರನ್ನಾದರೂ, ಯಾವುದನ್ನಾದರೂ ಪ್ರಶ್ನಿಸುವ ಸುರಕ್ಷಿತ ಸ್ಥಳಗಳು ಎಂದೂ ನನ್ನ ದೇಶಭಕ್ತಿ ನಂಬಿದೆ.

ನನ್ನ ದೇಶಭಕ್ತಿಯು ಯಾವ ಸಂಕೋಲೆಯೂ ಇಲ್ಲದ ಯುವಜನತೆಯ ದನಿಯಲ್ಲಿ ಹಸನಾಗಿದ್ದರೆ, ನಿನ್ನ ದೇಶಭಕ್ತಿಯು "ಆ ಯುವಜನತೆ ದೇಶದ ವಿರುದ್ಧ ಸಂಚು ರೂಪಿಸುತ್ತಿದ್ದಾರೆ. ಅವರು ದೇಶದ್ರೋಹಿಗಳು. ಅವರಿಗೆ ಎಷ್ಟು ಧಿಮಾಕು" ಎಂದು ಚೀರಾಡುತ್ತದೆ.

ನನ್ನ ದೇಶಭಕ್ತಿ ಈಗಲೂ ಉತ್ತರಗಳಿಗಾಗಿ ತಡಕಾಡುತ್ತಿದೆ. ನಿನ್ನ ದೇಶಭಕ್ತಿ ತನಗೆ ಎಲ್ಲಾ ಉತ್ತರಗಳು ಗೊತ್ತಿದೆ ಎಂದು ವಾದಿಸುತ್ತದೆ. ನನ್ನ ದೇಶಭಕ್ತಿಯು ಕೆಲವೊಮ್ಮೆ ಉದ್ದವಾಗಿದ್ದು, ಅದನ್ನು ವಿವರಿಸಲು ಒಂದು ಸುದೀರ್ಘ ಲೇಖನ ಸಾಕಾಗುವುದಿಲ್ಲ. ಆದರೆ ನಿನ್ನ ದೇಶಭಕ್ತಿಯು 'ಹೌದು' ಅಥವಾ 'ಪಾಕಿಸ್ತಾನ' ಎಂಬ ಎರಡು ಆಯ್ಕೆಗಳು ಮಾತ್ರ ಇರುವ ಟ್ವಿಟರ್‌ನಲ್ಲಿ ನಡೆಯುವ ಅಭಿಪ್ರಾಯ ಸಂಗ್ರಹವಾಗಿದೆ.

ನನ್ನ ದೇಶಭಕ್ತಿಗೆ ನಮ್ಮ ಶ್ರೀಮಂತ ಮತ್ತು ಸಂಕೀರ್ಣವಾದ ಇತಿಹಾಸದ ಬಗ್ಗೆ ಹೆಮ್ಮೆ ಇದ್ದರೆ, ನಿನ್ನ ದೇಶಭಕ್ತಿಯು ಅದನ್ನು ಬದಲಾಯಿಸಿ ಬರೆಯಬೇಕು ಅನ್ನುತ್ತದೆ.

ಎರಡು ವರ್ಷಗಳ ಹಿಂದೆ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಒಂದು ಭಾಷಣದಲ್ಲಿ "ಇದೇ ಅಮೆರಿಕ. ಹಳೆಯ ಫೋಟೋಗಳಲ್ಲ, ಬಣ್ಣ ಹಚ್ಚಿ ಬದಲಾಯಿಸಿದ ಇತಿಹಾಸವಲ್ಲ, ಅಥವಾ ನಮ್ಮಲ್ಲಿ ಕೆಲವರು ಮಾತ್ರ ಇತರರಿಗಿಂತ ಅಮೆರಿಕನ್ನರು ಎಂದು ಬಣ್ಣಿಸುವ ಪ್ರಯತ್ನಗಳಲ್ಲ, ನಾವು ಇತಿಹಾಸವನ್ನು ಗೌರವಿಸುತ್ತೇವೆ, ಆದರೆ ಅದಕ್ಕಾಗಿ ಕೊರಗುವವರಲ್ಲ, ಭವಿಷ್ಯದ ಬಗ್ಗೆ ನಾವು ಹೆದರುವವರಲ್ಲ, ಬದಲಾಗಿ ಅದನ್ನು ಸ್ವಾಗತಿಸುವವರು. ಅಮೆರಿಕ ದುರ್ಬಲವಲ್ಲ, ವಾಲ್ಟ್ ವಿಟ್ಮನ್ ಅವರು ಹೇಳಿರುವಂತೆ ನಾವು ಸಮಷ್ಟಿಯ ಹಿತವನ್ನು ಬಯಸುವ ವಿಶಾಲಹೃದಯವಂತರು. ನಾವು ಸದಾ ಮೊರೆವ, ವೈವಿಧ್ಯತೆಯನ್ನು ಹೊಂದಿರುವ, ಕಸುವು ತುಂಬಿರುವ, ಯೌವನದ ಚೇತನ ಹೊಂದಿರುವ ದೇಶ" ಎಂದಿದ್ದ ಮಾತುಗಳು ನನ್ನ ದೇಶಭಕ್ತಿಯ ಆಶಯಗಳನ್ನು ಬಿಂಬಿಸುತ್ತವೆ.

ನನ್ನ ದೇಶಭಕ್ತಿಯು ರವೀಂದ್ರನಾಥ ಟ್ಯಾಗೋರರು "ನಾನು ಬದುಕಿರುವವರೆಗೂ ಮಾನವೀಯತೆಗಿಂತ ದೇಶಭಕ್ತಿ ದಿಗ್ವಿಜಯ ಸಾಧಿಸಲು ಬಿಡುವುದಿಲ್ಲ" ಎಂದಿದ್ದ ಮಾತುಗಳನ್ನು ಸಮ್ಮತಿಸುತ್ತದೆ.


'ಮಾನವೀಯತೆ' ಎಂಬುದು ಮಾರಾಟವಾಗದೆ ಉಳಿದಿರುವ ಪರಿಕಲ್ಪನೆ ಎಂದು ನಿನ್ನ ದೇಶಭಕ್ತಿ ಭಾವಿಸುತ್ತದೆ. ನಿನ್ನ ದೇಶಭಕ್ತಿ ಭಾಷಣಗಳನ್ನು ಇಷ್ಟ ಪಡುವುದಿಲ್ಲ, ಬದಲಾಗಿ ಅದಕ್ಕೆ ಬೇಕಿರುವುದು 'ವಂದೇ, ವಂದೇ, ವಂದೇ' ಅಥವಾ 'ಮತ್ತೆ ಅಮೆರಿಕವನ್ನು ಗ್ರೇಟ್ ಮಾಡಿ' ಎಂಬ ಸ್ಲೋಗನ್‌ಗಳಷ್ಟೇ.



ನನ್ನ ದೇಶಭಕ್ತಿಯು ಸ್ವಯಂ ವಿಮರ್ಶೆಗೆ ಒಳಪಡುತ್ತದೆ; ನಮ್ಮ ತೆರೆದ ಗಾಯಗಳ ಬಗ್ಗೆ ಚಿಂತಿಸುತ್ತದೆ. ನಿನ್ನ ದೇಶಭಕ್ತಿಯು "ಭಾರತೀಯರು ಪ್ಲಾಸ್ಟಿಕ್ ಸರ್ಜರಿ ಕಂಡುಹಿಡಿದಿದ್ದರಿಂದ ಆ ಗಾಯಗಳನ್ನು ಸುಲಭವಾಗಿ ಮರೆಮಾಡಬಹುದು" ಎನ್ನುತ್ತದೆ.

ನನ್ನ ದೇಶಭಕ್ತಿಯು ಮೋದಿಯೂ ಅಲ್ಲ, ಜಿನ್ನಾನೂ ಅಲ್ಲ, ಬದಲಾಗಿ ಪ್ರತಿ ಭಾರತೀಯ. ನನ್ನ ದೇಶಭಕ್ತಿಯು ಇನ್ನಷ್ಟು ಒಳಗೊಳ್ಳುವಿಕೆಯನ್ನು ಬಯಸುತ್ತದೆ. ಆದರೆ ನಿನ್ನ ದೇಶಭಕ್ತಿಯ ಏಕೈಕ ನಕ್ಷತ್ರ ನೀನೊಬ್ಬನೆ. ನನ್ನ ದೇಶಭಕ್ತಿಯು ಮುಂದೆ ಬರಲಿರುವ ಕರಾಳ ದಿನಗಳ ಬಗ್ಗೆ ಆತಂಕಗೊಂಡಿದೆ. ಆದರೆ ನಿನ್ನ ದೇಶಭಕ್ತಿಯು ಈಗ ತನ್ನ ಸಮಯ ಬಂದಿದೆ ಎಂಬ ಭಾವನೆಯಲ್ಲಿದೆ.

ಸದ್ಯಕ್ಕೀಗ ನಿನ್ನ ದೇಶಭಕ್ತಿಯೇ ಗೆಲ್ಲುತ್ತಿದೆ." ■

ಶಿರಸಿ: ಕಾಂಗ್ರೆಸ್ ಕೊಳಕರ ಮುನ್ಸಿಪಾಲ್ಟಿ ಪಾಲಿಟಿಕ್ಸ್‌ನ ಕ್ಲೈಮಾಕ್ಸ್!!



ಶಿರಸಿ ಎಂದರೆ ಉತ್ತರ ಕನ್ನಡದ ರಾಜಕೀಯದ ರಾಜಧಾನಿ. ಪ್ರಮುಖ ಅಡಿಕೆ ಮಾರುಕಟ್ಟೆಯಾದ ಈ ಶಿರಸಿ ಸಕಲ ಪಕ್ಷದ ರಾಜಕಾರಣ ಧಾರಣೆಯಲ್ಲಿಯೂ ಅನಿರೀಕ್ಷಿತ, ಆಘಾತಕರ ಏರಿಳಿತ ಆಗುತ್ತಲೇ ಇರುತ್ತದೆ! ಬಿಜೆಪಿಯ ಎಬಿವಿಪಿ ಕ್ಯಾಡರಿನ ಚಿಡ್ಡಿ ಕಾಗೇರಿ ಮಾಣಿ ಎಂಬ ಗುಳ್ಳೆ ನರಿಯಣ್ಣ ಶಿರಸಿ ಶಾಸಕ, ರೌಡಿ ಎಂಪಿ ಅನಂತ್ಮಾಣಿ ಕೇಂದ್ರ ಸ್ಥಾನವೂ ಶಿರಸಿಯೇ. ಆದರೂ ಕಳೆದ ನಗರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಸಾಧಿಸಿದೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ನಾಯ್ಕನ ಒಣಪ್ರತಿಷ್ಠೆಯ ಹುಚ್ಚಾಟದ ಆಡಂಬೋಲದಂತಾಗಿರುವ ಶಿರಸಿ ನಗರಸಭೆ ಆಳ್ವಿಕೆ ಬಂಡುಕೋರ ಕಾಂಗ್ರೆಸಿಗರು ಮಾಡುತ್ತಿರುವುದು ಮಜ್‌ಮಜಾ ಆಗಿದೆ....

ಕಳೆದ ಸಲ ಕಾಗೇರಿ ಪಡೆದಿರುವುದು ಹೀನಾಯ ಗೆಲುವು. ಕಾಂಗ್ರೆಸ್ ಒಳಗಿನ ಕಾಲೆಳೆದಾಟದಿಂದ ಕಾಗೇರಿ ಮಾಣಿ ಬಚಾವಾಗಿದ್ದಾನೆ. ಆತನೆದುರು ಕೂದಲೆಳೆ ಅಂತರದಿಂದ ಸೋತ ಪುಂಡರ ಗಂಡು ಖ್ಯಾತಿಯ ದೀಪಕ್ ಹೊನ್ನಾವರ ರಸ್ತೆ ಅಪಘಾತದಲ್ಲಿ ಆಸುನೀಗಿದ್ದಾನೆ. ಕಾಂಗ್ರೆಸ್ ಟಿಕೆಟ್ ಮೇಲೆ ಕಣ್ಣಿಟ್ಟು ಹೊಂಚುಹಾಕಿದ್ದಾನೆ ಮೊದ್ಮಣಿ ನಡೆದಿತ್ತಲ್ಲ ಆಗಲೂ ಭೀಮಣ್ಣ ಮತ್ತಾತನ ಸ್ನಾಮಿತ್ರ-ತಾಲ್ಲೂಕು ಕಾಂಗ್ರೆ ಅಧ್ಯಕ್ಷ ರಮೇಶ್ ದುಬಾಶಿ ಎಂಬ ಸರ್ಕಾರಿ ಕಂಟ್ರಾಕ್ಟರ್ ಇದೇ ತಾರೀಬಾಗಿಲಿಗೆ ಮತ್ತೆ ಕಿರೀಟ ಕಟ್ಟಲು ಸಜ್ಜಾಗಿತ್ತು, ಆದರೆ ಹಗಲು ಕುಡುಕನಾದ ಈತನ ಕಂಡರೆ ಕಾಂಗ್ರೆಸ್‌ನ ಬಹುತೇಕ ನಗರಸಭಾ ಸದಸ್ಯರಿಗೆ ಆಗುತ್ತಿರಲಿಲ್ಲ, ಏಳು ಸದಸ್ಯರ ತಂಡ ಒಂದು ಭೀಮಣ್ಣ-ದುಬಾಶಿ-ತಾರೀಬಾಗಿಲು ಗ್ಯಾಂಗಿಗೆ ತಿರುಗಿ ಬಿದ್ದು ತೊಡೆತಟ್ಟಿತು. ಈ ಬಂಡುಕೋರರಿಗೆ ದೇಶಪಾಂಡೆ ವಿರೋಧಿಗಳಾದ ಯಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ್, ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದ ನಿವೇದಿತ್ ಆಳ್ವ, ಆತನ ತಾಯಿ ಮಾಜಿ ಸಂಸದೆ ಮಾರ್ಗರೆಟ್ ಆಳ್ವ ಬೆಂಗಾವಲಾಗಿ ನಿಂತರು. ದೇಶಪಾಂಡೆಯಿಂದಾಗಿಯೇ ತನಗೆ ಎಮ್ಮೆಲ್ಸಿ ಟಿಕೆಟ್ ತಪ್ಪಿತೆಂಬ ಆಕ್ರೋಶದಲ್ಲಿದ್ದ ರವೀಂದ್ರನಾಥ ನಾಯ್ಕ ಯಾನೆ ಎ. ರವೀಂದ್ರ ನಾಯ್ಕ ತನ್ನ ಶಿಷ್ಯ ಪ್ರದೀಪ್ ಶೆಟ್ಟಿಯನ್ನು ರೆಬೆಲ್ ಕೌನ್ಸಲರ್‌ಗಳ ಲೀಡರಾಗಿ ಮಾಡಿ ಸೂತ್ರ ಆಡಿಸತೊಡಗಿದ.

ದೇಶಪಾಂಡೆಗೆ ಒಳಸುಳಿಯ ಅಂದಾಜಾಗಿತ್ತು. ಆತ ಭೀಮಣ್ಣನ ಕರೆದು ತಾರೀಬಾಗಿಲ ಬದಲಿಗೆ ಸರ್ವಸಮ್ಮತ ಅಧ್ಯಕ್ಷ ಭೀಮಣ್ಣ ಬಂಡುಕೋರರ ಎದುರು ಶರಣಾಗುವಂತೆ ಮಾಡಿದೆ! ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಅಪಜಯ ಆಗುವುದು ಪಕ್ಕಾ ಆಗುತ್ತಿದ್ದಂತೆಯೇ ಬಂಡುಕೋರರು ಮಾಜಿ ಸಂಸದೆ ಮಾರ್ಗರೆಟ್ ಆಳ್ವರ ಪುತ್ರರತ್ನ ನಿವೇದಿತ್ ಆಳ್ವರ ಕೇರ್ ಆಫ್‌ನಲ್ಲಿ ಕೆಪಿಸಿಸಿ ಮಟ್ಟದಲ್ಲೇ ಮಸಲತ್ತು ಮಾಡಿದ್ದಾರೆ.




ಶಿರಸಿ ಅಸೆಂಬ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಹುರಿಯಾಳಾಗುವ ಆಸೆಯಲ್ಲಿರುವ ನಿವೇದಿತ್ ಆಳ್ವ ಸ್ಥಳೀಯವಾಗಿ ಬಲ ಬೆಳೆಸಿಕೊಳ್ಳಲು 'ನಗರಸಭೆ ನಾಟಕ' ಬಳಸಿಕೊಂಡಿದ್ದಾರೆ. ಮಾರ್ಗರೆಟ್ ಆಳ್ವ ಪಾರ್ಟ್‌ಟೈಮ್ ಪಾಲಿಟಿಕ್ಸ್‌ಗೆ ಜಾರಿದ ನಂತರವೂ ಜಿಲ್ಲೆಯಲ್ಲಿ ದೇಶಪಾಂಡೆ v/s ಮ್ಯಾಗಿ ಗುಂಪು ಗುದ್ದಾಟ ನಿಂತಿಲ್ಲ, ದೇಶಪಾಂಡೆ ಕಡೆಯ ಭೀಮಣ್ಣನ ಎದುರಾಗಿ ನಿವೇದಿತ್ ನಿಂತಿದ್ದಾನೆ. ಈ ಟಿಕೆಟ್ ಕಾಳಗವೀಗ ನಗರಸಭೆ ಪ್ರಹಸನಕ್ಕೆ ವಿಚಿತ್ರ ಆಯಾಮ ನೀಡಿದೆ. ನಿವೇದಿತ್ ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಹಿಡಿದುಕೊಂಡು ಪ್ರದೀಪ್ ಶೆಟ್ಟಿ ತಂಡದ ಅಮಾನತ್ತು ರದ್ದು ಮಾಡಿಸಲು ಲಾಬಿ ನಡೆಸಿದ್ದಾರೆ. ಅಷ್ಟೇ ಅಲ್ಲ, ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿರುವ ವಿಪ್ ಉಲ್ಲಂಘನೆ

ಕೆಪಿಸಿಸಿ ಸೂಚನೆ ಒಪ್ಪುವಂಥದ್ದಲ್ಲ ಎಂಬರ್ಥದ ಒಕ್ಕ ಪತ್ರ ತಯಾರಿಸಿ ಕೆಪಿಸಿಸಿಗೆ ರವಾನಿಸಿದೆ ಭೀಮಣ್ಣನ ಡಿಸಿ

"ಶಿಸ್ತು ಕ್ರಮ ಹಿಂದಕ್ಕೆ ಪಡೆಯಿರಿ. ವಿಪ್ ಉಲ್ಲ ದಾವೆ ವಾಪಸ್ ಪಡೆಯಿರಿ. ನಾವು ಕಾಂಗ್ರೆಸಲ್ಲೇ ಇರ್ತ ಎಂದು ತಪ್ಪೊಪ್ಪಿಗೆ ಪ್ರದೀಪ್ ಶೆಟ್ಟಿ ಪಡೆ ಕೆಪಿಸಿಸಿ ಮುಂದಿಟ್ಟಿತ್ತು, ಆದರೆ ಡಿಸಿಸಿ ಅಂದರೆ ಭೀಮಣ್ಣ ತ ಎದುರು ಮಂಡಿವೂರಲಿಲ್ಲ, ಇದು ಭೀಮಣ್ಣನಿಗಿಂತ ಉರಿಸಿದ್ದು ತಾಲ್ಲೂಕಾ ಕಾಂಗ್ರೆಸ್ ಅಧ್ಯಕ್ಷನೂ ಕಂಟ್ರಾಕ್ಟರನೂ ಆದ ರಮೇಶ್ ದುಬಾಶಿಯನ್ನು. ಹಂತದಲ್ಲಿ ಭೀಮಣ್ಣ ಇಡೀ ವ್ಯಾಜ್ಯ ಅಂತ್ಯಗೊಳಿ ಯೋಚಿಸಿಯೂ ಆಗಿತ್ತು, ಕಾಂಗ್ರೆಸ್ ಕ್ಯಾಂಡಿಡೇಟಾ ಉತ್ಸಾಹದಲ್ಲಿರುವ ಭೀಮಣ್ಣನಿಗೆ ಇದೆಲ್ಲ ಬೇ ಉಸಾಬರಿ. ಹಾಗಾಗಿ ಆತ ಕೆಪಿಸಿಸಿ ಪತ್ರಕ್ಕೆ ಸ ಸೂಚಿಸಲು ಮುಂದಾಗಿದ್ದರು. ಆದರೆ ರಮೇಶ್ ದು ಮೊದ್ಮಣಿ ಭೀಮಣ್ಣನ ಹಿಂದೆಳೆದು ನಿಲ್ಲಿಸಿದ್ದಾರೆ. ದುಬಾ ಬ್ಲಾಕ್-ಕೋರ್ ಕಮಿಟಿ- ನಮ್ಮಲ್ಲಿ ಕ್ಷಮೆ ಕೇಳದ ಉದ ಮತ್ತೆ ಪಾರ್ಟಿಗೆ ಸೇರಿಸಿಕೊಳ್ಳೋದು ಸರಿಯಲ್ಲ ಎ ಠರಾಯಿ ಕೆಪಿಸಿಗೆ ಕಳಿಸುವಂತೆ ಡಿಸಿಸಿಗೆ ಕೊಟ್ಟಿದೆ.

ಅಲ್ಲಿಗೆ ಮತ್ತದೇ ಮ್ಯಾಗಿ v/s ದೇಶಪಾಂಡೆ ಕ ಜಿಲ್ಲಾ ಕಾಂಗ್ರೆಸ್‌ನಲ್ಲಿ ಭುಗಿಲೆದ್ದಂತಾಗಿದೆ. ಮ್ಯಾಗಿ ಬಣದ ಬ್ಲಾಕ್ ಕಾಂಗ್ರೆಸ್‌ನ ಅಡುಗೆಗಾರ ಅಧ್ಯಕ್ಷರನ್ನು ಕೆಪಿಸಿಸಿಯ ಬದಲಾಯಿಸಿಕೊಂಡು ಬಂದಂತೆ ದೇಶಪಾ ಕ್ಷಣಾರ್ಧದಲ್ಲಿ ರದ್ದು ಮಾಡಿಸುತ್ತ ಬಂದಿದ್ದಾರೆ. ಅಂಥದೇ ಅಸಡ್ಡಾಳ ಕಾರ್ಯಾಚರಣೆ ಶುರುವಾಗಿದೆ. ದೇಶಪಾಂಡೆ ತಮಗೆ ಕಾಂಗ್ರೆಸ್ ಸೇರಲು ಬಿಡಲಾರ; ಕೌನ್ಸಿಲರ್‌ಗಿರಿಗೂ ಆತ ಕಂಟಕ ತರುತ್ತಾನೆಂಬುದು ಪ್ರ ಶೆಟ್ಟಿ ಮಿತ್ರಮಂಡಳಿಗೆ ಖಾತ್ರಿಯಾಗಿದೆ. ಹಾಗಾಗಿ ಬಚಾ ಭೀಮಣ್ಣನನ್ನೇ ಕಾನೂನಿನ ಇಕ್ಕಳಕ್ಕೆ ಸಿಲುಕಿಸಲು ದೇಶಪಾ ವಿರೋಧಿ ಪಡೆ ಸ್ಕೆಚ್ ಹಾಕಿದೆ. ಭೀಮಣ್ಣ ನ್ಯಾಯಾಲ ಕೇಸುಗಳಿಗಷ್ಟೇ ಹೆದರಿ ಗಡುಗುಡುತ್ತಾನೆಂಬ ಆತನ ದೌ



ಭೀಮಣ್ಣ ಶಿರಸಿ ಕಾಂಗ್ರೆಸ್‌ನ ಗುದುಮುರಿಗೆಯ ಅಡ್ಡ ಪರಿಣಾಮಗಳೆಲ್ಲ ನೇರವಾಗಿ ಬಾಧಿಸುವುದು ಈ ಭೀಮಣ್ಣನನ್ನೇ. 'ಬಂ' ಭಾಮೈದನೆಂಬ ಮೆರಿಟ್‌ನಿಂದ ರಾಜಕಾರಣದ ಪಡಸಾಲೆಯಲ್ಲಿ ಪ್ರಸಿದ್ಧಿಗೆ ಬಂದ ಭೀಮಣ್ಣ ಜಿಲ್ಲಾ ಕಾಂಗ್ರೆಸ್ ಡಾನ್ ದೇಶಪಾಂಡೆ ಸಾಹೇಬರ ನಂಬಿ ಕೂತಿದ್ದಾನೆ. ಕಳೆದ ಬಾರಿಯಂತೆ ದೇಶಪಾಂಡೆ ಈ ಬಾರಿಯೂ ದಡ್ಡ ಶಿಖಾಮಣಿ ಭೀಮಣ್ಣನ ನಂಬಿಸಿ ಕೊರಳು ಕೊಯ್ಯುವರಾ? ಟಿಕೆಟ್ಟು ಕೊಡಿಸುವರಾ? ಕಾಲ ಒಂದೇ ಬಲ್ಲದು. ಹಾಗೆಂಬುದು ಜಿಲ್ಲಾ ರಾಜಕಾರಣದ ಬಹು ಚರ್ಚಿತ ಸಂಗತಿ.

ಶಿರಸಿ-ಸಿದ್ದಾಪುರ ಕಾಂಗ್ರೆಸ್‌ನ ಅಷ್ಟೂ ಆಗು-ಹೋಗು ತನ್ನ ಇಚ್ಛೆಯಂತೆಯೇ ನಡೆಯಬೇಕೆಂದು ಬಯಸುವ ಭೀಮಣ್ಣನಿಗೆ ಕಾಂಗ್ರೆಸ್ ರಾಜಕಾರಣವೆಂದರೆ ಹೆಂಡೋದ್ಯಮದಷ್ಟು ಸಲೀಸಲ್ಲ ಎಂಬ ಅರಿವು ಈಗಾಗಿದೆ. ಲ್ಯಾಂಡ್ ಮಾಫಿಯಾದ ಹಿಡಿತಕ್ಕೆ ಸಿಲುಕಿರುವ ಭೀಮಣ್ಣ ಮೊದಲ ಬಾರಿ ನಗರಸಭೆ ಅಧ್ಯಕ್ಷನಾಗಿ ಪ್ರತಿಷ್ಠಾಪಿಸಿದ್ದು ಶ್ರೀಕಾಂತ ತಾರೀಬಾಗಿಲು ಎಂಬ ಭೂ ಭಾನ್ಗಡಿದಾರರ ಕಣ್ಮಣಿಯನ್ನು. ಜನತಾದಳದ ಬೈಪ್ರಾಡಕ್ಟ್ ಆದ ಈ ತಾರೀಬಾಗಿಲು ಅಧ್ಯಕ್ಷನಾಗಿದ್ದಾಗ ಲ್ಯಾಂಡ್ ಲಫಡಾದಾರರಿಗೆ ನೆರವಾಗಿ ದುಂಡಗಾದ-ತನ್ನ ಭೂದಂಧೆ ವೃದ್ಧಿಸಿಕೊಂಡ ನೂರಾರು ಕತೆಗಳಿವೆ. ಬಲಾಢ್ಯ ಭೀಮಣ್ಣನ ರಾಜಾಶ್ರಯ ಸಿಗುವುದರಿಂದ ಗುರು ಮಾಜಿ ಮಂತ್ರಿ ಪಿ.ಎಸ್. ಜೈವಂತ್ ಕಾಂಗ್ರೆಸ್‌ಗೆ ಬೈ ಹೇಳಿದರೂ ಈತ ಮಾತ್ರ ಜೆಡಿಎಸ್‌ಗೆ ಹೋಗಿಲ್ಲ, ತಾರೀಬಾಗಿಲು ನಗರಸಭೆ ಅಧಿನಾಯಕನಾಗಿದ್ದಾಗ ಭೂಮಾಫಿಯಾದ ಅಕ್ರಮ ಆಟಗಳೆಲ್ಲ ಅಡೆತಡೆಯಿಲ್ಲದೆ ಸಲೀಸಾಗಿ ನಡೆದುಕೊಂಡಿತ್ತು.

ಬರೋಬ್ಬರಿ ಒಂದು ವರ್ಷದ ಹಿಂದೆ ನಗರಸಭೆಯ ಎರಡನೇ ಅವಧಿಗೆ ಅಧ್ಯಕ್ಷ-ಉಪಾಧ್ಯಕ್ಷ ಆಯ್ಕೆ ಮೇಲಾಟ ಅಭ್ಯರ್ಥಿ ಕಣಕ್ಕಿಳಿಸಲು ತಾಕೀತು ಮಾಡಿದರು. ಲ್ಯಾಂಡ್‌ಮಾಫಿಯಾ ಜಗದೀಶ ಗೌಡನನ್ನು ತಮ್ಮ ಡಾರ್ಕ್‌ಹಾರ್ಸ್ ಎಂದು ಘೋಷಿಸಿತು. ಇದಕ್ಕೆ ಪ್ರದೀಪ್ ಶೆಟ್ಟಿ ಬಣದ ಕೌನ್ಸಲರ್‌ಗಳು ಒಪ್ಪಲು ರೆಡಿಯಾಗಲಿಲ್ಲ, ಯಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ್ ಬಿಜೆಪಿ ಸಂಸದ ಅನಂತ್ಮಾಣಿ ಮನೆಗೆ ಹೋಗಿ ಬಿಜೆಪಿ ಬೆಂಬಲ ಪಡೆಯಲು ತಂತ್ರ ಹೆಣೆದರು. ಬಂಡಾಯಗಾರರ ಮುಂದಾಳು ಪ್ರದೀಪ್ ಶೆಟ್ಟಿ ಚಿಡ್ಡಿ ಸಹಕಾರದಿಂದ ನಗರಸಭೆ ಅಧ್ಯಕ್ಷರಾಗಿ ಆಯ್ಕೆಯಾಗಿ ಹೋದ! ಹೆಬ್ಬಾರ್-ಅನಂತ್ಮಾಣಿಗಳ ರಾತ್ರಿ ರಾಜಕೀಯ ಯಶಸ್ವಿಯಾಗಿ ಮಂತ್ರಿ ದೇಶಪಾಂಡೆ ಬಳಗಕ್ಕೆ ಪ್ರಚಂಡ ಪರಾಭವವೇ ಆಗಿಹೋಯಿತು!

ಆ ನಂತರ ಶಿರಸಿ ಕಾಂಗ್ರೆಸ್‌ನಲ್ಲಿ ನಡೆದದ್ದೆಲ್ಲವೂ ಸೇಡಿನ ರಾಜಕಾರಣ. ಏಳು ಬಂಡಕೋರರ ನಗರಸಭಾ ಸದಸ್ಯತ್ವಕ್ಕೆ ಸಂಚಕಾರ ತರುವ ಹಠಕ್ಕೆ ಬಿದ್ದಿತು ಭೀಮಣ್ಣ-ದುಬಾಶಿ ಅಂಡ್ ಕಂಪನಿ! ಪಕ್ಷದ ವಿಪ್ ಉಲ್ಲಂಘಿಸಿ ಬಂಡುಕೋರನ ಆಯ್ಕೆಗೆ ನೆರವಾಗಿದ್ದಾರೆಂಬ ಆರೋಪದ ದಾವೆ ಜಿಲ್ಲಾ ದಂಡಾಧಿಕಾರಿ ನ್ಯಾಯಾಲಯದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನೂ ಆದ ಭೀಮಣ್ಣ ಹೂಡಿದ. ಪಕ್ಷಕ್ಕೆ ಹಾನಿ ಮಾಡಿದ ಈ ಶಿಸ್ತುಗೇಡಿ ದ್ರೋಹಿಗಳ ಕೌನ್ಸಲ್‌ಗಿರಿ ರದ್ದು ಮಾಡಬೇಕೆಂದು ಭೀಮಣ್ಣ ನಡೆಸಿದ ಕೇಸಿನ ವಿಚಾರಣೆ ವರ್ಷಗಟ್ಟಲೆ ನಡೆದು ಈಗ ತೀರ್ಪಿನ ಹಂತಕ್ಕೆ ಬಂದು ನಿಂತಿದೆ.

ಇನ್ನೇನು ಜಿಲ್ಲಾಧಿಕಾರಿ ಇವತ್ತೋ, ನಾಳೆಯೋ ತೀರ್ಪು ಬರೆದು ನಗರಸಭೆ ಅಧ್ಯಕ್ಷ ಪ್ರದೀಪ್ ಶೆಟ್ಟಿ ಮತ್ತವನ ಆರು ಸಂಗಡಿಗರ ಸದಸ್ಯತ್ವವೇ ರದ್ದಾಗುತ್ತದೆಂದು ಭೀಮಣ್ಣ-ದುಬಾಶಿ ದಿನಗಣನೆ ಮಾಡತೊಡಗಿದ್ದರು. ಆದರೆ ಇಡೀ ಪ್ರಕರಣಕ್ಕೆ ಅಚ್ಚರಿಯ ತಿರುವೊಂದು ಬಂದಿದೆ. ದಿಗ್ವಿಜಯದ ಹೊಸ್ತಿಲಲ್ಲಿ ನಿಂತು ಬೀಗುತ್ತಿದ್ದ ಭೀಮಣ್ಣನ ಬಣ ಊರುಭಂಗವಾದಂತಾಗಿದೆ! ಖುದ್ದು ಕೆಪಿಸಿಸಿಯೇ ಡಿಸಿಸಿ ಆರೋಪದ ಸದಸ್ಯತ್ವ ಅನೂರ್ಜಿತ ಬೇಡಿಕೆ ದಾವೆಯನ್ನೂ ಹಿಂಪಡೆವಂತೆ ಮಾಡಲು ತಂತ್ರ ಮಾಡಿದ್ದಾರೆ. ಈ ಆ್ಯಂಟಿ ದೇಶಪಾಂಡೆ ಕಾರ್ಯಾಚರಣೆಯಲ್ಲಿ ನಿವೇದಿತ್ ಆಳ್ವ ಯಶಸ್ವಿಯೂ ಆಗಿದ್ದಾರೆ.

ಕೆಪಿಸಿಸಿ ಅಧ್ಯಕ್ಷರ ನಿರ್ದೇಶನದಂತೆ ಪ್ರಧಾನ ಕಾರ್ಯದರ್ಶಿ ಎಸ್.ಎಸ್.ಬೋಸರಾಜು ಡಿಸಿಸಿ ಕಿಂಗ್ ಭೀಮಣ್ಣ ನಾಯ್ಕಗೆ ಒಂದು ಪತ್ರ ಬರೆದು-ಬಂಡುಗಾರರ ಕ್ಷಮಿಸಿ ಪಕ್ಷದಲ್ಲೇ ಉಳಿಸಿಕೊಳ್ಳುವ ಪ್ರಕ್ರಿಯೆ ಮಾಡುವಂತೆ ತಾಕೀತು ಮಾಡಿದ್ದಾರೆ. ಅಸೆಂಬ್ಲಿ ಎಲೆಕ್ಷನ್ ಹತ್ತಿರ ಬರುತ್ತಿರುವುದರಿಂದ ಪಕ್ಷದ ಹಿತದೃಷ್ಟಿಯಿಂದ ಕ್ಷಮಾದಾನ ಅನಿವಾರ್ಯ ಎಂದಿರುವ ಕೆಪಿಸಿಸಿ ಏಳು ರೆಬೆಲ್‌ಗಳ ಸದಸ್ಯತ್ವ ಅನೂರ್ಜಿತ ಕೋರಿ ಸಲ್ಲಿಸಲಾದ ದಾವೆಯನ್ನು ಹಿಂದಕ್ಕೆ ಪಡೆಯಿರಿ ಎಂದು ಹೇಳಿದೆ, ಪ್ರದೀಪ್ ಶೆಟ್ಟಿ ಮತ್ತವರ ಸಂಗಡಿಗರ ಮೆಂಬರಿಕೆ ರದ್ದಾದರೆ ಶಿರಸಿ ನಗರಸಭೆಯ ಆಧಿಕಾರ ಕಾಂಗ್ರೆಸ್ ಕೈ ತಪ್ಪುತ್ತದೆ. ಆದ್ದರಿಂದ 'ಕ್ಷಮೆ' ನೀಡಿ 'ರಾಜಿ' ಮಾಡಿಕೊಳ್ಳುವುದೇ ಲೇಸೆಂದು 'ಗೀತೋಪದೇಶ' ಮಾಡಿದೆ!

ಈ ಅನಿರೀಕ್ಷಿತ ಸಂದೇಶ ಕಂಡಿದ್ದೇ ಕಂಗಾಲಾಗಿದ್ದಾರೆ ಭೀಮಣ್ಣ-ದುಬಾಶಿ ಮತ್ತವರ ಸಹಚರರು. ಓಡೋಡಿ ಬಿಗ್‌ಬಾಸ್ ದೇಶಪಾಂಡೆ ಸಾಹೇಬರ ಸಂಧಿಸಿದ್ದಾರೆ. ತನ್ನನ್ನು ಓವರ್‌ಟೇಕ್ ಮಾಡಿ ಕರಾಮತ್ತು ನಡೆಸಿದ ನಿವೇದಿತ್‌ನ ಮೇಲೆ ಕೆಂಡವಾಗಿದ್ದಾರೆ. "ನನ್ನ ತಾಕತ್ತು ಜಾಸ್ತಿಯಾ....? ಆ ಬಚ್ಚೆ ನಿವೇದಿತ್‌ನ ತೂಕ ಹೆಚ್ಚಾ....? ನಾನೂ ನೋಡ್ತೇನೆ.... ದಾವೆ ವಾಪಸ್ ಪಡೀಬೇಡಿ..." ಎಂದು ಭೀಮಣ್ಣ-ದುಬಾಶಿಗೆ ಕುಮ್ಮಕ್ಕು ಕೊಟ್ಟಿದ್ದಾರೆ. ದೇಶಪಾಂಡೆಯ ಬಲ ಸಿಕ್ಕಿದ್ದೇ ತಡ, ಭೀಮಣ್ಣನ ಬಣ ಕೆಪಿಸಿಸಿ ಆದೇಶ ಧಿಕ್ಕರಿಸಿ ಠರಾವು ಮಾಡಿದೆ. ಬಂಡುಕೋರರಿಂದ ಪಾರ್ಟಿಗೆ ದೊಡ್ಡ ಡ್ಯಾಮೇಜ್ ಆಗಿದೆ. ಹಾಗಾಗಿ ಅವರ ಕ್ಷಮಿಸುವ ಪ್ರಮೇಯವೇ ಬರದು.


ಗೊತ್ತಿರುವುದು ರವಿ ನಾಯ್ಕನಿಗೆ ಮಾತ್ರ. ಅ ಸಲಹೆಯಂತೆಯೇ ಈಗ ಪ್ರದೀಪ್ ಶೆಟ್ಟಿ ಪಡೆ ಭೀಮ ಮೇಲೆ 'ಫೋರ್ಜರಿ ಕೇಸ್' ದಾಖಲಿಸಲಾಗಿದೆ! ಭೀ ತತ್ತರಿಸಿಹೋಗಿದ್ದಾನೆ!

ಪ್ರದೀಪ್ ಶೆಟ್ಟಿ ಮತ್ತವನ ಸಹಚರರ ಸದಸ್ಯತ್ವ ವ್ಯಾಜ್ಯದ ವಿಚಾರಣೆಯಲ್ಲಿ ಡಿಸಿಸಿ ಅಧ್ಯಕ್ಷ ಭೀಮಣ್ಣ ನಾ ಬಂಡುಗಾರರು ವಿಪ್ ಉಲ್ಲಂಘಿಸಿದ್ದಾರೆ ಎಂದು ಹೇಳಿ ಆದಕ್ಕೆ ದಾಖಲೆಯಾಗಿ ವಿಪ್ ಜಾರಿಯಾದ ಬಗ್ಗೆ ಸ್ವೀ ಪತ್ರ ಸದಸ್ಯರಿಂದ ಪಡೆಯಲಾಗಿದೆ ಎಂದು ಹೇಳಿ ಅಷ್ಟೇ ಅಲ್ಲ ಆ ದಾಖಲೆಯೂ ಕೊಟ್ಟಿದ್ದರು. ಇದೇ ಭೀಮಣ್ಣನಿಗೆ ಗಂಡಾಂತರಕಾರಿಯಾಗಿದೆ. ಇದು ಸ್ವೀಕೃತಿ ಪತ್ರ, ನಾವ್ಯಾರೂ ವಿಪ್ ಪಡೆದೇ ಇಲ್ಲ; ನಮಗ ವಿಪ್ ಜಾರಿ ಇಲ್ಲ, ನಮ್ಮ ಸಹಿ ಫೋರ್ಜರಿ ಮಾಡಲ ಎಂದು ಪ್ರದೀಪ್ ಶೆಟ್ಟಿ ಮತ್ತು ಇತರ ನಾಲ್ವರು ಸದ ಹುಯಿಲೆಬ್ಬಿಸಿದ್ದಾರೆ. ನಮ್ಮ ಸಹಿ ಭೀಮಣ್ಣ ನಾಯ್ಕ ಅಂದು ನಗರಸಭೆ ಅಧ್ಯಕ್ಷ ಆಕಾಂಕ್ಷಿಯಾಗಿದ್ದ ಜಗದ ಗೌಡ ಸೇರಿ ಫೋರ್ಜರಿ ಮಾಡಿದ್ದಾರೆಂದು ಪ್ರದ ಶೆಟ್ಟಿ ಮತ್ತು ನಾಲ್ವರು ಸದಸ್ಯರು ಈಗ ಶಿರಸಿಯ ಹೆಚ್ಚ ಜಿಲ್ಲಾ ನ್ಯಾಯಾಲಯದಲ್ಲಿ ಕೇಸು ಹಾಕಿದ್ದಾರೆ.

ಈಗ ಪ್ರತಿಷ್ಠೆಯ ಪಣ ಗೌಣವಾಗಿ ಬಚಾವಿಗೆ ಎರ ಕಡೆಯವರು ತಿಣುಕಾಡುವ ಪರಿಸ್ಥಿತಿ ಬಂದಿದೆ. ಪ ಪಳಗಿಸಲು ನಡೆದಿರುವ ಈ ಜಿದ್ದಾಜಿದ್ದಿಯ ನೈಚ್ಯಾನುಸಂಧಾನವೇ ಅಂತಿಮ ಪರಿಹಾರ. ಹಾ ಕಾಂಗ್ರೆಸ್ ಪಡಸಾಲೆಯಲ್ಲೇ ಚರ್ಚೆಗಳು ನಡೆದಿದೆ. ಕುತೂಹಲವಂತೂ ಏರ್ಪಟ್ಟಿದೆ. ಮ್ಯಾಗಿ ಗ್ಯಾಂಗಿನ ಪ್ರದ ಶೆಟ್ಟಿ ಪಟ್ಟ ಉಳಿಸಿಕೊಳ್ಳುವನಾ? ದೇಶಪಾಂಡೆ ಬಣದ ನಗರಸಭೆ ಸೂಪರ್‌ಸೀಡ್ ಮಾಡಿಸುವರಾ?

■ ನಹ

ನಾಗಮಂಗಲ: ಚಲುವಣ್ಣನ ಗರ್ವಭಂಗಕ್ಕೆ ಗೌಡರ ಶಪಥ



ನಾಗಮಂಗಲದ ಮಟ್ಟಿಗೆ ಗೌಡರ ಚಾಣಾಕ್ಷ ತಂತ್ರಗಳು ಒಂದೊಂದಾಗಿ ಗರಿಗೆದರಿಕೊಳ್ಳುತ್ತಿವೆ. ತಮ್ಮ ವಿರುದ್ಧವೇ ತೊಡೆ ತಟ್ಟಿ ನಿಂತಿರುವ ಚಲುವನ ತೊಡೆ ಮುರಿದು ಗರ್ವಭಂಗ ಮಾಡಲು ಶಪಥ ಮಾಡಿರುವ ದೇವೇಗೌಡ ಹಾಗೂ ಕುಮಾರಸ್ವಾಮಿ ಅದರ ಭಾಗವಾಗಿಯೇ ಕಾಂಗ್ರೆಸ್‌ನಲ್ಲಿದ್ದ ಮಾಜಿ ಶಾಸಕರಾದ ಸುರೇಶ್ ಗೌಡ ಮತ್ತು ಎಲ್.ಆರ್.ಶಿವರಾಮೇಗೌಡನನ್ನು ಏಪ್ರಿಲ್ 10ರಂದು ಜೆಡಿಎಸ್ ಪಕ್ಷಕ್ಕೆ ಸೇರಿಸಿಕೊಂಡಿದ್ದಾರೆ. ಚಲುವರಾಯಸ್ವಾಮಿ ನಾಯಕತ್ವದ ಸಪ್ತ ಶಾಸಕರು ಅಂತಿಮವಾಗಿ ದೇವೇಗೌಡರು ಮನಸ್ಸು ಬದಲಿಸಿ ಜೆಡಿಎಸ್‌ನಲ್ಲೇ ಇರುವಂತೆ ಹೇಳುತ್ತಾರೆಂದು ಆಸೆಗಣ್ಣಿನಿಂದ ಕಾದು ಕೂತಿದ್ದರು. ಆದರೆ ಸುರೇಶ್ ಗೌಡ-ಶಿವರಾಮೇಗೌಡರನ್ನು ಜೆಡಿಎಸ್‌ಗೆ ಸೇರಿಸಿಕೊಂಡ ದಿನ ಬಂಡಾಯ ಶಾಸಕರ ಕನಸು ನುಚ್ಚು ನೂರಾಯಿತು. "ಯುಗಾದಿ ಮುಗಿದ ನಂತರ ನನ್ನ ರಾಜಕೀಯ ತೀರ್ಮಾನ ಹೇಳುತ್ತೇನೆ" ಎಂದಿದ್ದ ಶಾಸಕ ಚಲುವರಾಯಸ್ವಾಮಿ, ನಿರ್ಧಾರ ತೆಗೆದುಕೊಳ್ಳುವ ಮುನ್ನವೇ ದೊಡ್ಡಗೌಡರು ಶಾಕ್ ಕೊಟ್ಟಿದ್ದಾರೆ. ಚಲುವರಾಯಸ್ವಾಮಿ ಏನೂ ಸುಮ್ಮನೇ ಕೂತಿಲ್ಲ, ಅವರಿಬ್ಬರು ಜೆಡಿಎಸ್ ಸೇರ್ಪಡೆಯಾದ ನಾಲ್ಕೇ ದಿನಕ್ಕೆ ಏಪ್ರಿಲ್ 14ರ ಅಂಬೇಡ್ಕರ್ ಜಯಂತಿಯ ನೆಪದಲ್ಲಿ ನಾಗಮಂಗಲದಲ್ಲಿ ಒಂದು ಭರ್ಜರಿ ಬಾಡೂಟ ಹಾಕಿಸಿ 15 ಸಾವಿರ ಜನರನ್ನು ಸೇರಿಸಿ ಶಕ್ತಿ ಪ್ರದರ್ಶಿಸಿ ಅಪ್ಪ-ಮಗನಿಗೆ ರಣವೀಳ್ಯ ಕೊಟ್ಟಿದ್ದಾರೆ.

ದೇವೇಗೌಡರ ಬ್ರಹ್ಮಾಸ್ತ್ರ

ಜೆಡಿಎಸ್‌ಗೆ ದ್ರೋಹ ಬಗೆದಿದ್ದಲ್ಲದೆ ತನ್ನ ವಿರುದ್ಧವೇ ತೊಡೆ ತಟ್ಟಿ ಸಿಕ್ಕಸಿಕ್ಕ ಕಡೆಯೆಲ್ಲ ವಾಚಾಮಗೋಚರವಾಗಿ ಬೈಯುತ್ತಿದ್ದ ಚಲುವ ಅಂಡ್ ಟೀಂನ ಸದಸ್ಯರಾದ ಜಮೀರ್, ಬಾಲಕೃಷ್ಣನಿಗೆ ಸರಿಯಾದ ಪಾಠ ಕಲಿಸಲು ಕಾಯುತ್ತಿದ್ದ ದೇವೇಗೌಡರು ಮೊದಲ ಬಾಣವನ್ನು ಚಲುವರಾಯಸ್ವಾಮಿಯ ಮೇಲೆ ಪ್ರಯೋಗಿಸಿದ್ದಾರೆ. ಮುಂಬರುವ ಚುನಾವಣೆಯಲ್ಲಿ ನಾಗಮಂಗಲ ಕ್ಷೇತ್ರದಲ್ಲಿ ಚಲುವನನ್ನು ಮಕಾಡೆ ಮಲಗಿಸಲು ಸುರೇಶ್ ಗೌಡ-ಶಿವರಾಮೇಗೌಡ ಒಂದಾಗಬೇಕು ಎಂದು ತೀರ್ಮಾನಿಸಿದ ದೊಡ್ಡಗೌಡರು ಅದರಂತೆ ಅವರಿಬ್ಬರನ್ನು ಒಂದಾಗಿಸಿ ಜೆಡಿಎಸ್ ತೆಕ್ಕೆಗೆ ತಂದು ಚಲುವಣ್ಣನ ಬುಡಕ್ಕೆ ಬಿಸಿನೀರು ಬಿಟ್ಟಿದ್ದಾರೆ.

ರಾಜ್ಯಸಭೆ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್‌ನ ರಾಮಮೂರ್ತಿಯ ಹಣದ ಥೈಲಿಗೆ ಶರಣಾಗಿ ಆತನಿಗೆ ಮತ ಹಾಕಿದ ಚಲುವರಾಯಸ್ವಾಮಿ, ಬಾಲಕೃಷ್ಣ ಜಮೀರ್, ಅಖಂಡ ಶ್ರೀನಿವಾಸಮೂರ್ತಿ, ಭೀಮಾನಾಯಕ್, ಇಕ್ಬಾಲ್ ಅನ್ಸಾರಿ, ರಮೇಶ್‌ಬಾಬು ಬಂಡಿಸಿದ್ದೇಗೌಡ, ಗೋಪಾಲಯ್ಯ ಜೆಡಿಎಸ್ ಅಭ್ಯರ್ಥಿ ಫಾರೂಕ್‌ಗೆ ಕೈಕೊಟ್ಟಿದ್ದರು. ಇದರಿಂದ ಸಿಟ್ಟಾದ ದೊಡ್ಡಗೌಡರು ಆ ಏಳು ಶಾಸಕರನ್ನು ಪಕ್ಷದಿಂದ ಅಮಾನತು ಮಾಡಿದ್ದರು. ಅದರಲ್ಲಿ ಗೋಪಾಲಯ್ಯ ಗೌಡರ ಕಾಲಿಗೆ ಬಿದ್ದು ಕ್ಷಮಾಪಣೆ ಕೇಳಿ ಜೆಡಿಎಸ್ ಸೇರಿಕೊಂಡ. ಗೋಪಾಲಯ್ಯನಂತೆಯೇ ತಮ್ಮನ್ನೂ ಮನ್ನಿಸಿ ವಾಪಾಸ್ ಕರೆಯುತ್ತಾರೆ ಅಂತ ಕಾದು ಕುಳಿತಿದ್ದ ಬಂಡಾಯಗಾರರ ನಿರೀಕ್ಷೆ ಸುಳ್ಳಾಗಿದೆ.

ಜೆಡಿಎಸ್ ಬಂಡಾಯಗಾರರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಕಾಂಗ್ರೆಸ್ ನಾಯಕರು ಹಸಿರು ನಿಶಾನೆ ತೋರಿಸುತ್ತಿದ್ದಂತೆಯೇ ಸಿಕ್ಕಸಿಕ್ಕ ಕಡೆ ದೇವೇಗೌಡ ಹಾಗೂ ಕುಮಾರಸ್ವಾಮಿಯ ಮೇಲೆ ಮಾತಿನ ಪ್ರಹಾರವನ್ನೇ ನಡೆಸುತ್ತಿದ್ದರು. ಚಲುವರಾಯಸ್ವಾಮಿ ಕೂಡ 'ನಮ್ಮನ್ನು ಜೆಡಿಎಸ್‌ಗೆ ಸೇರಿಸಿಕೊಳ್ಳಿ ಎಂದು ಅರ್ಜಿ ಹಾಕಿಲ್ಲ' ಎಂದು ಮುಖಕ್ಕೆ ಹೊಡೆದಂತೆ ಹೇಳುತ್ತಿದ್ದರು. ಕಾಂಗ್ರೆಸ್ ನಾಯಕರು ನಮ್ಮ ಕೈ ಬಿಡುವುದಿಲ್ಲ ಎಂದು ನಂಬಿದ್ದ ಚಲುವ ಅಂಡ್ ಟೀಂಗೆ ಸಿಎಂ ಸಿದ್ದರಾಮಯ್ಯ ಹಾಗೂ ದೇವೇಗೌಡರು ಮಿತ್ರರಾಗಿರುವುದು ನುಂಗಲಾರದ ಬಿಸಿ ತುಪ್ಪದಂತಾಗಿದೆ. ಗುಂಡ್ಲುಪೇಟೆ, ನಂಜನಗೂಡಿನಲ್ಲಿ ಜೆಡಿಎಸ್‌ನ ಸಹಕಾರದಿಂದ ಕಾಂಗ್ರೆಸ್ ಅಭ್ಯರ್ಥಿಗಳಿಬ್ಬರು ಗೆದ್ದಿರುವುದು, ಬಿಜೆಪಿಯ ಅಭ್ಯರ್ಥಿಗಳು ಸೋತು ಯಡಿಯೂರಪ್ಪನ ಗರ್ವಭಂಗವಾಗಿರುವುದು ಸಿದ್ದರಾಮಯ್ಯನವರಿಗೆ ಭಾರೀ ಸಂತೋಷ ತಂದಿದೆ.

ಇದನ್ನೇ ಬಳಸಿಕೊಂಡು ಚಲುವ ಅಂಡ್ ಟೀಂನ ಮೇಲೆ 2ನೇ ಬಾಣವಾಗಿ ಬ್ರಹ್ಮಾಸ್ತ್ರ ಬಿಡಲು ದೊಡ್ಡಗೌಡರು ಸಿದ್ಧತೆ ನಡೆಸಿರುವುದು ಭೀತಿ ಮೂಡಿಸಿದೆ.

ಈಗ 2ನೇ ಅಸ್ತ್ರವಾಗಿ ಚಲುವ ಸೇರಿದಂತೆ ಸಪ್ತ ಶಾಸಕರ ಕೈ ಮುರಿಯಲು ಕೈ ಪಡೆಯ ನಾಯಕ ಸಿಎಂ ಸಿದ್ದರಾಮಯ್ಯನ ಜೊತೆ ಗುಪ್ತ ಒಪ್ಪಂದ ಮಾಡಿಕೊಳ್ಳಲು ದೊಡ್ಡಗೌಡರು ತಯಾರಾಗುತ್ತಿದ್ದಾರೆಂಬ ಸುದ್ದಿ ರಾಜ್ಯ ರಾಜಕೀಯದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಉಪಚುನಾವಣೆಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ಹಾಕದೆ ಕಾಂಗ್ರೆಸ್ ಗೆಲುವಿಗೆ ಕಾರಣರಾಗಿರುವ ದೇವೇಗೌಡರ ಸಹಕಾರಕ್ಕೆ ಋಣಿಯಾಗಿರುವ ಸಿದ್ದರಾಮಯ್ಯನವರಿಗೆ ಮುಂಬರುವ ಚುನಾವಣೆಯಲ್ಲಿ ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ದೊಡ್ಡಗೌಡರ



ಏ.14 ರಂದು ನಾಗಮಂಗಲದಲ್ಲಿ ಚಲುವರಾಯಸ್ವಾಮಿಯ ಶಕ್ತಿ ಪ್ರದರ್ಶನ

ಸಹಕಾರ ಬೇಕೇಬೇಕು. ಹಾಗೊಂದು ವೇಳೆ 2018ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್- ಕಾಂಗ್ರೆಸ್ ನಡುವೆ ಒಳಒಪ್ಪಂದ ಏರ್ಪಡುವುದು ಖಚಿತವಾದರೆ, ಸಪ್ತ ಶಾಸಕರಿಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ಸಿಗುವುದಿರಲಿ, ಪಕ್ಷ ಸೇರ್ಪಡೆಯ ಭಾಗ್ಯವೇ ದಕ್ಕಲಾರದು.

ಈ ಹಿನ್ನೆಲೆಯಲ್ಲಿ ಎಲ್ಲರಿಗಿಂತ ಹೆಚ್ಚು ದಿಗಿಲುಗೊಂಡಿರುವುದು ಚಲುವರಾಯಸ್ವಾಮಿ. ಹಾಗಾಗಿಯೇ ಅಂಬೇಡ್ಕರ್ ಜಯಂತಿಯ ಬಾಡೂಟ ಅಷ್ಟು ಅದ್ದೂರಿಯಾಗಿ ಜರುಗಿದ್ದು. ನನ್ನನ್ನು ಉಳಿಸುವ, ಬೆಳೆಸುವ ತೀರ್ಮಾನವನ್ನು ನೀವು ಮಾಡಬೇಕು. ನಾನು ಜಿಲ್ಲೆಯ ಮಗ, ದತ್ತು ಮಗ ಅಲ್ಲ ಎನ್ನುವ ಮೂಲಕ ದೇವೇಗೌಡ-ಕುಮಾರಸ್ವಾಮಿ ವಿರುದ್ಧ ಪರೋಕ್ಷವಾಗಿ ಟೀಕಿಸಿದ ಚಲುವರಾಯಸ್ವಾಮಿ ಸಮರಕ್ಕೆ ಸಿದ್ಧ ಎಂದು ಘೋಷಿಸಿಬಿಟ್ಟರು.

ಅಪ್ಪ-ಮಗನ ವಿರುದ್ಧ ಟೀಕಾಸ್ತ್ರ

ಚಲುವರಾಯಸ್ವಾಮಿ ಅಭಿಮಾನಿಗಳು ನಡೆಸಿದ ಸಮಾವೇಶದಲ್ಲಿ ಜೆಡಿಎಸ್‌ನ ಬಂಡಾಯ ಶಾಸಕರಾದ ಇಕ್ಬಲ್ ಅನ್ಸಾರಿ, ಭೀಮಾನಾಯಕ್ ಇಬ್ಬರು ಬಂದಿರಲಿಲ್ಲ. ಸಮಾವೇಶಕ್ಕೆ ಬಂದಿದ್ದ ಜಮೀರ್ ಅಹಮದ್, ಮಾಗಡಿ ಬಾಲಕೃಷ್ಣ ಅಖಂಡ ಶ್ರೀನಿವಾಸಮೂರ್ತಿ, ರಮೇಶ್‌ಬಾಬು, ಎಂಎಲ್ಸಿ ಪುಟ್ಟಣ್ಣ ಮಾಜಿ ಶಾಸಕರಾದ ಚನ್ನರಾಯಪಟ್ಟಣದ ಪುಟ್ಟೇಗೌಡ, ಕೆ.ಆರ್.ಪೇಟೆ ಕೃಷ್ಣ ಸೇರಿದಂತೆ ಹಲವರು ದೇವೇಗೌಡ ಹಾಗೂ ಕುಮಾರಸ್ವಾಮಿ ವಿರುದ್ಧ ಟೀಕಾಸ್ತ್ರವನ್ನೇ ಪ್ರಯೋಗಿಸಿದರು. ಜಮೀರ್ ಅಹಮದ್ ತಮ್ಮ ಭಾಷಣದುದ್ದಕ್ಕೂ ಅಪ್ಪ-ಮಗನ ವಿರುದ್ಧ ಕೆಂಡವನ್ನೇ ಕಾರಿಕೊಂಡ. "ಅಲ್ಲಾನ ಮೇಲೆ ಆಣೆಯಿಟ್ಟು ಹೇಳ್ತೇನೆ ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ಹಾಕುವಂತೆ ಹೇಳಿದ್ದೇ ಹೆಚ್.ಡಿ.ಕುಮಾರಸ್ವಾಮಿ. ಹಾಗೆ ಹೇಳಿಲ್ಲವೆಂದು ದೇವರ ಮುಂದೆ ಪ್ರಮಾಣ ಮಾಡಲಿ. ಕುಮಾರಸ್ವಾಮಿಯನ್ನ ಮುಖ್ಯಮಂತ್ರಿ ಮಾಡಿದ್ದೇ ನಾವು. ಆದರೆ ಇಂದು ನಮ್ಮನ್ನೇ ಪಕ್ಷದಿಂದ ಹೊರಹಾಕಿದ್ದಾರೆ. ನಮ್ಮಿಂದಲೇ ಇವರೆಲ್ಲಾ ಬೆಳೆದದ್ದು ಎಂದು ಕುಮಾರಸ್ವಾಮಿ ಹೇಳ್ತಾರೆ. ನಾವು ಹುಟ್ಟಿನಿಂದಲೇ ಅನುಕೂಲಸ್ಥರು. ಮಾಗಡಿ ಬಾಲಕೃಷ್ಣ ಫುಟ್‌ಪಾತ್‌ನಲ್ಲಿರಲಿಲ್ಲ. ಚಲುವರಾಯಸ್ವಾಮಿ ಅಂಗಡಿ ಇಟ್ಟುಕೊಂಡಿರಲಿಲ್ಲ. ನಾವೆಲ್ಲಾ ಗೌರವದಿಂದಲೇ ರಾಜಕಾರಣಕ್ಕೆ ಬಂದವರು" ಅಂತ ಅಪ್ಪ-ಮಗನ ವಿರುದ್ಧ ಟೀಕೆಗಳ ಸುರಿಮಳೆಯನ್ನೇ ಸುರಿಸಿದರು.

ಮಾಗಡಿ ಬಾಲಕೃಷ್ಣನಂತೂ "ನಮ್ಮ ಹಣೆಬರಹ ಹೇಗಿದೆ ನೋಡಿ, ಕುಮಾರಸ್ವಾಮಿಯನ್ನು ಮುಖ್ಯಮಂತ್ರಿ ಮಾಡಿದ್ದೇ ನಾವು. ಆದರೆ ಅವರು ಮುಖ್ಯಮಂತ್ರಿಯಾದ ಮೇಲೆ ನಮ್ಮನ್ನೇ ತುಳಿಯಲು ಹೊರಟರು. ವಿರೋಧ ಪಕ್ಷಗಳ ಮೇಲೆ ಬೀಳಿ ಎಂದು ಕತ್ತಿ, ಗುರಾಣಿಗಳನ್ನು ಕೊಟ್ರೆ ನಮ್ಮ ಮೇಲೆ ಪ್ರಯೋಗಿಸಲು ನಿಂತರು. ನಾನು ಅಶೋಕ್‌ಗಿಂತ ಸೀನಿಯರು, ಬಿಜೆಪಿಯಲ್ಲಿದ್ದಿದ್ರೆ ಮಂತ್ರಿ ಆಗ್ತಿದ್ದೆ. 2004ರಲ್ಲಿ ಸಿದ್ದರಾಮಯ್ಯನವರಿಗೆ ಸಿಎಂ ಆಗುವ ಅವಕಾಶವಿತ್ತು, ಆದರೆ ದೇವೇಗೌಡರೇ ಆತ ಸಿಎಂ ಆದ್ರೆ ನಮ್ಮ ಕೈಗೆ ಸಿಗಲ್ಲ ಎಂದು ತಪ್ಪಿಸಿ ಧರ್ಮಸಿಂಗ್ ಸಿಎಂ ಆಗುವಂತೆ ನೋಡಿಕೊಂಡರು. ಇದಾದನಂತರ ಸಿದ್ದರಾಮಯ್ಯ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿ ಸಿಎಂ ಆದರು. ನಾನು ಅವರೊಂದಿಗೆ ಪಕ್ಷ ಬಿಟ್ಟಿದ್ದರೆ ಇಷ್ಟೊತ್ತಿಗೆ ಮಂತ್ರಿಯಾಗುತ್ತಿದ್ದೆ. ಆದರೆ ಈ ಚಲುವಣ್ಣ, ಜಮೀರ್, ಕುಮಾರಸ್ವಾಮಿ ಜೊತೆಗಿರೋಣ ಎಂದು ಹೇಳಿ ತಪ್ಪಿಸಿಬಿಟ್ಟರು. ಅದಕ್ಕಾಗಿ ಇಂದು ಈ ಪರಿಸ್ಥಿತಿ ಬಂದಿದೆ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗುವ ಸಂದರ್ಭದಲ್ಲಿ ರೇವಣ್ಣ ಸಹಿ ಹಾಕಲಿಲ್ಲ. ಆದರೆ ಕುಮಾರಸ್ವಾಮಿ ಮುಖ್ಯಮಂತ್ರಿ ಆದಮೇಲೆ ಪಿಡಬ್ಲ್ಯೂಡಿಯಂತಹ ಪೊಗದಸ್ತಾದ ಖಾತೆ ಮಂತ್ರಿ ಸ್ಥಾನದಲ್ಲಿ ಆತನ ಹೆಸರೇ ಮೊದಲ ಸಾಲಿನಲ್ಲಿತ್ತು, ಕುಮಾರಸ್ವಾಮಿಯನ್ನ ಅವರ ಕುಟುಂಬದವರೆಲ್ಲ ಸೇರಿ ದಾರಿ ತಪ್ಪಿಸುತ್ತಿದ್ದಾರೆ. ಅವರ ಕುಟುಂಬದವರೆಲ್ಲ ಸೇರಿ ರಾಜಕೀಯವಾಗಿ ಅವರನ್ನು ಬೀದಿಯಲ್ಲಿ ನಿಲ್ಲಿಸದಿದ್ದರೆ ನನ್ನ ಹೆಸರನ್ನು ಬದಲಾವಣೆ ಮಾಡಿಕೊಳ್ತೇನೆ. ಸುರೇಶ್‌ಗೌಡ-ಶಿವರಾಮೇಗೌಡರ ಮೂಗಿಗೆ ತುಪ್ಪ ಸವರಿ ಒಬ್ಬನನ್ನು ಶಾಸಕ, ಮತ್ತೊಬ್ಬನನ್ನು ಎಂಎಲ್ಸಿ ಮಾಡುತ್ತೇನೆ ಎಂದು ಜೆಡಿಎಸ್ ಪಕ್ಷಕ್ಕೆ ಸೇರಿಸಿಕೊಂಡಿದ್ದಾರೆ. ಇದೆಲ್ಲ ಕನಸು ಎಂಬುದನ್ನು ಸುರೇಶ್‌ಗೌಡ, ಶಿವರಾಮೇಗೌಡ ಅರಿತುಕೊಳ್ಳಲಿ. ಅದ್ಯಾರೋ ಜ್ಯೋತಿಷಿಯೊಬ್ಬ ಚಲುವರಾಯಸ್ವಾಮಿಯನ್ನು ಹಣಿಯಲು ಹೆಣ್ಣು ಮಗಳೊಬ್ಬಳಿಂದ ಸಾಧ್ಯ ಎಂದು ದೇವೇಗೌಡರಿಗೆ ಹೇಳಿದ್ದಾನಂತೆ. ಅದಕ್ಕೆ ಗೌಡರು ಲಕ್ಷ್ಮಿ ಅಶ್ವಿನ್‌ಗೌಡ ಎಂಬ ಮಹಿಳೆಯ ಮೂಲಕ ತಾಲ್ಲೂಕಿನ ಜನರಿಗೆ ಟ್ಯಾಂಕರ್ ಮೂಲಕ ನೀರು ಕೊಡಿಸುತ್ತಿದ್ದಾರೆ" ಎಂದು ದೇವೇಗೌಡರನ್ನು ಉದ್ದೇಶಿಸಿ ವ್ಯಂಗ್ಯವಾಡಿದ. ಮಾಜಿ ಶಾಸಕ ಪುಟ್ಟೇಗೌಡ, ಎಂಎಲ್ಸಿ ಪುಟ್ಟಣ್ಣ ಕೂಡ ದೇವೇಗೌಡ ಹಾಗೂ ಕುಮಾರಸ್ವಾಮಿ ವಿರುದ್ಧ ಕಟುಮಾತುಗಳಲ್ಲಿ ಕೆಂಡಕಾರಿಬಿಟ್ಟರು.

ಕೊನೆಗೆ ಮಾತನಾಡಿದ ಚಲುವರಾಯಸ್ವಾಮಿ "ನಾನು ಜೆಡಿಎಸ್ ಪಕ್ಷದಲ್ಲಿದ್ದಷ್ಟೂ ದಿನ ಯಾವುದೇ ತಪ್ಪು ಮಾಡಿಲ್ಲ, ನನ್ನ 23 ವರ್ಷಗಳ ರಾಜಕೀಯದಲ್ಲಿ ಆರು ತಿಂಗಳು ಮಾತ್ರ ಅಧಿಕಾರವಿರಲಿಲ್ಲ, ನನಗೆ ಸುಳ್ಳು ಹೇಳಿ ರಾಜಕೀಯ ಮಾಡುವ ಮನಸ್ಸಿಲ್ಲ, ಹೊಟ್ಟೆಪಾಡಿಗೆ ರಾಜಕಾರಣ ಮಾಡಲ್ಲ, ಜನರು ಬೇಡ ಎಂದರೆ ರಾಜಕಾರಣ ಬಿಟ್ಟು ಮನೆಯಲ್ಲಿರುತ್ತೇನೆ. ಇಲ್ಲಿ ಬಿಟ್ಟರೇ ನಿಮ್ಮ ಕಥೆ ಮುಗಿಯಿತು ಎಂದು ಹೆದರಿಸುತ್ತಾರೆ. ಆದರೆ ಇಲ್ಲಿ ಬಿಟ್ಟು ಮೇಲೆಯೇ ಸಂತೋಷ್ ಲಾಡ್, ದೇಶಪಾಂಡೆ, ಮಹದೇವಪ್ಪ ಸೇರಿದಂತೆ ಹಲವರು ಮಂತ್ರಿಯಾಗಿದ್ದು, ಸಿದ್ದರಾಮಯ್ಯ ಸಿಎಂ ಆಗಿದ್ದು, ಶೇ.99ರಷ್ಟು ರಾಜಕಾರಣಿಗಳು ಜೆಡಿಎಸ್ ಬಿಟ್ಟ ಮೇಲೆ ನೆಮ್ಮದಿಯಿಂದ ಇದ್ದಾರೆ. ಯಾರೂ ಬೀದಿ ಪಾಲಾಗಿಲ್ಲ, ನಾನು ಜಿಲ್ಲೆಯ ಮಗ. ದತ್ತು ಮಗನಲ್ಲ, ಸ್ವಾಭಿಮಾನದ ರಾಜಕಾರಣ ಮಾಡಿಕೊಂಡು ಬಂದಿದ್ದೇನೆ. ಜನ ಬೇಡ ಎಂದರೆ ನಿವೃತ್ತನಾಗುತ್ತೇನೆ. ನಾನು ಅನಿತಕ್ಕನವರನ್ನು ಗೌರವದಿಂದ ಕಾಣುತ್ತೇನೆ. ಆದರೆ ಅವರೇ ನನ್ನನ್ನು ಸೋಲಿಸಲು ಎಷ್ಟು ಖರ್ಚಾದರೂ ಸರಿ ಎಂದು ಹೇಳುತ್ತಾರಂತೆ. ಅವರಿಗೇಕೆ ನನ್ನ ಮೇಲೆ ಇಷ್ಟೊಂದು ಸಿಟ್ಟು ತಿಳಿಯುತ್ತಿಲ್ಲ. ಕುಮಾರಸ್ವಾಮಿ ಮುಖ್ಯಮಂತ್ರಿ ಮಾಡಲು ಹಲವರನ್ನು ಎದುರು ಹಾಕಿಕೊಂಡು ಸಂಕಷ್ಟ ಅನುಭವಿಸಿದ್ದೇನೆ. ಆದರೂ ನಮ್ಮನ್ನು ಪಕ್ಷದಿಂದ ಹೊರಹಾಕಿದ್ದಾರೆ. ನಾನಂತೂ ಪಕ್ಷಕ್ಕೆ ದ್ರೋಹ ಬಗೆದಿಲ್ಲ, ನಾನು ತಪ್ಪು ಮಾಡಿದ್ದರೆ ದೇವರ ಮುಂದೆ ಬಂದು ಪ್ರಮಾಣ ಮಾಡುತ್ತೇನೆ. ಕುಮಾರಸ್ವಾಮಿ ಬಂದು ಪ್ರಮಾಣ ಮಾಡಲು ಸಿದ್ಧರಿದ್ದಾರೆಯೇ" ಎಂದೆಲ್ಲಾ ಜಾಡಿಸಿಬಿಟ್ಟರು.

ಬರದ ನಾಡಿನ 'ಕೋಟಿ' ಸಮಾವೇಶ

ಚಲುವರಾಯಸ್ವಾಮಿ ಅಭಿಮಾನಿಗಳು ನಡೆಸಿದ ಸಮಾವೇಶಕ್ಕೆ ಕೋಟ್ಯಾಂತರ ರೂ. ಖರ್ಚು ಮಾಡಲಾಗಿತ್ತು, ಸಮಾವೇಶದ ಖರ್ಚಿಗಾಗಿ ವಿವಿಧ ಮೂಲಗಳಿಂದ ಹಣ ವಸೂಲಿ ಮಾಡಲಾಗಿತ್ತು, ಚಲುವರಾಯಸ್ವಾಮಿ ಶಿಷ್ಯ ಜಿ.ಪಂ. ಮಾಜಿ ಸದಸ್ಯ ಪ್ರಸನ್ನನ ನೇತೃತ್ವದಲ್ಲಿ ಭರ್ಜರಿ ಎತ್ತುವಳಿ ನಡೆಯಿತು. ಕಾವೇರಿ ನೀರಾವರಿ ನಿಗಮ, ಹೇಮಾವತಿ ನಾಲಾ ವಿಭಾಗ, ಲೋಕೋಪಯೋಗಿ ಇಲಾಖೆ, ಭೂಸೇನಾ ನಿಗಮದ ಅಧಿಕಾರಿಗಳಿಂದ ಹಣ ವಸೂಲಿ ಮಾಡಲಾಗಿತ್ತು, ಚಲುವರಾಯಸ್ವಾಮಿ ಕೃಪೆಯಿಂದ ಗೆದ್ದ ತಾ.ಪಂ., ಎಪಿಎಂಸಿ, ಜಿ.ಪಂ ಸದಸ್ಯರು ಸಮಾವೇಶದ ಖರ್ಚಿಗೆ ಹಣಕೊಟ್ಟರು. ಚಲುವಣ್ಣನ ಆಶೀರ್ವಾದದಿಂದ ಬಲಿತಿರುವ ಗುತ್ತಿಗೆದಾರರಿಂದಲೂ ಲಕ್ಷಾಂತರ ಹಣ ವಸೂಲಿ ಮಾಡಲಾಯಿತು. ತಾಲ್ಲೂಕಿನಲ್ಲಿ ಹತ್ತಕ್ಕೂ ಹೆಚ್ಚು ಕ್ರಷರ್‌ಗಳು ಅಕ್ರಮವಾಗಿ ನಡೆಯುತ್ತಿದ್ದು, ಅವುಗಳ ಮಾಲೀಕರಿಂದಲೂ ಭರ್ತಿ ಒಂದು ಲಕ್ಷ ಹಣವನ್ನು ವಸೂಲಿ ಮಾಡಲಾಗಿತ್ತು, ಜೆಡಿಎಸ್ ವರಿಷ್ಠ ದೇವೇಗೌಡ ಹಾಗೂ ಕುಮಾರಸ್ವಾಮಿಗೆ ಮುಟ್ಟಿನೋಡಿಕೊಳ್ಳುವಂತೆ ಬಲ ಪ್ರದರ್ಶನ ನಡೆಸಬೇಕೆಂದು ತೀರ್ಮಾನಿಸಿದ್ದ ಚಲುವಣ್ಣನ ಬೆಂಬಲಿಗರು ಬಂದ ಜನರಿಗೆ ಯಾವುದಕ್ಕೂ ಕೊರತೆಯಾಗದಂತೆ ನೋಡಿಕೊಂಡರು. ಕಳೆದ 15-20 ದಿನಗಳ ಹಿಂದಿನಿಂದಲೂ ಸಮಾವೇಶದ ಯಶಸ್ಸಿಗೆ ನಿಂತಿದ್ದ ಚಲುವರಾಯಸ್ವಾಮಿ ಬೆಂಬಲಿಗರು ಸಮಾವೇಶವನ್ನು ಭರ್ಜರಿಯಾಗಿ ನಡೆಸಿ ಅಪ್ಪ-ಮಗನಿಗೆ ಚಲುವಣ್ಣನ ಶಕ್ತಿ ಏನೆಂಬುದನ್ನು ತೋರಿಸಿದರು.

ಇನ್ನು ಸಮಾವೇಶದ ಹಿಂದಿನ ಒಂದೆರಡು ದಿನ ನಾಗಮಂಗಲದಲ್ಲಿ ಮಳೆ ಸುರಿದಿತ್ತು, ಸಮಾವೇಶದ ದಿನ ಮಳೆ ಬಂದರೆ ಶಕ್ತಿ ಪ್ರದರ್ಶನ ಸಮಾವೇಶ ವಿಫಲವಾಗುತ್ತದೆನ್ನುವ ಆತಂಕದಿಂದ ಚಲುವರಾಯಸ್ವಾಮಿ ಶಿಷ್ಯ ಜಿ.ಪಂ. ಮಾಜಿ ಸದಸ್ಯ ಪ್ರಸನ್ನ ಸಮಾವೇಶ ಯಾವುದೇ ಅಡಚಣೆ ಇಲ್ಲದಂತೆ ನಿರ್ವಿಘ್ನವಾಗಿ ನಡೆಯಲೆಂದು ಸಮಾವೇಶ ನಡೆಯುವ ಸ್ಥಳದಲ್ಲಿ ಕುರಿ ಬಲಿ ಕೊಟ್ಟದ್ದೂ ನಡೆಯಿತು. ಮೌಢ್ಯದ ಹಿಂದೆ ಬಿದ್ದ ಚಲುವರಾಯಸ್ವಾಮಿ ಕೂಡ ಬೆಂಬಲಿಗರ ಕುರಿ ಬಲಿಯನ್ನು ತಡೆಯುವ ಪ್ರಯತ್ನ ಮಾಡಲಿಲ್ಲ.

ನಾಗಮಂಗಲ ತಾಲ್ಲೂಕಿನಲ್ಲಿ ತೀವ್ರ ಬರಗಾಲವಿದೆ. ನೂರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿದೆ. ಜಾನುವಾರುಗಳಿಗೆ ಮೇವಿಲ್ಲದೆ ಸೊರಗಿವೆ.

⏭ 06





ಏ.14 ರಂದು ಜೆಡಿಎಸ್ ಪಕ್ಷಕ್ಕೆ ಸುರೇಶ್‌ಗೌಡ, ಶಿವರಾಮೇಗೌಡ ಸೇರ್ಪಡೆ


ರಾಯಚೂರು: ಅಟ್ರಾಸಿಟಿ ತಿಪ್ಪರಾಜನ ದರ್ಪಿಷ್ಟ ಶಾಸಕಗಿರಿ



ತಿಪ್ಪರಾಜು ಹವಾಲ್ದಾರ್







ಗೆದ್ದು ನಾಲ್ಕು ವರ್ಷ ಜನರನ್ನು ಕ್ಯಾರೇ ಅನ್ನದ ರಾಯಚೂರು ಗ್ರಾಮಾಂತರ ಬಿಜೆಪಿ ಎಮ್ಮೆಲ್ಲೆ ತಿಪ್ಪರಾಜು ಹವಾಲ್ದಾರನಿಗೆ ಈಗ ಇದ್ದಕ್ಕಿದ್ದಂತೆ ಜನರ ಕಾಳಜಿ ಜಾಗೃತವಾದಂತೆ ಕಾಣುತ್ತೆ. ಮುಂದಿನ ವರ್ಷ ಎಲೆಕ್ಷನ್ ಇರೋದೇ ಆತನ ಪೌರುಷಕ್ಕೆ ಕಾರಣ ಅನ್ನೋದನ್ನು ಬಿಡಿಸಿಹೇಳುವ ಅಗತ್ಯವಿಲ್ಲ. ಜನರ ಮುಂದೆ ತಾನು ಪ್ರಾಮಾಣಿಕ ಅಂತ ತೋರಿಸಿಕೊಳ್ಳಲು ಅಧಿಕಾರಿಗಳ ಮೇಲೆ ಯರ‍್ರಾಬಿರ‍್ರಿ ರೇಗಾಡಿದ್ದಲ್ಲದೆ 'ಆ ಅಧಿಕಾರಿಯ ಜಾತಿ ಯಾವುದು ಹೇಳಿ, ಅಟ್ರಾಸಿಟಿ ಕೇಸ್ ಹಾಕಿ ಒಳಗೆ ಹಾಕಿಸೋಣ' ಅನ್ನೋ ದುರಹಂಕಾರದ ಮಾತುಗಳನ್ನಾಡಿ ಈಗ ವಿವಾದಕ್ಕೆ ಸಿಲುಕಿದ್ದಾರೆ. ಅಧಿಕಾರ ದುರುಪಯೋಗದ ಆತನ ಮಾತುಗಳು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿ ಈಗ ಎಲ್ಲರೂ ಹಿಗ್ಗಾಮುಗ್ಗಾ ಕ್ಯಾಕರಿಸುತ್ತಿದ್ದಾರೆ.

ಅಷ್ಟಕ್ಕೂ ನಡೆದದ್ದೇನು?

ಬರದ ತಾಲ್ಲೂಕು ರಾಯಚೂರು ಗ್ರಾಮಾಂತರ ಕ್ಷೇತ್ರದ ರೈತರು ಕೃಷ್ಣಾ ನದಿಯಿಂದ 20ಕ್ಕೂ ಹೆಚ್ಚು ಹಳ್ಳಿಗಳಿಗೆ ಕುಡಿಯಲು, ಬೆಳೆಗಳಿಗೆ ಮತ್ತು ಜಾನುವಾರುಗಳಿಗೆ ನೀರು ನೀಡಬೇಕೆಂದು ಆಗ್ರಹಿಸಿ ಮಾರ್ಚ್ 29 ರಂದು ಹೋರಾಟ ಹಮ್ಮಿಕೊಂಡಿದ್ದರು. ಜನರ ಬೇಡಿಕೆಗಳತ್ತ ಕಿಂಚಿತ್ತೂ ತಲೆಹಾಕದ ಶಾಸಕ ತಿಪ್ಪರಾಜು ವಿರುದ್ಧವೂ ಸಹಜವಾಗಿಯೇ ಹೋರಾಟಗಾರರು ಆಕ್ರೋಶ ಹೊರಹಾಕಿದ್ದರು. ಇಂಥಾ ಜನಾಭಿಪ್ರಾಯ ರೂಪುಗೊಂಡರೆ ಮುಂದಿನ ಎಲೆಕ್ಷನ್‌ನಲ್ಲಿ ತನಗೆ ಮೂರು ನಾಮವೇ ಗತಿ ಎಂದರಿತ ತಿಪ್ಪಣ್ಣ ಎದ್ದನೋ ಬಿದ್ದನೋ ಅಂತ ಪ್ರತಿಭಟನೆಯ ಸ್ಥಳಕ್ಕೆ ಧಾವಿಸಿ ಬಂದು ಇದಕ್ಕೆಲ್ಲಾ ಅಧಿಕಾರಿಗಳೇ ಕಾರಣವೆಂದು ಆರೋಪಿಸಿ ಅಧಿಕಾರಿಗಳಿಗೆ ಕ್ಲಾಸ್ ತೆಗೆದುಕೊಂಡಿದ್ದರು. ಆದರೆ ಕೆಪಿಸಿ ಎಸ್ಇ ಮೋಹನ್‌ರವರು "ಕೃಷ್ಣ ನದಿಯಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಕುಸಿದಿದೆ. ಇದರಿಂದ ಕೆಪಿಸಿಯಿಂದ ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ನೀರು ಸರಿದೂಗಿಸಲು ಕಷ್ಟವಾಗುತ್ತಿದೆ. ಹಾಗಾಗಿ ನದಿ ನೀರಿನ ಹರಿವಿಗೆ ಅಡ್ಡಲಾಗಿ ಮರಳು ಚೀಲ ಅಡ್ಡಹಾಕಿ ನೀರು ಹರಿಸುತ್ತಿದ್ದೇವೆ" ಎಂದು ಸಮಜಾಯಿಸಿ ನೀಡಲು ಮುಂದಾಗಿದ್ದರು.

ವಾಸ್ತವತೆಯನ್ನು ಅರ್ಥಮಾಡಿಕೊಂಡು ಒಂದು ಪರಿಹಾರವನ್ನು ಸೂಚಿಸಬೇಕಿದ್ದ ತಿಪ್ಪಣ್ಣ ಜನರ ಮುಂದೆ ಹೀರೋ ಆಗುವ ಹುಮ್ಮಸ್ಸಿನಲ್ಲಿ "ನನಗೇ ಪಾಠ ಹೇಳಲು ಬರುತ್ತೀರಾ? ನಾನು ಈ ಕ್ಷೇತ್ರದ ಶಾಸಕ ನೆನಪಿಡು. ನನಗೇ ಸುಳ್ಳು ಹೇಳ್ತೀ. ಅಲೋಕೇಷನ್ ಲೆಟರ್ ಕೊಡು, ನೀರು ಹಂಚಿಕೆಯ ಮಾಹಿತಿ ಕೊಡು, ಅಲ್ಲಿಯವರೆಗು ಒಂದೇಒಂದು ಮೂಟೆ ಅಡ್ಡ ಇಟ್ಟು ನೀರು ತಗೊಂಡರೂ ನಿನ್ನ ಮೇಲೆ ಅಟ್ರಾಸಿಟಿ ಕೇಸ್ ಹಾಕ್ತೇನಿ, ನಾನೊಬ್ಬ ಶೆಡ್ಯೂಲ್ ಟ್ರೈಬ್ಸ್ ಮೀಸಲು ಕ್ಷೇತ್ರದ ಶಾಸಕ ಗೊತ್ತಾ. ಯಾವ ಕ್ಯಾಸ್ಟ್ ನಿಂದು?" ಅಂತೆಲ್ಲ ಅಬ್ಬರಿಸಿದ್ದರು.

ವಿಪರ್ಯಾಸವೆಂದರೆ ತಿಪ್ಪರಾಜರಿಂದ ಆ ಪರಿ ಬೈಸಿಕೊಂಡು ಮೋಹನ್ ಎಸ್ಸಿ ಕೆಟಗರಿಗೆ ಸೇರಿದವರು. ಅದು ಗೊತ್ತಾಗುತ್ತಿದ್ದಂತೆಯೇ "ನೀನು ಅವನೇ ಇದ್ದಿ ಇಲ್ಲಾಂದ್ರೆ ಇನ್ನೊಂದು ಕೇಸ್ ಹಾಕ್ತಿದ್ದೆ. ಜನರು ಹೇಳಿದ ಹಾಗೆ ಕೇಳು" ಅಂತ ಧಮಕಿ ಹಾಕಿದ್ದರು. ಅದಕ್ಕೂ ಸೊಪ್ಪು ಹಾಕದ ಮೋಹನ್ "ಇಲ್ಲಾ ಸರ್ ನಾವು ಮೇಲಿನ ಅಧಿಕಾರಿಗಳು ಹೇಳಿದ ಹಾಗೆ ಕೇಳಬೇಕು ಅಲ್ವಾ. ನನಗೆ ಎಂಡಿ ಬೈತಾರೆ" ಅಂತ ಉತ್ತರಿಸುತ್ತಿದ್ದಂತೆಯೇ ಜನರೆದುರೇ ಅವಮಾನವಾದ್ದಕ್ಕೆ ರೋಷಗೊಂಡ ತಿಪ್ಪರಾಜು "ಯಾವನೋ ಅವನು ಎಂಡಿ, ಕುಮಾರ್ ನಾಯಕನದ ಕಾನೂನು? ಅಲೊಕೇಷನ್ ಲೆಟರ್ ಕೊಟ್ಟು ನೀರು ತಗೊಳ್ಳಿ ಇಲ್ಲ ಅಂದ್ರೆ ಪರಿಸ್ಥಿತಿ ನೆಟ್ಟಗಿರೋಲ್ಲ, ಒಬ್ಬ ಎಸ್ಇ ಆಗಿ ನನಗೆ ಎದುರು ಮಾತಾಡ್ತೀಯಾ ಹುಷಾರ್. ಪೊಲೀಸರನ್ನು ಕರೆದುಕೊಂಡು ಬಂದು ಆಟ ಆಡ್ತೀಯಾ. ಬೇಗ ಸಿಒಡಿ ಬಂದ್ ಮಾಡು" ಅಂತ ಆವಾಜ್ ಹಾಕಿದ್ದರು.

ಆತನ ಈ ದಾಂಧಲೆ ಫೇಸ್‌ಬುಕ್, ವಾಟ್ಸಾಪ್‌ಗಳಲ್ಲಿ ಹರಿದಾಡಿ ಜನ ಛೀಮಾರಿ ಹಾಕಲು ಶುರು ಮಾಡುತ್ತಿದ್ದಂತೆಯೇ "ನನ್ನ ಕ್ಷೇತ್ರದಲ್ಲಿ ಜನ ನೀರಿಲ್ಲದೇ ಸಾಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನೀರು ತೆಗೆದುಕೊಂಡರೆ ಹೇಗೆ ಸುಮ್ಮನಿರುವುದು? ಕೆಪಿಸಿ ಅಧಿಕಾರಿಗಳು ನೀಡುತ್ತಿರುವ ತೊಂದರೆ, ಕಿರುಕುಳ ಸಹಿಸಲಾಗದೇ ಆ ರೀತಿ ಮಾತನಾಡಿದ್ದೇನೆ. ನನ್ನ ಕ್ಷೇತ್ರದ ಮತದಾರರ ಹಿತ ಕಾಯಲು ನಾನು ಯಾವುದೇ ಹೋರಾಟಕ್ಕೂ ಸಿದ್ಧ" ಅಂತೆಲ್ಲಾ ಎಮೋಷನಲ್ ವರಸೆ ಶುರು ಮಾಡಿಕೊಂಡಿದ್ದಾರೆ.

ತಿಪ್ಪರಾಜನ ಹಿನ್ನೆಲೆ

ತಿಪ್ಪರಾಜನ ರಾಜಕೀಯ ಹಾದಿಯೇ ಆಶ್ಚರ್ಯಕರವಾದುದು. ಶಿಕ್ಷಕನಾಗಿದ್ದ ಈತ ಪಾಠ ಮಾಡುವುದಕ್ಕಿಂತ ರಾಜಕೀಯದ ಬಗ್ಗೆ ಚಿಂತಿಸಿದ್ದೇ ಹೆಚ್ಚು. ಶಿಕ್ಷಕ ವೃತ್ತಿಗೆ ತಿಲಾಂಜಲಿಯಿಟ್ಟು ಜಾತಿಬಲದ ಮೂಲಕ ಬಿಜೆಪಿಯ ಶಿವನಗೌಡ ನಾಯಕನ ಆಪ್ತ ಸಹಾಯಕನಾಗಿ ಸೇರಿಕೊಂಡರು. ನಿಧಾನಕ್ಕೆ ರಾಜಕೀಯ ದಾಳಗಳನ್ನು ಕರಗತ ಮಾಡಿಕೊಂಡ ತಿಪ್ಪರಾಜು, ಶಿವನಗೌಡ ನಾಯಕ ಗ್ರಂಥಾಲಯ ಸಚಿವನಾದಾಗ ಒಂದಷ್ಟು ಕಾಸು ಮಾಡಿಕೊಂಡರು. ರಾಯಚೂರು ಗ್ರಾಮಾಂತರ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದ ಶಿವನಗೌಡ ನಾಯಕ ಸಾಲುಸೋಲುಗಳಿಂದ ಕಂಗೆಟ್ಟು ಅನಿವಾರ್ಯವಾಗಿ ಸ್ವಕ್ಷೇತ್ರ ದೇವದುರ್ಗದತ್ತ ಮುಖ ಮಾಡಿದಾಗ ತಿಪ್ಪರಾಜುಗೆ ಅನಾಯಾಸವಾಗಿ ಬಿಜೆಪಿ ಟಿಕೆಟ್ ಒಲಿದುಬಂದಿತ್ತು. ಎಸ್ಟಿ ಮೀಸಲು ಕ್ಷೇತ್ರವಾದ ಇಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ರಾಯಪ್ಪ ನಾಯಕ್ ಮತ್ತು ಜೆಡಿಎಸ್‌ನಿಂದ ಅಮರೇಶ್ವರ ನಾಯಕ್ ಎಂಬ ಅಣ್ಣತಮ್ಮಂದಿರು ನಿಂತಿದ್ದರು. ಇವರುಗಳ ಮಧ್ಯೆ ಇಬ್ಭಾಗವಾದ ಮತಗಳ ಲಾಭ ಪಡೆದ ತಿಪ್ಪರಾಜು ಅನಿರೀಕ್ಷಿತವಾಗಿ ಗೆದ್ದು ಶಾಸಕನಾದರು.

ಆದರೆ ಮುಂದಿನ ಸಲ ಅಂತ ಅನಿರೀಕ್ಷಿತಗಳು ನಡೆಯುವುದು ಡೌಟು. ಅದು ತಿಪ್ಪರಾಜುಗೂ ಖಾತ್ರಿಯಾಗಿದೆ. ಆದ್ದರಿಂದಲೇ ಈಗಿನಿಂದಲೇ ಜನಪರ ಇಮೇಜು ಗಿಟ್ಟಿಸಲು ಅಧಿಕಾರಿಗಳ ಮೇಲೆ ದರ್ಪ ತೋರಲು ಮುಂದಾಗಿದ್ದಾರೆ. ಒಟ್ಟಿನಲ್ಲಿ ತಿಪ್ಪರಾಜನ ದರ್ಪ ದುರಹಂಕಾರ ಮಿತಿ ಮೀರಿದೆ. ಥೇಟ್ ಶಿವನಗೌಡನ ತರಹದ ಆಕ್ರಮಣಕಾರಿ ದಬ್ಬಾಳಿಕೆಯನ್ನು ಈತನೂ ಮೈಗೂಡಿಸಿಕೊಂಡಿದ್ದಾರೆ. ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಈತನ ಅಧಿಕಾರ ದಾಹ ನೋಡಿ ಬಿಜೆಪಿ ಕಾರ್ಯಕರ್ತರೇ ಬೆಚ್ಚಿಬಿದ್ದಿದ್ದರು. ರಾಜಕೀಯ ಗಂಧಗಾಳಿಯೇ ಇಲ್ಲದ ತನ್ನ ಹೆಂಡತಿಯನ್ನು ಕುರ್ಡಿ ಜಿಲ್ಲಾ ಪಂಚಾಯತಿ ಕ್ಷೇತ್ರದಲ್ಲಿ ನಿಲ್ಲಿಸಿ, ಗೆಲ್ಲಿಸಿಕೊಳ್ಳಲು ಆತ ಪರದಾಡಿದ ಪರಿಯೇ ಗಾಬರಿ ಹುಟ್ಟಿಸುವಂತಿತ್ತು.

ಕಳೆದ ವರ್ಷ ಕಾನೂನುಬದ್ಧವಾಗಿ ಕೆಲಸ ಮಾಡುತ್ತಿದ್ದ ಜೆಸ್ಕಾಂ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿ ಸುದ್ದಿಯಾಗಿದ್ದು ಇದೇ ತಿಪ್ಪರಾಜು ಎಂಬ ಅಟ್ರಾಸಿಟಿ ಮಹಾಶಯ. ತನ್ನ ಪಾಡಿಗೆ ತಾನು ಸರ್ಕಾರ ವಹಿಸಿದ್ದ ಕೆಲಸ ಮಾಡುತ್ತಿದ್ದ ಜೂನಿಯರ್ ಇಂಜಿನಿಯರ್ ಜಾವೇದ್, ಚಂದ್ರಬಂಡಾ ಗ್ರಾಮದಲ್ಲಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿದ್ದವರ ಲೈನ್‌ಗಳನ್ನು ಕತ್ತರಿಸಿ ಬಿಸಾಕುವ ಕಾಯಕದಲ್ಲಿದ್ದರು. ಅವುಗಳಲ್ಲಿ ತಿಪ್ಪರಾಜನ ಚೇಲಾಗಳ ಅಕ್ರಮ ಸಂಪರ್ಕಗಳೇ ಹೆಚ್ಚಾಗಿದ್ದವು. ತಾವು ಎಮ್ಮೆಲ್ಲೆ ತಿಪ್ರಾಜಣ್ಣನ ಕಡೆಯವರು, ತಮ್ಮ ಲೈನ್‌ಗಳನ್ನು ಕಟ್ ಮಾಡಿದರೆ ಪರಿಣಾಮ ನೆಟ್ಟಗಿರೋಲ್ಲ ಅಂತ ಶಾಸಕನ ಚೇಲಾಗಳು ಜೆಸ್ಕಾಂ ಸಿಬ್ಬಂದಿಗಳಿಗೆ ಬೆದರಿಕೆ ಹಾಕಿದ್ದರು. ಆದರೂ ಸಿಬ್ಬಂದಿ ಕ್ಯಾರೆ ಅಂದಿರಲಿಲ್ಲ, ಆಗ ಸ್ಥಳಕ್ಕಾಗಮಿಸಿದ ತಿಪ್ಪರಾಜು ಜೆಸ್ಕಾಂ ಅಧಿಕಾರಿಗಳಿಗೆ ಬಾಯಿಗೆಬಂದಂತೆ ಬೈದಿದ್ದಲ್ಲದೇ ಅದನ್ನು ವಿರೋಧಿಸಿದ ಇಂಜಿನಿಯರ್ ಜಾವೇದ್ ಮೇಲೆ ಹಲ್ಲೆಯನ್ನೂ ಮಾಡಿದ್ದರು. ತಡೆಯಲು ಬಂದ ಸಿಬ್ಬಂದಿಗಳಿಗೂ ಏಟುಗಳು ಬಿದ್ದಿದ್ದವು. ಇದಕ್ಕಾಗಿ ಪೊಲೀಸರು ತಿಪ್ಪರಾಜು ಮತ್ತು ಅತನ ಬೆಂಬಲಿಗರು ಸೇರಿ ಒಟ್ಟು 9 ಜನರ ವಿರುದ್ಧ ಐಪಿಸಿ ಸೆಕ್ಷನ್ 143, 147, 504 ಹಾಗೂ 149 ರಡಿ ಪ್ರಕರಣ ದಾಖಲಿಸಿಕೊಂಡು ತಿಪ್ಪರಾಜುಗೆ ನೋಟಿಸ್ ಕಳಿಸಿದ್ದೂ ನಡೆದಿತ್ತು. ಅಷ್ಟಾದರು ಈತ ಬುದ್ಧಿ ಕಲಿತಂತೆ ಕಾಣುತ್ತಿಲ್ಲ.

ಭ್ರಷ್ಟಾಚಾರ, ಜಾತಿರಾಜಕಾರಣಗಳೇ ಸಾಧನೆ

2009ರ ನೆರೆ ಪ್ರವಾಹ ಬಂದನಂತರ ಮತ್ತು ಅದಕ್ಕೂ ಮೊದಲೇ ರಾಯಚೂರು ಗ್ರಾಮಾಂತರ ಕ್ಷೇತ್ರದಲ್ಲಿ ಆಶ್ರಯ ಮನೆಗಳ ವಿಚಾರದಲ್ಲಿ ಬಹಳಷ್ಟು ಹಣ ಮಾಡಿಕೊಳ್ಳಲು ಸಾಧ್ಯವಾಗಿದೆ. ಇದೇ ಕಾರಣಕ್ಕೆ ಈ ಕ್ಷೇತ್ರದಿಂದ ಸ್ಪರ್ಧಿಸಲು ಶಿವನಗೌಡ ಮತ್ತು ತಿಪ್ಪರಾಜು ನಡುವೆ ಒಮ್ಮೆ ದೊಡ್ಡ ಗಲಾಟೆಯೇ ನಡೆದಿತ್ತು. ಮನೆ ಕೊಡಿಸುವ ನೆಪದಲ್ಲಿ ಫಲಾನುಭವಿಗಳಿಂದ ನೇರವಾಗಿ ಒಬ್ಬರಿಂದ 5 ರಿಂದ 10 ಸಾವಿರದಷ್ಟು ಹಣ ವಸೂಲಿ ಮಾಡಲಾಗುತ್ತದೆ. ಇದರಲ್ಲಿ ತಿಪ್ಪರಾಜನದು ಎತ್ತಿದ ಕೈ. ಯಾರು ಹಣ ಕೊಡುವುದಿಲ್ಲವೋ ಅವರಿಗೆ ಮನೆ ಇಲ್ಲ ಅಂತಾನೆ ಅರ್ಥ.

ಇನ್ನು ಈತನ ಸ್ವಜಾತಿ ರಾಜಕಾರಣ ಹೇಸಿಗೆ ಹುಟ್ಟಿಸುವಂತದ್ದು. ತನ್ನ ಜಾತ್ಯಸ್ಥರು ಏನೇ ತಪ್ಪು ಮಾಡಿದರು ಸಹ ಅವರ ಬೆಂಗಾವಲಿಗೆ ನಿಂತು ಬಿಡುತ್ತಾನೆ. ಹಿಂದೊಮ್ಮೆ ಒಬ್ಬ ಹುಡುಗಿಯ ಮೇಲೆ ಅತ್ಯಾಚಾರ ನಡೆದಿತ್ತು. ಅತ್ಯಾಚಾರ ನಡೆಸಿದ ಆರೋಪಿ ತನ್ನ ಜಾತಿಯವನೆಂದು ತಿಳಿದ ತಿಪ್ಪರಾಜು ಅತ್ಯಾಚಾರಿಯ ಪರವೇ ವಕಾಲತ್ತು ವಹಿಸಿ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗದಂತೆ ಒತ್ತಡ ತಂದಿದ್ದ. ಸ್ಥಳೀಯ ದಲಿತ ಮುಖಂಡರಿಗೆ ಹಣದ ಆಮಿಷವೊಡ್ಡಿ ಕೇಸು ಮುಚ್ಚಿಹಾಕಿಸಲು ಹೊಂಚು ನಡೆಸಿದ್ದ. ಪ್ರಾಮಾಣಿಕ ಹೋರಾಟದ ತರುವಾಯ ದೂರು ದಾಖಲಾದ ಮೇಲು ಜಾತ್ಯಸ್ಥ ರೇಪಿಸ್ಟನ ಜಾಮೀನಿಗಾಗಿ ಹಿಂಬಾಲಕರನ್ನು ಬಿಟ್ಟಿ[illegible]

ಅಧಿಕಾರದ ಅಮಲು ನೆತ್ತಿಗಡರಿರುವ ತಿಪ್ಪರಾಜು ಮುಂದಿನ ಸಲ ಬಿಜೆಪಿ ಅಧಿಕಾರಕ್ಕೇರೋದು ಗ್ಯಾರಂಟಿ ಯಡಿಯೂರಪ್ಪ ಸಿಎಂ ಆಗೋದು ಫಿಕ್ಸು ಎಂಬ[illegible] ಭ್ರಾಂತುಗಳ ಜೊತೆಗೆ ತಾನು ಎಸ್ಟಿ ಕೋಟಾದ[illegible] ಮಂತ್ರಿಯಾಗೋದೂ ನಿಕ್ಕಿ ಅನ್ನೊ ದುರಾಸೆಯು ಹುಟ್ಟಿಕೊಂಡಿದೆ.

ಆದರೆ ಗೆಲ್ಲುವುದೇ ಅವನಿಗೆ ತ್ರಾಸಿನ ಕೆಲಸ. ಕಳೆದ ಸಲ ಒದಗಿಬಂದ ಅದೃಷ್ಟವನ್ನು ನಂಬಿಕೊಂಡು ಕೂರ[illegible] ಅವನಿಂದ ಆಗುತ್ತಿಲ್ಲ, ಜೊತೆಗೆ ತನ್ನ ಪೊಲಿಟಿಕಲ್ ಗಾಡ್‌ಫಾದರ್ ಶಿವನಗೌಡ ನಾಯಕನ ಜೊತೆ ಈ[illegible] ಮೊದಲಿನಷ್ಟು ಆತ್ಮೀಯತೆಯೂ ಉಳಿದಿಲ್ಲ, ಹಾಗಾ[illegible] ಈ ರೀತಿ ಗಿಮಿಕ್ ಮಾಡಿ ತಾನೊಬ್ಬ ಜನಪರ ಶಾ[illegible] ಎನಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ದಲಿತರ ಮೇಲಿ[illegible] ದೌರ್ಜನ್ಯಗಳನ್ನು ತಡೆಯಲಿಕ್ಕೆ ಇರುವ ಪರಿಶಿಷ್ಟ ಜಾ[illegible] ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯ[illegible] ಒಬ್ಬ ಶಾಸಕನಾಗಿ ದುರುಪಯೋಗ ಮಾಡಿಕೊಳ್ಳ[illegible] ಹೊರಡುವುದು ಎಂತಹ ವಿಪರ್ಯಾಸವಲ್ಲವೇ?

ಇನ್ನು ಈತನ ನಾಲ್ಕು ವರ್ಷದ ಸಾಧ[illegible] ಮಾರ್ಕ್ಸ್‌ಕಾರ್ಡ್‌ನಲ್ಲಿ ಸೊನ್ನೆಯದ್ದೇ ಕಾರುಬಾರು. ರಾಯಚೂರಿಗೆ ಐಐಟಿ ಬರಬೇಕೆಂದು ಗಂಟ[illegible] ಹರಿಯುವಂತೆ ಕಿರುಚುತ್ತಿದ್ದ ಈತ, ತನ್ನದೇ ಬಿಜೆಪಿ ಪಕ್ಷದ[illegible] ವಂಚನೆಯಿಂದ ರಾಯಚೂರಿಗೆ ಐಐಟಿ ತಪ್ಪಿದಾ[illegible] "ರಾಯಚೂರಿಗೆ ಐಐಟಿ ಪಡೆಯುವಷ್ಟು ಯೋಗ್ಯತೆಯಿ[illegible] ಬಿಡಿ" ಎಂದು ಪ್ಲೇಟ್ ತಿರುಗಿಸಿದ್ದರು. ಭಾಷಣಗಳ[illegible] ಬಿಗಿದದ್ದು ಬಿಟ್ಟರೆ ಈತನಿಂದ ಮತ್ತಾವ ಕೆಲಸಗಳ[illegible] ಆಗಿಲ್ಲ.

ಜನರ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆ[illegible] ಕೊಂಡಿರುವ ಈತ ಮುಂದಿನ ಎಲೆಕ್ಷನ್‌ನಲ್ಲಿ ಜಾತಿ ಅಸ್ತ್ರ[illegible] ಪ್ರಯೋಗಿಸಲು ಸಜ್ಜಾಗಿದ್ದಾರೆ. ಅಧಿಕಾರಿಗಳ ವಲಯ[illegible] ದಲ್ಲಂತೂ ತಿಪ್ಪರಾಜನ ಬಗ್ಗೆ ತೀವ್ರ ಅಸಮಾಧಾನವಿ[illegible] ಪ್ರತಿ ತಿಂಗಳು ಈತನಿಗೆ ಮಂತ್ಲಿ ಮಾಮೂಲಿ ತಲುಪಿಸಿಯ[illegible] ಈತನಿಂದ ಬೈಗುಳ ಕೇಳಬೇಕಲ್ಲ ಅಂತ ಕುದಿಯುತ್ತಿದ್ದಾ[illegible] ಅಧಿಕಾರಿಗಳ ತಹತಹಕ್ಕಿಂತ ಜನರ ಆಕ್ರೋಶವಿದೆಯ[illegible] ಅದೊಂದು ಸಾಕು ತಿಪ್ಪರಾಜನನ್ನು ಮನೆಗೆ ಕಳಿಸಲು[illegible]

■ ಮುತ್ತುರಾಜ[illegible]

ನಾಗಮಂಗಲ...

05 ⏮

ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ ಕೋಟ್ಯಾಂತರ ಹಣ ಖರ್ಚು ಮಾಡಿ ಈ ರೀತಿಯ ಶಕ್ತಿ ಪ್ರದರ್ಶನ ಮಾಡುವ ಅಗತ್ಯವಿರಲಿಲ್ಲ. ಇದೇ ಹಣವನ್ನು ಕುಡಿಯುವ ನೀರಿನ ಸಮಸ್ಯೆ ತೀವ್ರವಿರುವ ಗ್ರಾಮಗಳಿಗೆ ನೀರೊದಗಿಸಲು ಬಳಸಿದ್ದರೆ ಚಲುವರಾಯಸ್ವಾಮಿಯನ್ನು ಜನತೆ ಕೊಂಡಾಡುತ್ತಿದ್ದರು. ಆದರೆ ಚಲುವಣ್ಣನ ಅಭಿಮಾನಿಗಳಿಗೆ ಬರ ಪರಿಸ್ಥಿತಿಯಲ್ಲಿ ಜನರಿಗೆ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಒದಗಿಸುವ ಕಾರ್ಯಕ್ಕಿಂತ ದೇವೇಗೌಡ-ಕುಮಾರಸ್ವಾಮಿ ವಿರುದ್ಧ ತೊಡೆತಟ್ಟುವ ಕಾರ್ಯವೇ ಮುಖ್ಯವಾಗಿ ಸಮಾವೇಶ ನಡೆಯಿತು. ಕೋಟ್ಯಾಂತರ ರೂ. ವಸೂಲಿ ಮಾಡಿದ ಈ ಸಮಾವೇಶದಿಂದ ಏನಾಯ್ತೋ ಗೊತ್ತಿಲ್ಲ, ಆದರೆ ಅಪ್ಪ-ಮಗನ ವಿರುದ್ಧ ಚಲುವರಾಯಸ್ವಾಮಿ ಬಣ ಕೆಂಡಕಾರಿದ್ದಂತೂ ಸಾಂಗವಾಗಿ ನೆರವೇರಿತು.

ವಿಧಾನಸಭೆ ಚುನಾವಣೆಗಿನ್ನು ವರ್ಷ ಬಾಕಿ ಇದೆ. ಶಾಸಕ ಚಲುವರಾಯಸ್ವಾಮಿ ಭೀಕರ ಬರವಿದ್ದ ಸಂದರ್ಭದಲ್ಲಿ ಈ ರೀತಿ ಶಕ್ತಿ ಪ್ರದರ್ಶನ ಮಾಡಿದ್ದು ತಾಲ್ಲೂಕಿನ ಜನರಿಗೆ ಸರಿ ಕಂಡಿಲ್ಲ. ಅಲ್ಲದೆ ಚಲುವರಾಯಸ್ವಾಮಿ ಈ ಸಮಾವೇಶದಲ್ಲಿ ಯಾವ ಪಕ್ಷ ಸೇರುತ್ತೇನೆಂದು ಘೋಷಿಸಲಿಲ್ಲ. ಬಹುತೇಕ ಕಾಂಗ್ರೆಸ್‌ಗೆ ಹೋಗುತ್ತಾರೆಂದು ಹೇಳಲಾಗುತ್ತಿದ್ದರೂ ಡಿಸೆಂಬರ್‌ವರೆಗೂ ಕಾಯಲು ಚಲುವರಾಯಸ್ವಾಮಿ ನಿರ್ಧರಿಸಿದ್ದಾರೆಂಬ ಮಾತುಗಳು ಕೇಳಿಬರುತ್ತಿವೆ. ಕಾಂಗ್ರೆಸ್ ಸೇರಲು ಕರ್ನಾಟಕ ಉಸ್ತುವಾರಿ ಹೊತ್ತಿರುವ ದಿಗ್ವಿಜಯ್ ಸಿಂಗ್ ಜೊತೆ ಚಲುವ ಅಂಡ್ ಟೀಂ ಹಲವು ಸುತ್ತಿನ ಮಾತುಕತೆ ನಡೆಸಿದ್ದರೂ ಕಾಂಗ್ರೆಸ್ ಸೇರಲು ಇನ್ನೂ ಗ್ರೀನ್‌ಸಿಗ್ನಲ್ ಸಿಕ್ಕಿಲ್ಲ. ಒಂದುವೇಳೆ ಮಹತ್ತರ ರಾಜಕೀಯ ಬದಲಾವಣೆಗಳು ನಡೆದು ದೇವೇಗೌಡರ ಜೊತೆ ಕಾಂಗ್ರೆಸ್ ಒಳಒಪ್ಪಂದ ಮಾಡಿಕೊಂಡರೆ ಜೆಡಿಎಸ್‌ನ ಬಂಡಾಯ ಶಾಸಕರು ನಿಜಕ್ಕೂ ಪರಿತಪಿಸುವಂತಾಗುತ್ತದೆ. ದಿನದ 24 ಗಂಟೆ ರಾಜಕೀಯ ಮಾಡುವ ದೇವೇಗೌಡರ ಕೆಂಗಣ್ಣಿಗೆ ಬಲಿಯಾಗಿರುವ ಬಂಡಾಯ ಸಪ್ತ ಶಾಸಕರಲ್ಲಿ ಯಾರು ಮತ್ತೆ ರಾಜಕೀಯ ಅಧಿಕಾರ ಪಡೆಯುವರೋ, ಯಾರು ಮನೆಗೆ ಹೋಗುವರೋ ಎಂಬುದನ್ನು ಕಾದು ನೋಡಬೇಕಿದೆ.

■ ವರದಿಗಾರ

ಹುಟ್ಟೋ ಕೂದಲೆಸ್ಟು, ಉದರೊ ತುಬಟೆಸ್ಟು, ಬುಡಿರ್ಲ ಅತ್ತಾಗೆ

• ಬಿ.ಚಂದ್ರೇಗೌಡ

ಕಟ್ಟೆಪುರಾಣ

ಊರ ಮುಂದೆ ಕುಳಿತ ಕಾಳಮಾವನಿಗೆ ಈ ಧಗೆಯಲ್ಲಿ ಬದುಕುವುದೇ ಬೇಡ ಅನ್ನುವಷ್ಟು ಸಂಕಟವಾಯ್ತು. ಆಗ,

"ಸಿವುನೇ, ನಾರಾಯ್ಣ ಸಾಕು ಕಂಡ್ರಿಲ ಈ ಜಲ್ಮ" ಎಂದ. ಆಗ ದುರುಗುಟ್ಟಿ ನೋಡಿದ ಉಗ್ರಿ,

"ಇದೇನು ಮಾವ ಹಿಂಗಂತೀ. ನಿನ್ನ ವಯಿಸಿನೋರು ಈಗ ಏನೇನೊ ಸಾಧನೆ ಮಾಡಕ್ಕೆ ವಂಟವುರೆ. ನೀನ್ನೊಡಿದ್ರೆ ಜಲ್ಮನೆ ಸಾಕು ಅಂತಿ" ಎಂದ.

"ಅದ್ಯಾರು ಸಾಧನೆ ಮಾಡಕ್ಕೆ ವಂಟಿದ್ದರ್ಲ?" ಎಂದಳು ಜುಮ್ಮಿ.

"ನೀನು ನಂಜನಗೂಡು, ಗುಂಡ್ಳುಪ್ಯಾಟಿಗೆ ಬಂದು ನೋಡಬೇಕಾಗಿತ್ತು ಕಣೇ. ಯಸ್ಸೆಂ ಕಿಸ್ಣ ಶ್ರೀನಿವಾಸ್ ಪ್ರಸಾದ್, ಎಡೂರಪ್ಪ ಯಂಗೆ ಓಡಾಡತಿದ್ರು ಅಂದ್ರೆ ನಮ್ಮಂಥ ಹುಡುಗ್ರು ನಾಚಗಬೇಕು."

"ಅವುರು ಸರೀಳವ ಅಂಗೆ ಕಾಪಾಡಿಕಂಡವುರೆ ಕಂಡ್ಳ. ಅವುರೇನು ನಮ್ಮಂಗೆ ಸೊಸೆಟ್ಟಿ ಅಕ್ಕಿ ಅನ್ನ ತಿಂದರೆ" ಎಂದ ಸೀರ.

"ಅದೇನೊ ನಿಜ. ವಳ್ಳೆ ಊಟನೆ ತಿಂತರೆ. ಹೆಚ್ಚುಕಮ್ಮಿಯಾದ್ರೆ ದಾಗುಟ್ರಿಗೆ ತೋರಿಸಿಗತ್ತರೆ. ದಾಗುಟ್ರಿಗೆ ಪೀಜು ಕೊಡಂಗಿಲ್ಲ, ಮಾತ್ರೆ ತಾನಿಕ್ಕು ಯಾವುದ್ಕೂ ಕೊಡಂಗಿಲ್ಲ. ಈ ದೇಶ ಕುರುತು ಕಾಳಮಾವನಂಗೆ ಯೋಚನೆ ಮಾಡಂಗಿಲ್ಲ. ಆ ಯಸ್ಸೆಂ ಕಿಸ್ಣನಂತೂ ಉದ್ದುಕೂ ಯದೆ ಮ್ಯಾಗಲ ಬ್ಯಣ್ಣೆ ಕರಗದಂಗೆ ಬದುಕಿದ್ನಪ್ಪ."

"ಬದುಕಿದ ಸರಿ ಕಂಡ್ಳ. ಕಡಿಗಾಲ ಕೇಳು" ಎಂದ ಕಾಳಮಾವ.

"ಅದ್ಯಲ್ಲನು ನೀನೇಚನೆ ಮಾಡ್ತಯಿದ್ದಿ. ಅವುನು ಯಾವತ್ತೂ ಯೋಚನೆ ಮಾಡಿಲ್ಲ" ಎಂದ ಉಗ್ರಿ.

"ಗುಂಡ್ಳುಪ್ಯಾಟೆಲಿ ಸುತ್ತಾಡಿ ಬಂದಲ್ಲ, ಅಲ್ಲಿ ಯಲಕ್ಷನ್ನ ಯಂಗೆ ನ್ಯಡಿತ್ಲ?" ಎಂದಳು ಜುಮ್ಮಿ.

"ಅಲ್ಲಿ ಲಿಂಗಾಯಿತ್ರು ಎಡೂರಪ್ಪನ ಕೈಹಿಡುದ್ರು ಕಣೆ. ಅದ್ಕೆ ಅವುರ ಕ್ಯಾಂಡೇಟು ಮೋಹನಕುಮಾರಿ ಹಿಂದೆನೇ ಬಂದ."

"ಮೋಹನಕುಮಾರಿ ಯಾರ್ಲ?"

"ಅದೇ ಗೀತ ಕಣೇ. ಮಾದೇವ ಪ್ರಸಾದನ ಹೆಂಡತಿ. ಅವುಳಿಗೆ ಕೆಳಜಾತಿ ಜನ ಮತ್ತೆ ಒಂದಿಷ್ಟು ಲಿಂಗಾಯಿತ್ರು ಓಟಾಕಿದ್ರು. ಕ್ಯಳಜಾತಿಯೋರು ಕೈಹಿಡದದ್ರಿಂದ ಗೆದ್ಲು."

"ಅಂಗರೆ ಶಿವಾಚಾರದೋರು ಕೈಕೊಟ್ರೆ" ಎಂದ ಕಾಳಮಾವ.

"ಎಡೂರಪ್ಪ ನಾನೇ ಕ್ಯಾಂಡೇಟು ಅಂದಿದ್ರಿಂದ ಆ ಕಡಿಕೆ ವಾಲಿದ್ರು ಕಣ ಮಾವ."

"ಸಿವಾಚಾರದೋರು ಅಂದ್ರೆ ಯಾರ್ಲ?"

"ಲಿಂಗಾಯಿತ್ರು ಕಣೆ. ಆ ಕಡೆ ಅವುರನ್ನೆಲ್ಲ ಶಿವಚಾರದೋರು ಅಂತರೆ. ಉತ್ತರ ಕರ್ನಾಟಕದ ಲಿಂಗಾಯಿತ್ರೆ ಬ್ಯಾರೆ, ಇವುರೆ ಬ್ಯಾರೆ. ಅಂಗೆ ನೋಡಿದ್ರೆ ಬಸವಣ್ಣನಿಗೂ ಇವುರಿಗೂ ಸಮಂಧವೇಯಿಲ್ಲ. ಮಾತ್ರ ವಳ್ಳೆ ಜನ."

"ವಳ್ಳೆ ಜನ ಅಂತಿ. ಎಡೂರಪ್ಪನ ಕಡೆ ವಾಲಿದ್ರು ಅಂತಿ. ವಳ್ಳೆ ಜನಾಗಿದ್ರೆ ಮಾದೇವ ಪ್ರಸಾದನೆಡ್ತಿಗೆ ಓಟು ಮಾಡಬೇಕಾಗಿತ್ತು."

"ಜನಾಂಗದ ಲೀಡ್ರು ಎಡೂರಪ್ಪಲವೆ. ಹಾಳೂರಿಗೆ ಉಳದೋನೆ ಗೌಡ ಅಂತ ಆ ಬಿಜೆಪಿಗಳು ಎಡೂರಪ್ಪನೇ ನಮ್ಮ ನಾಯಕ ಅಂದವೆ. ಅದ ಉಳಿಸಿಗಳಕ್ಕೆ ಇವನು ಮುದಿ ಎತ್ತಿನಂಗೆ ಮುಸುಗರಿತನೆ."

"ಕಾಂಗ್ರೆಸಲ್ಲೂ ಅಂಗೆ ಅಲವೆ? ಸಿದ್ದರಾಮಯ್ಯನ ಬುಟ್ರೆ ಇನ್ಯಾವಿದ್ದವುಲ ಅಲ್ಲಿ?" ಎಂದ ಸೀರ.

"ತೂಕವಾದ ರಾಜಕಾರಣಿಗಳು ಇನ್ನು ಮುಂದೆ ಇಲವೇ ಇಲ್ಲವಲ್ಲ ಹೇಳು" ಎಂದ ಕಾಳಮಾವ.

"ಊ ಕಣ ಮಾವ. ದ್ಯಾವೇಗೌಡ್ರು, ಸಿದ್ದರಾಮಯ್ಯ, ಎಡೂರಪ್ಪ ಯಸ್ಸೆಂ ಕಿಸ್ಣನಂಥೋರು ಇನ್ನ ಮುಂದೆ ಬರದು ಕಷ್ಟ."

"ಯಸ್ಸೆಂ ಕಿಸ್ಣ ಈಗಾಗ್ಲೆ ಡೆಡ್‌ಪರಸನ್ ಅಲವೇನೊ ಉಗ್ರಿ?" ಎಂದುಕೊಂಡು ವಾಟಿಸ್ನೆ ಬಂದ.


"ಇವತ್ತೇನೂ ಅವುನಂಗಾಗಿರಬವುದು ಕಣೊ, ಆದ್ರು ತೂಕವಾದ ರಾಜಕಾರಣನೇ ಮಾಡ್ಯವುನೆ."

"ಅದು ತೂಕವಾದ ರಾಜಕಾರಣ ಅಲ್ಲ ಕಣೊ. ಯಾವ ಕಾಲದಲ್ಲೂ ಅವುಕಾಶವಾದ ತಲೆಲಿಟಗಂಡು ಉಪಾಯದ ಒಂಥರಾ ಉಗುರಬೆಚ್ಚಿನ ರಾಜಕಾರಣ ಮಾಡಿದೋನ್ನ ತೂಕವಾದ ರಾಜಕಾರಣ ಮಾಡಿದ ಅಂತಿಯಲ್ಲೋ ಉಗ್ರಿ."

"ಈಗೇನೊ ದಾರಿತಪ್ಪಿದ ಅಂತ ಯಲ್ಲಾನು ಅಲ್ಲಗಳಿಯಕ್ಕಾಯ್ತದಾ?"

"ತಪ್ಪಿರೊ ದಾರಿ ಯಾವುದು ಅನ್ನದರ ಮ್ಯಾಲೆ ಹಿಂದಿನ ಸಾಧನೆ ಆಳಿಬೇಕಾಯ್ತದೆ ಕಣೊ ಉಗ್ರಿ. ಅಷ್ಟಕ್ಕೂ ಅವುನ ಸಾಧನೆ ಯಾವದಪ್ಪ ಅಂದ್ರೇ ಅವುನು ಯಾವಾಗ ತಲೆ ಮ್ಯಾಕ್ಕೆ ವಿಗ್ಗಾಯ್ಕಂಡ ಅಂತ ಇವತ್ತಿಗೂ ಗೊತ್ತಾಗಿಲ್ಲ, ಅದೇ ಒಂದು ಸಾಧನೆ ನೋಡು."

"ಅದ್ಯಾಕ್ಲ ಅಂಗಾಡಿಕತ್ತಿ?"



"ಆಡಕಳೊ ಅಂತ ಕ್ಯಲಸ ಅವುನ್ಯಾಕ್ ಮಾಡಬೇಕಕ್ಕಾ? ಇವುನೇನು ಸಿನುಮ ಆಗುಟ್ರೆ? ಕತ್ತೆ ಬಾಲನೂ, ಕುದುರೆ ಜುಂಗನೂ ಕತ್ರಿಸಿ ಮಾಡಿರೊ ವಿಗ್ಗ ತಲಿಗಾಯ್ಕಂಡು ತಿರುಗ್ತನಲ್ಲ ನಾಚಿಗಾಗದಿಲವೇನಕ್ಕ?"

"ಅದ್ಯಾಕೆ ನಾಚಿಗಬೇಕು? ನಾನು ಚವುಲಿ ಹಾಯ್ಕತಿನಪ್ಪ."

"ನೀನು ಲೇಡೀಸು. ಉದ್ದ ಜಡೆ ಇರ್ಲಿ ಅಂತ ಆಡಿಷನಲ್ ಬತ್ತಿಯ ಒರಜಿನಲ್ ಕೂದ್ಲಿಗೆ ಜಾಯಿಂಟ್ ಮಾಡಿಕತ್ತಿ. ಆದ್ರೆ ಇವುನಿಗೇನಕ್ಕ. ಅಂಥಾ ನಮ್ಮ ಕನ್ನಡ ಸಿನುಮಾದ ಸಾರ್ವಭೌಮನೆ ವಿಗ್ಗಾಕಲಿಲ್ಲ. ರಾಜಕುಮಾರ ಮನಸು ಮಾಡಿದ್ರೆ ಯಂಥ ವಿಗ್ಗಾಕಬವುದಿತ್ತು. ಇನ್ನ ರಜನಿಕಾಂತನ್ನ ನೋಡಿದ್ದಿಯಾ. ಅಂಗೆ ಬುಂಡೆ ಕ್ಯಾತನಂಗೆ ಕಾಣ್ತನೆ. ಅಂತದ್ರಲ್ಲಿ ಇವುನು ವಿಗ್ಗಾಯ್ಕಂಡು ಯಾರಾರ ಹಾರಹಾಕಕ್ಕೆ ಬಂದ್ರೆ ತಲೆಕೊಡದೆ, ಗಾಳಿ ಬೀಸಿದಾಗ ತಲೆಮರಿಸಿಕೊಂಡು ಕಾಲ ಹಾಕ್ತನೆ. ಅದೇ ನಮ್ಮ ದ್ಯಾವೇಗೌಡ್ರು ನೋಡು, ಎಷ್ಟು ನ್ಯಾಚುರಲ್ಲಾಗ್ಯವುರೆ."

"ದ್ಯಾವೇಗೌಡ ಬುಡ್ಡ ಅವುನ್ಯಾವತ್ತು ಅಂಗೆಯಾ" ಎಂದ ಕಾಳಮಾವ.

"ನಾನಾಗ ಜಾಸ್ತಿ ಹೋಯ್ತಿದ್ದೆ ದೊಡ್ಡಪ್ಪ ದ್ಯಾವೇಗೌಡರತ್ರ. ಒಂದು ಸತೀ ಆಗ ಅವುರ ಪಾರ್ಟಿ ಲೀಡರೊಬ್ಬ ಬೋಳುತಲೆ ಸವುರಿಕೊಂಡು ದಲ್ಲಾದ. ಆಗ ಗೌಡ್ರು 'ಏನಪ್ಪಾ ಬೇಸರ ಪಡಬೇಡ. ಒಂದು ಕಾಲದಲ್ಲಿ ನಾನೂ ಎರಡು ಬಾಚಣಿಗೆ ಇಟ್ಟಿದ್ದೆ. ಆದ್ರೆ ಇವತ್ತು ಪರಿಸ್ಥಿತಿ ಏನಾಗಿದೆ' ಅಂದ್ರು. ದ್ಯಾವೇಗೌಡ್ರು ಇಷ್ಟು ಚನ್ನಾಗಿ ಜೋಕ್ ಮಾಡ್ತರೆ ಅಂತ ಗೊತ್ತೇ ಇರಲಿಲ್ಲ."

"ಹೋಗ್ಲಿ ಬುಡಿರ್ಲ. ಹುಟ್ಟೊ ಕೂದಲೆಸ್ಟು, ಉದರೊ ತುಬಟೆಸ್ಟು ಅಂತ ಅದ್ಯಾವ ಗನಂಧಾರಿ ಸುದ್ದಿ ಅಂತ ಮಾತಾಡಿರಿ."

"ಗನಂಧಾರಿ ಸುದ್ದಿನೆ ದೊಡ್ಡವ್ರ ಜನಗಳ ಬಗ್ಗೆ ನಿಜವಾದ ಕಾಳಜಿ ಇದ್ದೋನು ಕೂದ್ಲ ಬಗ್ಗೆ ಯೋಚನೆ ಮಾಡದಿಲ್ಲ."

"ಚನ್ನಾಗಿ ಕಾಣಸ ಅಂತ ವಿನೋ ಮಾಡಿಕಂಡ ಬುಡ್ಡ" ಎಂದಳು ಜುಮ್ಮಿ.

"ಚನ್ನಾಗಿ ಕಾಣಬೇಕು ಅನ್ನದು ಹೆಣ್ಣುಮಕ್ಕಳ ಆಸೆ ಕಣಕ್ಕ. ಈಗ ನೀನು ಹಿಂಗೆ ತಯಾರಾಗಿ ಬಂದಿದ್ಯಿ. ಆದ್ರೆ ಯಸ್ಸೆಂ ಕಿಸ್ಣ ನಿನಗಿಂತ ಜಾಸ್ತಿ ಹೊತ್ತು ಕನ್ನಡಿ ಮುಂದೆ ನಿಂತಿದ್ದು ಪ್ರೇಮಕ್ಕ 'ಹೋಗಿ ಬನ್ನಿ, ವಿಗ್ಗು ಉಷಾರು' ಅಂತ ಹೇಳಿದ ಮ್ಯಾಲೆ ಹೊರಗೆ ಬರದು. ಹೊರಗೆ ಬಂದ್ರು ನೀನೇಳೊ ವಿಷಯ ಪೂರ್ತಿ ತಲೆವಳಿಕೆ ಹೋಗದಿಲ್ಲ. ವಿಗ್ಗಿನ ಬಗ್ಗೆನೆ ಯೋಚನೆ ಮಾಡ್ತನೆ. ಅಲವೇನೊ ಉಗ್ರಿ?"

"ಅದೇನೊ ನಿಜ. ಕ್ರಿಷ್ಣ ಯಾವಾಗ್ಲೂ ಎಚ್ಚರಿಕೆಯಾಗಿರತನೆ."

"ಕಾಂಗ್ರೆಸ್ಸಿಗಿಂತ ವಿಗ್ಗೇ ಮುಖ್ಯ ಅಂತ ಆಯ್ತಪ್ಪ."

"ಯಾಕೋ ನನಿಗವುನು ಗುಂಡ್ಳುಪ್ಯಾಟೇಲಿ ಎಡೂರಪ್ಪನ ಪರಿವಾರದ ಜೊತೆ ನಿಂತಿದ್ದು ನೋಡಿದಾಗ ಆ ಬಂಗಾರಪ್ಪ ಮೋದಿ ಜೊತೆ ನಿಂತಿದ್ದು ನೋಡಿದನಲ್ಲ ಅಂಗಾಯ್ತು. ಆಮ್ಯಾಲೆ ಈ ವಯಿಸಾದವುಕ್ಯಲ್ಲ ಯಾಕೆ ಈತರ ತಲಿಕೆಟ್ಟೋಯ್ತದೆ ಅಂತ."

"ಆ ಎಂ.ಟಿ. ರಾಮರಾವು ಕಡಿಗಾಲದಲ್ಲಿ ಅವುಳ್ಯಾವಳೋ ಕಟಿಗಂತಿದ್ದ ಕಂಡ್ಳ" ಎಂದ ಸೀರ.

"ಅದು ಸೆಕ್ಸ್‌ಪ್ರಾಬ್ಲಮ್ಮು ಚಿಗಪ್ಪ, ಆದ್ರೆ ಯಸ್ಸೆಂ ಕಿಸ್ಣನ ಪ್ರಾಬ್ಲಂ ಏನು ಅಂತ ಯಾರಿಗೂ ಗೊತ್ತಾಗಿಲ್ಲ."

"ಗುಂಡ್ಳುಪ್ಯಾಟೆ, ನಂಜನಗೂಡಲ್ಲಿ ಅವುನ ಕ್ಯಾನವಾಸಿಂದ ಓಟು ಬಂದವೇನ್ಲ?"

"ಊ ಕಣೆ. ನಂಜನಗೂಡಲಿ ಸುಮಾರು ಎಂಟು ಓಟು ಬಂದವಂತೆ. ಗುಂಡ್ಳುಪ್ಯಾಟೇಲಿ ಅದು ಮೂರೋಟಂತೆ" ಎಂದ ಉಗ್ರಿ.

"ಅದ್ಯಂಗೊತ್ತಾಯ್ತೂ?"

"ಅವುನ ಸಮಂದಿಕರು ಅಷ್ಟೆ ಅಂತೆ ಇರದು" ಎಂದು ನಗಾಡಿದ ಉಗ್ರಿ.


"ಈ ಬೈಯಲಕ್ಷನ್ನಿಂದ ಬೇಜಾರಾಗಿರದು ಯಾರಿಗೆ ಗೊತ್ತೇನೊ?"

"ಯಾರಿಗೆ?"

"ಪಬ್ಲಿಕ್ ಟಿವಿ ಕದ್ದಿ ರಂಗನಿಗೆ ಕಣ್ರೊ. ರಿಜಲ್ಟು ಬಂದಾಗ ಅವುನ ಮುಖ ಕಾಲಿ ಮಂಗಳಾರತಿ ತಟ್ಟೆ ನೋಡಿದ ಪುರೋಹಿತನ ಮಕದಂಗಾಗಿತ್ತು."

"!?" ■

ಗುರುಪ್ರಸಾದ್‌ಗೆ ಅಂಬೇಡ್ಕರ್ ಪ್ರಶಸ್ತಿ



ಗುರುಪ್ರಸಾದ್ ಕೆರಗೋಡು ಅವರಿಗೆ ಅಂಬೇಡ್ಕರ್ ಪ್ರಶಸ್ತಿ ಹುಡುಕಿಕೊಂಡು ಬಂದಿದೆ. ಮಂಡ್ಯದ ಆತ್ಮಸಾಕ್ಷಿಯಂತಿದ್ದ ಎಚ್.ಎಲ್.ಕೇಶವಮೂರ್ತಿಯವರ ನಿಧನದ ಪ್ರಯುಕ್ತ ಸಂತಾಪ ಸಭೆ ಏರ್ಪಡಿಸುತ್ತಿರುವ ಸಂದರ್ಭದಲ್ಲಿ, ಪ್ರಶಸ್ತಿಗೆ ಪರಿಗಣಿಸುವ ಕಮಿಟಿಯಿಂದ 'ನಿಮ್ಮ ವೈಯಕ್ತಿಕ ವಿವರ ಕಳುಹಿಸಿ' ಎಂಬ ಸಂದೇಶ ಬಂದಾಗಲೂ ಇದು ಅಂಬೇಡ್ಕರ್ ಪ್ರಶಸ್ತಿ ಸಲುವಾಗಿ ಎಂಬುದು ಗುರುಪ್ರಸಾದ್‌ಗೆ ಗೊತ್ತಿರಲಿಲ್ಲ, ಏಕೆಂದರೆ ಆ ಪ್ರಶಸ್ತಿ ಕಡೆ ಅವರ ಗಮನ ಹರಿದಿರಲಿಲ್ಲ.

ಇನ್ನು ಪ್ರಶಸ್ತಿ ಪ್ರಕಟಿಸುವ ಕಮಿಟಿಯವರೂ ಎನ್‌ಸೈಕ್ಲೋಪಿಡಿಯಾದಷ್ಟು ದೊಡ್ಡ ಬಯೋಡಾಟಗಳನ್ನು ಕಳುಹಿಸಿದ್ದ ಎಂಬತ್ತು ಮಂದಿಯ ವಿವರವನ್ನು ಬದಿಗಿಟ್ಟು ದಲಿತ ಸಂಘರ್ಷ ಸಮಿತಿ ಹುಟ್ಟಿಕೊಂಡ ಆರಂಭದಿಂದಲೂ ಈ ನೆಲದ ಎಲ್ಲವನ್ನು ಗ್ರಹಿಸಿದ ಸಮತೂಕದ ವ್ಯಕ್ತಿಯಾಗಿ ಸೌಮ್ಯ ಸ್ವಭಾವದಿಂದಲೇ ಚಳವಳಿಗಳ ಮುಂಚೂಣಿಯಲ್ಲಿದ್ದು ಮಂಡ್ಯ ಜಿಲ್ಲಾ ದಲಿತರಿಗೆ ಒಂದು ಘನತೆ ತಂದುಕೊಟ್ಟಿದ್ದ ಗುರುಪ್ರಸಾದ್ ಕೆರಗೋಡು ಹೆಸರು ಹೊಳೆದ ಕೂಡಲೇ ಪ್ರಶಸ್ತಿ ಪ್ರಕಟಿಸಿದರು.

ಬಹು ಎತ್ತರದ ಎಚ್.ಎಲ್. ಕೇಶವಮೂರ್ತಿಯವರ ನೆರಳಲ್ಲೇ ಬೆಳೆದ ಗುರುಪ್ರಸಾದ್ ಎಚ್.ಎಲ್.ಕೆಯ ವರಂತೆಯೇ ಯಾವ ಸನ್ನಿವೇಶದಲ್ಲೂ ತಾಳ್ಮೆ ಕಳೆದುಕೊಂಡ ವರಲ್ಲ, ಉದ್ವೇಗದಿಂದ ಭಾಷಣ ಮಾಡಿದವರಲ್ಲ. ಜವಾಬ್ದಾರಿಯುತ ನಾಯಕ ಹೇಗಿರಬೇಕೆಂಬುದನ್ನು ತೋರಿಸಿ ಕೊಟ್ಟವರು. ಅವರ ನಾಲ್ಕು ದಶಕದ ಹೋರಾಟದಲ್ಲಿ ಯಾರಿಂದಲೂ ಟೀಕೆಗೆ ಗುರಿಯಾದವರಲ್ಲ.

ಅವರ ಹುಟ್ಟದೂರಾದ ಕೆರಗೋಡು ಮಂಡ್ಯ ಜಿಲ್ಲೆಯಲ್ಲೇ ವಿಶೇಷವಾದ ಊರು. ಇಲ್ಲಿ ಓದಿದ ವಿದ್ಯಾವಂತ ದಲಿತ ಹುಡುಗರು ಬ್ಯಾಂಕು, ಸರಕಾರಿ ಕೆಲಸ ಮತ್ತು ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡು ಬಹಳ ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಅಂಬೇಡ್ಕರ್ ಜಯಂತಿಯನ್ನು ಆಚರಿಸುತ್ತ ಬರುತ್ತಿದ್ದಾರೆ. ಇಲ್ಲಿ ಎಲ್ಲ ಸಮಾಜದವರೂ ಬಂದು ಕುಳಿತು ನಾಡಿನ ಸಾಂಸ್ಕೃತಿಕ ಚಳವಳಿ ಕುರಿತ ಉಪನ್ಯಾಸ ಕೇಳುತ್ತಾರೆ. ಗುರುಪ್ರಸಾದ್ ತರದ ನಾಯಕರು ರೂಪಿಸಿದ ಈ ಸಾಮರಸ್ಯ ಬೇರೆಡೆಗೆ ವಿಸ್ತರಿಸಬೇಕಷ್ಟೆ.

ಗುರುಪ್ರಸಾದರ ನಾಲ್ಕು ದಶಕದ ಹೋರಾಟ ಎಂದೂ ಮುಗಿಯದ ಸಮಸ್ಯೆಯನ್ನೊಳಗೊಂಡಿವೆ. ಈ ನಾಡಿನ ಕೆಲ ಸಮಸ್ಯೆಗಳು ಚಳವಳಿ ಮುಖಾಂತರ ಪರಿಹಾರವನ್ನೂ ಅಂತ್ಯವನ್ನೂ ಕಂಡಿದ್ದಿದೆ. ಆದರೆ ದಲಿತ ಚಳವಳಿ ಮೈಮೇಲೆ ಎಳೆದುಕೊಂಡು ಹೋರಾಡುವ ಸಮಸ್ಯೆಗಳು ಅಂತ್ಯ ಕಾಣ ದಂತವು. ಈಗಂತೂ ಗಾಂಧಿ ಕೊಂದವರ ಕೈಗೆ ದೇಶ ಸಿಕ್ಕಿಕೊಂಡಿರುವುದರಿಂದ ದಿನನಿತ್ಯ ಹೊಸ ಹೊಸ ಸಂಘರ್ಷಗಳು ಉದ್ಭವಿಸುತ್ತಿವೆ.

ದಸಂಸ ಮಂಡ್ಯ ಜಿಲ್ಲೆಯಲ್ಲಿ ಹುಟ್ಟಿಕೊಂಡಾಗ ದಲಿತರ ಸಮಸ್ಯೆಯೊಳಗೇ ಎಲ್ಲವೂ ಅಂತರ್ಗತವಾಗಿದ್ದವು. ಮೊದಲನೆಯದಾಗಿ ಅಸ್ಪೃಶ್ಯತೆ, ಜಾತೀಯತೆ, ಭೂಮಿ ಹೋರಾಟ ಮತ್ತು ಹೆಂಡ ಸಾರಾಯಿ ವಿರುದ್ಧದ ಚಳವಳಿ ಅಲ್ಲದೆ ಮಹಿಳಾ ದೌರ್ಜನ್ಯವೂ ಇವರ ಹೋರಾಟದ ಭಾಗವಾಗಿತ್ತು. ಇದರಲ್ಲಿ ಮೇಲುಜಾತಿಯ ಹೆಂಗಸರ ಮೇಲಿನ ದೌರ್ಜನ್ಯಗಳೂ ದಸಂಸದ ನಾಯಕರನ್ನ ಹುಡುಕಿಕೊಂಡು ಬರುತ್ತಿದ್ದವು. ಈ ಪೈಕಿ ನಮ್ಮೂರಿನ ಸೊಸೆಯೊಬ್ಬಳು ನಾಗತಿಹಳ್ಳಿಯಲ್ಲಿ ಬಹಿಷ್ಕಾರಗೊಂಡ ಸಮಸ್ಯೆಯನ್ನು ಹೊತ್ತು ಗುರುಪ್ರಸಾದ್ ಲಂಕೇಶರ ಜೊತೆ ಬಂದಿದ್ದರು. ದಲಿತ ಸಂಘರ್ಷ ಸಮಿತಿಯ ಯಾವುದೇ ಹೋರಾಟ ಇನ್ನೂ ಅಂತ್ಯ ಕಂಡಿಲ್ಲದಿರುವುದೊಂದು ವಿಶೇಷ! ಈ ಪೈಕಿ ಕೆಲ ನಾಯಕರು ಅಡ್ಡದಾರಿ ಹಿಡಿದು ಉಳಿದ ಆಯುಸ್ಸನ್ನಾದರೂ ಸದುಪಯೋಗಪಡಿಸಿಕೊಳ್ಳೋಣ ಎಂಬಂತೆ ಸರಕಾರದ ಸಮೀಪ ಓಡಾಡುತ್ತಾ ಶರೀರವನ್ನು ಬೆಳೆಸಿಕೊಂಡರೆ, ಈ ಗುರುಪ್ರಸಾದ್ ತಮ್ಮ ಬದ್ಧತೆಯಿಂದ ವಿಮುಖರಾಗಿಲ್ಲ.


ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗ ಮುಖ್ಯಮಂತ್ರಿಯವರ ಬಳಿಗೆ ಹೋದ ಗುರುಪ್ರಸಾದ್ ಸಿದ್ದರಾಮಯ್ಯನವರ ಮುಂದಿಟ್ಟ ಬೇಡಿಕೆಯೇ ಅವರ ಸಾಮಾಜಿಕ ಕಾಳಜಿಗೆ ಸಾಕ್ಷಿಯಾಗಿತ್ತು. ಸಿದ್ದರಾಮಯ್ಯನವರನ್ನು ಭೇಟಿಯಾದ ಗುರುಪ್ರಸಾದ್ "ನೋಡಿ ಸಾರ್, ನಮ್ಮ ನಾಡಿನ ಹಳ್ಳಿಗಾಡಿನಲ್ಲಿ ಆಹಾರದ ಕೊರತೆಯಿಂದ, ಅಪೌಷ್ಟಿಕತೆಯಿಂದ ಕೆಲ ಹೆಣ್ಣುಮಕ್ಕಳು ಋತುಮತಿಯರೂ ಆಗದೆ ಸೊರಗಿ ಹಾಗೇ ಉಳಿದುಬಿಟ್ಟಿದ್ದಾರೆ. ಅವರಿಗೆ ಮದುವೆಯಿಲ್ಲ, ತಂದೆತಾಯಿ ತೀರಿಕೊಂಡ ನಂತರ ಅಣ್ಣತಮ್ಮಂದಿರೂ ಕೂಡ ಅವರನ್ನು ಇಟ್ಟುಕೊಳ್ಳುವುದಿಲ್ಲ, ಇಂತಹ ಹೆಣ್ಣು ಮಕ್ಕಳಿಗೆ ನಿಮ್ಮ ಬಜೆಟ್ಟಿನಲ್ಲಿ ಏನಾದರೂ ಮಾಡಲು ಸಾಧ್ಯವೇ?" ಎಂದು ಮುಖ ನೋಡಿದರು. ಇಂತವರೂ ಇರಬಹುದೇ! ಅಲ್ಲದೆ ಅಂತಹ ಕೃಶಾಂಗಿಯರನ್ನು ಪತ್ತೆ ಹಚ್ಚಿರುವ ಗುರುಪ್ರಸಾದ್ ಬಗ್ಗೆ ಮೆಚ್ಚಿಕೊಂಡ ಸಿದ್ದರಾಮಯ್ಯನವರು, "ಹಾಗಿದ್ರೆ ಒಂದು ಕೆಲಸ ಮಾಡೋಣ. ನಲವತ್ತೊರಸಾಗದೆಯಿದ್ರು ಮದಿವಾಗದೆಯಿರೊ ಎಲ್ಲಾ ಹೆಣ್ಣು ಮಕ್ಕಳಿಗೂ ಸಹಾಯ ಮಾಡೋಣ" ಎಂದು ಹೇಳಿದ್ದಲ್ಲದೆ, ಬಜೆಟ್ಟಿನಲ್ಲಿ ಮನಸ್ವಿನಿ ಎಂಬ ಕಾರ್ಯಕ್ರಮ ದಡಿ ಒಂದು ಸಣ್ಣ ಸಹಾಯ ದೊರಕುವಂತೆ ಮಾಡಿದರು.

ಗುರುಪ್ರಸಾದ್ ಈ ಸರಕಾರದ ಸಮೀಪಕ್ಕೆ ಹೋಗಿ ಹೆಣ್ಣುಮಕ್ಕಳ ಪರ ಕೇಳಿಕೊಂಡ ಸಹಾಯದ ಮೊತ್ತ ಮುಂದಿನ ಬಜೆಟ್ಟುಗಳಲ್ಲಿ ಜಾಸ್ತಿ ಮೊತ್ತವಾಗಬಹುದು. ಸಾಮಾನ್ಯವಾಗಿ ಗುರುಪ್ರಸಾದ್ ಚಿಂತನೆ ಹೀಗಿರುತ್ತವೆ. ಇದು ಒಂದು ಕೋಮಿನ ಸಮಸ್ಯೆಯಾಗದೆ ಎಲ್ಲಾ ನೊಂದ ಜನರ ಸಮಸ್ಯೆಯಾಗಿರುತ್ತದೆ.

ಗುರುಪ್ರಸಾದ್ ಚಿಂತನೆಯಲ್ಲೇ ಅಂಬೇಡ್ಕರ್ ಆಶಯ ಮತ್ತು ಹೋರಾಟಗಳಿರುವುದರಿಂದ ರಾಜ್ಯ ಸರಕಾರ 2017ನೇ ಸಾಲಿನ ಅಂಬೇಡ್ಕರ್ ಪ್ರಶಸ್ತಿ ಬಂದಿದೆ. ಆಯ್ಕೆ ಕಮಿಟಿಯಲ್ಲಿದ್ದ ಕವಿ ಎಸ್.ಜಿ. ಸಿದ್ದರಾಮಯ್ಯನವರಿಗೆ ಗುರುಪ್ರಸಾದ್ ಹೆಸರು ಹೊಳೆದಕೂಡಲೇ ಮರುಮಾತಿಲ್ಲದೇ ಪ್ರಕಟಿಸಿದ್ದಾರೆ. ಎಲ್ಲರೂ ಒಪ್ಪಿಕೊಂಡಿದ್ದಾರೆ. ನಿಜಕ್ಕೂ ಪ್ರಶಸ್ತಿಗಳು ಯೋಗ್ಯರಿಗೆ ಸಂದಾಗ ಮಾತ್ರ ಅವುಗಳಿಗೆ ಮತ್ತು ಆಯ್ಕೆ ಕಮಿಟಿಗೆ ಹಾಗು ಪಡೆದವರಿಗೊಂದು ಘನತೆ ಪ್ರಾಪ್ತಿಯಾಗುವುದು.

ಈ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ಗುರುಪ್ರಸಾದ್ ಮತ್ತೊಂದು ಜವಾಬ್ದಾರಿ ಹೊರಲು ತಯಾರಾಗಿದ್ದಾರೆ. ಅದೇನೆಂದರೆ ಮಂಡ್ಯ ಜಿಲ್ಲೆಯ ಜನಪರ ಚಳವಳಿಯ ರೂವಾರಿಗಳಾಗಿದ್ದ ಎಚ್.ಎಲ್. ಕೇಶವಮೂರ್ತಿಯವರ ಟ್ರಸ್ಟ್ ಮಾಡಿ ಅವರ ಹೆಸರಿನಲ್ಲಿ ಪ್ರತಿವರ್ಷ ಮಂಡ್ಯದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವ ತೀರ್ಮಾನ ತೆಗೆದುಕೊಂಡಿದ್ದಾರೆ. ಕಡೆಗೂ ಎಚ್‌ಎಲ್‌ಕೆಯವರ ವಾರಸುದಾರರು ಯಾರು ಎಂಬುದು ಇತ್ಯರ್ಥಗೊಂಡಂತಾಗಿದೆ. ■

ಉಪಚುನಾವಣೆ: ಬಿದ್ದ ಬಿಜೆಪಿಯ ಮೀಸೆ ಮಣ್ಣೇ ಆಗಿಲ್ಲವಂತೆ



ನಂಜನಗೂಡು, ಗುಂಡ್ಲುಪೇಟೆ ಉಪಚುನಾವಣೆಗಳಲ್ಲಿ 'ಪತ್ರಿಕೆ' ಅಂದಾಜಿಸಿದ್ದಂತೆ ಎರಡೂ ಕಡೆ ಕಾಂಗ್ರೆಸ್ ಅಭ್ಯರ್ಥಿಗಳೆ ಗೆದ್ದಿದ್ದಾರೆ. ಈ ಚುನಾವಣೆಯಲ್ಲಿ ಸ್ವಾಭಿಮಾನವೆಂಬ ನಾಲ್ಕಕ್ಷರವನ್ನೇ ಬಂಡವಾಳವಾಗಿಸಿಕೊಂಡು ಪಣಕ್ಕಿಟ್ಟಿದ್ದ ಮಾಜಿ ಸಚಿವ ವಿ.ಶ್ರೀನಿವಾಸ ಪ್ರಸಾದ್‌ರಿಗೆ ಮತದಾರ ಭರ್ಜರಿ ಸನ್ಮಾನವನ್ನೇ ಮಾಡಿ ಕಳುಹಿಸಿದ್ದಾನೆ. ಶ್ರೀನಿವಾಸ್ ಪ್ರಸಾದ್ ಮತ್ತು ಬಿಜೆಪಿಯವರು ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ಗಾದೆಯ ಜೋತುಬಿದ್ದವರಂತೆ ಹೇಳಿಕೆ ನೀಡುತ್ತಿದ್ದಾರೆ.

ಗುಂಡ್ಲುಪೇಟೆಯಲ್ಲಿ ಗೀತಾ ಮಹದೇವ ಪ್ರಸಾದ್ 90,258 ಮತಗಳಿಸಿ ಬಿಜೆಪಿಯ ಸಿ.ಎಸ್.ನಿರಂಜನ್ ಕುಮಾರ್ (79,381) ವಿರುದ್ಧ 10877 ಮತಗಳ ಅಂತರದಿಂದ ಜಯಗಳಿಸಿದ್ದಾರೆ. ನಿರಂಜನ್‌ಕುಮಾರ್ ಸತತ ಮೂರನೇ ಬಾರಿಗೆ ಸೋಲನುಭವಿಸಿದ್ದಾರೆ. ನಂಜನಗೂಡಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕಳಲೆ ಕೇಶವಮೂರ್ತಿ 21,334 ಮತಗಳ ಭಾರೀ ಅಂತರದಿಂದ ಬಿಜೆಪಿಯ ಶ್ರೀನಿವಾಸಪ್ರಸಾದ್‌ರನ್ನು ಮಣಿಸಿದ್ದಾರೆ. ಕೇಶವಮೂರ್ತಿಗೆ 86,212 ಮತಗಳು, ಶ್ರೀನಿವಾಸಪ್ರಸಾದ್‌ಗೆ 64,878 ಮತಗಳು ಬಂದಿವೆ.

ಹೆಚ್ಚೂಕಮ್ಮಿ ಇಡೀ ದೇಶದ ಗಮನ ಸೆಳೆದಿದ್ದ ಉಪಚುನಾವಣೆಗಳ ಫಲಿತಾಂಶ ಹೊರಬಿದ್ದು, ಗೆದ್ದವರು ಉಸ್ಸಪ್ಪಾ ಅಂತ ಸೋತವರು ಉಸ್ಸಪ್ಪಾ ಅಂತ ಎದುಸಿರು ಬಿಡುತ್ತಿದ್ದರೂ ಸಾರ್ವಜನಿಕರು, ಸ್ಥಳೀಯ ಮುಖಂಡರು, ನಾಯಕರ ವಲಯದಲ್ಲಿ ಚರ್ಚೆಯಿನ್ನು ನಡೆಯುತ್ತಲೇ ಇದೆ. 2018ರ ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿ ಅಂತಲೇ ಹೇಳಲಾಗುತ್ತಿದ್ದ ಉಪಚುನಾವಣೆಗಳನ್ನು ಇದೀಗ ಬಿಜೆಪಿ ಲೆಕ್ಕಕ್ಕೂ ಇಲ್ಲದಂತೆ ವರ್ತಿಸುತ್ತಿರೋದು ಜನರಿಗೆ ಅಯ್ಯೋ ಪಾಪ ಎನ್ನುವ ಭಾವನೆ ಮೂಡಿಸುವಂತಿದೆ.


ಉಪ್ಪಾರ ಸಮುದಾಯದ ಶೇ.50 ಹಾಗೂ ಸಹಸ್ರಾರು ಮುಸ್ಲಿಂ ಮತಗಳು ತಮಗೆ ಒಲಿದು ಬರುತ್ತವೆ ಎಂಬ ಲೆಕ್ಕದಲ್ಲಿದ್ದ ಪ್ರಸಾದ್‌ಗೆ ಎಲ್ಲಾ ಹಿಂದುಳಿದ ವರ್ಗಗಳು ಕಾಂಗ್ರೆಸ್‌ಗೆ ಬಲ ತುಂಬಿರೋದು ಅರಗಿಸಿಕೊಳ್ಳಲಾಗದ ವಿಷಯ. ಯಾಕೆಂದರೆ ಬಿಜೆಪಿಯಲ್ಲಿ ಲಿಂಗಾಯತ ಮತದಾರರನ್ನು ಹೊರತುಪಡಿಸಿ ಹಿಂದುಳಿದ ಸಮುದಾಯಗಳನ್ನು ಸೆಳೆಯಬಲ್ಲ ಪ್ರಬಲ ನಾಯಕರೇ ಇರಲಿಲ್ಲ. ಅದರಲ್ಲೂ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯನಂತಹ ಅಹಿಂದ ನಾಯಕನಿರುವಾಗ ಬಿಜೆಪಿಯಲ್ಲಿ ಆ ಕೊರತೆ ಎದ್ದು ಕಾಣುತ್ತಿತ್ತು. ಮುಖ್ಯವಾಗಿ ಬಿಜೆಪಿ ಲಿಂಗಾಯತ ಜಾತಿಯೊಂದನ್ನೆ ಟಾರ್ಗೆಟ್ ಮಾಡಿಕೊಂಡಿದ್ದರಿಂದ ಉಳಿದ ಜಾತಿಗಳು ಸಹಜವಾಗಿಯೇ ಒಗ್ಗೂಡಲು ವೇದಿಕೆ ಒದಗಿಸಿದಂತಾಗಿದೆ.

ಯಡಿಯೂರಪ್ಪ ತನ್ನನ್ನು ತಾನು ಹಿಂದುಳಿದ ವರ್ಗಗಳ ಲೀಡರು ಅಂತ ಬಿಂಬಿಸಿಕೊಳ್ಳುವ ಯತ್ನ ಮಾಡಿದರೂ ಅದು ಸಿದ್ದರಾಮಯ್ಯನ ಪ್ರಾಮಾಣಿಕ ಅಹಿಂದ ಅಜೆಂಡಾದ ಮುಂದೆ ನಿಲ್ಲುವಷ್ಟು ಶಕ್ತವಾದದ್ದಲ್ಲ. ಯಾಕೆಂದರೆ ಯಡಿಯೂರಪ್ಪ ಸುತ್ತ ಇರುವ ಪಟಾಲಂ ಅವರನ್ನು ಲಿಂಗಾಯತ ನಾಯಕ ಎಂದು ಬಿಂಬಿಸುವುದಕ್ಕೇ ಸಮಯ ತೆಗೆದುಕೊಳ್ಳುತ್ತಿವೆ ಮತ್ತು ಯಡಿಯೂರಪ್ಪ ಅದನ್ನು ಎನ್‌ಜಾಯ್ ಕೂಡಾ ಮಾಡುತ್ತಿರೋದು ರಹಸ್ಯವೇನಲ್ಲ. ಉಪಚುನಾವಣೆಗೂ ಮುನ್ನ 'ಈ ನಿಮ್ಮ ಯಡ್ಯೂರಪ್ಪ ಮುಂದೆ ಸಿಎಂ ಆಗಬೇಕಂದ್ರೆ ಬಿಜೆಪಿಗೆ ಮತ ನೀಡಿ. ಇಲ್ಲಿ ನಿಂತಿರೋದು ಶ್ರೀನಿವಾಸ್ ಪ್ರಸಾದ್ ಅಲ್ಲ ನಾನು ಅಂದುಕೊಳ್ಳಿ' ಅಂತ ಲಿಂಗಾಯತರಿಗೆ ಫರ್ಮಾನು ಹೊರಡಿಸಿದಾಗಲೇ ಸಣ್ಣಪುಟ್ಟ ಜಾತಿಗಳು ಒಗ್ಗೂಡುವ ಮನಸ್ಸು ಮಾಡಿದ್ದವು. ಯಡಿಯೂರಪ್ಪ ಎಂಥಾ ಹುಂಬ ಎಂದರೆ ಸ್ವತಃ ನಾನೇ ಚುನಾವಣೆಗೆ ಸ್ಪರ್ಧಿಸಿರುವುದು ಎಂದು ಭಾವಿಸಿ ಮತ ನೀಡಿ ಎಂದು ಹೇಳಿಬಿಟ್ಟರೆ ಶೇಕಡಾ ನೂರಕ್ಕೆ ನೂರಷ್ಟು ಲಿಂಗಾಯತ ಮತಗಳು ಬಿಜೆಪಿಯ ಬುಟ್ಟಿಗೆ ಬಂದು ಬೀಳುತ್ತವೆ ಅಂದುಕೊಂಡಿದ್ದರು. ಆದರೆ ಕಮಲಕ್ಕೆ ದಕ್ಕಿದ್ದು ಶೇ.50ರಷ್ಟು ಲಿಂಗಾಯತ ಮತಗಳು ಮಾತ್ರ!


ವಿ.ಶ್ರೀನಿವಾಸ ಪ್ರಸಾದ್ ಎರಡು ಬಾರಿ ಶಾಸಕರಾಗಿ, ಸಚಿವರಾಗಿ ಈ 8 ವರ್ಷಗಳ ಅವಧಿಯಲ್ಲಿ ಕ್ಷೇತ್ರದ ಜನರ ವಿಶ್ವಾಸ ಉಳಿಸಿಕೊಂಡಿಲ್ಲ. ಅಭಿವೃದ್ಧಿ ಕೆಲಸಗಳನ್ನೂ ಮಾಡಿಲ್ಲ. ಜನರ ಕೈಗೆ ಸಿಗುತ್ತಿರಲಿಲ್ಲ. ಅವರನ್ನು ನೋಡಲು ಮನೆಗೆ ಹೋದರೆ 'ಸಾಹೇಬರಿಗೆ ಆರೋಗ್ಯ ಸರಿಯಿಲ್ಲ' ಎನ್ನುವ ಘೋಷವಾಕ್ಯ ಜನರಿಗೆ ಬಾಯಿಪಾಠದಂತಾಗಿತ್ತು. ಇನ್ನು ಯಾವ ಬಿಜೆಪಿಯನ್ನು ಅವರು ಕೋಮುವಾದಿ, ಮೂಲಭೂತವಾದಿ ಪಕ್ಷವೆಂದು ಬೈಯುತ್ತಿದ್ದರೋ ಅದೇ ಪಕ್ಷದ ಹೊಸಿಲಿಗೆ ಹೋಗಿಬಿದ್ದದ್ದು ಜನರಲ್ಲಿ ಅಸಹ್ಯ ಭಾವನೆ ಮೂಡಿಸಿತ್ತು. ಇದು ಅವರ ಅಧಿಕಾರ ಚಪಾಹಪಿಯನ್ನು ಜನರ ಮುಂದಿಟ್ಟಿತ್ತು. ದಲಿತ ಮತದಾರರಿಗೆ ಇದನ್ನು ಅರಗಿಸಿಕೊಳ್ಳಲಾಗಿರಲಿಲ್ಲ.

ಚುನಾವಣಾ ಪ್ರಚಾರ ಸಂದರ್ಭದಲ್ಲಿ ಪ್ರಸಾದ್ ಅವರು ರೋಡ್‌ಶೋ ಮಾಡುತ್ತಿದ್ದಾಗ ಆಪ್ತರೊಬ್ಬರು 'ಸಾರ್ (ಪ್ರಸಾದ್) ಆ ಕಳಲೆ ಕೇಶವಮೂರ್ತಿ ಎಲ್ಲರ ಕಾಲಿಗೆ ಬಿದ್ದು ಓಟ್ ಕೇಳ್ತಾ ಇದ್ದಾರೆ. ನೀವು ಕೊನೆ ಪಕ್ಷ ಕೈನಾದ್ರು ಮುಗೀರಿ' ಅಂತ ಹೇಳಿದ್ದಕ್ಕೆ ಪ್ರಸಾದ್ 'ರೀ ನಾನು 40 ವರ್ಷದಿಂದ ರಾಜಕೀಯ ಮಾಡ್ತಾ ಇದ್ದೀನಿ. ಪ್ರಸಾದ್ ಏನು ಎಲ್ಲರಿಗೂ ಗೊತ್ತು, ನಾನು ಪ್ರಚಾರಕ್ಕೆ ಬರಬೇಕಾಗಿಲ್ಲ, ಜನ ನನ್ನ ಹೆಸರು ಕೇಳಿದ್ರೇನೆ ಓಟ್ ಹಾಕ್ತಾರೆ' ಅಂತ ಹೇಳಿದ್ದರಂತೆ. ಅದನ್ನು ಪುಷ್ಟೀಕರಿಸುವಂತೆ ಅನಾರೋಗ್ಯದ ಕಾರಣದಿಂದಲೋ ಅಥವಾ ತನ್ನ ಮುಂದೆ ಆ ಕಳಲೆ ಯಾವ ಲೆಕ್ಕ ಅನ್ನೋ ಅಹಂಕಾರದಿಂದಲೋ ಪ್ರಚಾರದಿಂದಲೇ ದೂರ ಉಳಿದರು. ಅದೇ ಅವರಿಗೆ ಮುಳುವಾಯ್ತು.

ಇನ್ನು ಉತ್ತರಪ್ರದೇಶದ ದಿಗ್ವಿಜಯದ ಗಾಳಿ ನಂಜನಗೂಡು ಮತ್ತು ಗುಂಡ್ಲುಪೇಟೆಯಲ್ಲಿಯೂ ಬೀಸುತ್ತದೆ ಅಂದುಕೊಂಡಿದ್ದ ಬಿಜೆಪಿಗೆ ಇದು ಮರ್ಮಾಘಾತ. ಲಿಂಗಾಯತ, ದಲಿತ ಸಮುದಾಯಗಳನ್ನು ಮಾತ್ರವೇ


ಪ್ರತಾಪ್ ಸಿಂಹ

ಗುರಿಯಾಗಿಸಿಕೊಂಡದ್ದು ಬಿಜೆಪಿಯ ಸೋಲಿಗೆ ಪ್ರಮುಖ ಕಾರಣ. ಶ್ರೀನಿವಾಸಪ್ರಸಾದ್ ಪ್ರಚಾರಕ್ಕೆ ಬಾರದಿದ್ದದಿಂದ ಸಹಜವಾಗಿ ಮತದಾರರ ಒಲವು ಕಳಲೆಯತ್ತ ಹೊರಳಿತು. ಇನ್ನು ಶ್ರೀನಿವಾಸ್ ಪ್ರಸಾದ್ ಭಾಗವಹಿಸಿದ ಪ್ರಚಾರ ಸಭೆಗಳಲ್ಲಿ ತಮ್ಮ ಭಾಷಣವನ್ನು ಸಿದ್ದರಾಮಯ್ಯ ವಿರುದ್ಧ ಕೆಂಡಕಾರುವುದಕ್ಕೇ ಸೀಮಿತವಾಗಿಸಿಕೊಂಡಿದ್ದು ಜನರಲ್ಲಿ ರೇಜಿಗೆ ಹುಟ್ಟಿಸಿತ್ತು. ದಿವಂಗತ ಬೆಂಕಿ ಮಹದೇವ್ ಅವರ ನಿವಾಸದ ಬಳಿಯೇ ಪಕ್ಷದ ಕಚೇರಿ ಇದ್ದರೂ ಬಿಜೆಪಿ ಸೇರಿದ ನಂತರ ಶ್ರೀನಿವಾಸ ಪ್ರಸಾದ್ ಅತ್ತ ಸುಳಿಯದೆ, ಮಹದೇವ್‌ರ ಕುಟುಂಬವನ್ನು ಭೇಟಿಯಾಗದೆ ಹಳೆಯ



ಜಿದ್ದನ್ನು ಮುಂದುವರೆಸಿದ್ದು ಲಿಂಗಾಯತರಿಗೆ ತಪ್ಪು ಸಂದೇ ರವಾನೆಯಾಗುವಂತೆ ಮಾಡಿತ್ತು.


ಇನ್ನು ಗುಂಡ್ಲುಪೇಟೆಯಲ್ಲಿ ಸಂಸದ ಪ್ರತಾಪ ಸಿಂ ಗೀತಾ ಮಹದೇವಪ್ರಸಾದ್ ವಿರುದ್ಧ ಹಾಲು ತುಪ್ಪ ಗೂಟ ಕಾರು ಎಂದೆಲ್ಲ ರೊಳ್ಳೆಯ ಮಾತಾಡಿದ್ದು ಒಂದಷ್ಟು ಮತದಾರರನ್ನು ಬಿಜೆಪಿಯಿಂದ ದೂರ ಮಾಡಿತ್ತು.


ಈ ಉಪಚುನವಣೆಯಲ್ಲಿ ಜೆಡಿಎಸ್ ಸ್ಪರ್ಧಿಸದ ನೋಡಿಕೊಂಡ ಸಿಎಂ ಸಿದ್ದರಾಮಯ್ಯನವರ ದಾಳ ಕಾಂಗ್ರೆ ಭರ್ಜರಿಯಾಗೇ ವರ್ಕ್‌ಔಟ್ ಆಯ್ತು. ಉಪಚುನಾವಣೆಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿ ಸಿದ್ದರಾಮಯ್ಯ ಪ್ರಾರಂಭದಿಂದಲೂ ಎಚ್ಚರಿಕೆಯಿಂ ಕಾರ್ಯತಂತ್ರ ರೂಪಿಸಿದ್ದರು. ಚುನಾವಣೆಯುದ್ದಕ್ಕೂ ಅವ ನಿರಂತರವಾಗಿ ಕ್ಷೇತ್ರಗಳ ಒಡನಾಟದಲ್ಲಿದ್ದರು. ಅಲ್ಲ ಸಚಿವರು ಹಾಗೂ ಗ್ರಾಮ ಪಂಚಾಯಿತಿಗೊಬ್ಬ ಶಾಸಕರ ನೇಮಿಸಿ ಮನೆಮನೆಗೆ ಭೇಟಿ ನೀಡುವಂತೆ ನೋಡಿಕೊಂಡ

ಮೀಸೆ ಮಣ್ಣಾಗಲಿಲ್ಲವಂತೆ


ಯಡಿಯೂರಪ್ಪ ಮೊನ್ನೆ ಏರ್ಪಡಿಸಿದ್ದ ಕೃತಜ್ಞ ಸಮಾರಂಭದಲ್ಲಿ 'ಎರಡೂ ಉಪಚುನಾವಣೆಯಲ್ಲಿ ನಾ ಸೋತಿರಬಹುದು. ಆದರೆ, ಬಿಜೆಪಿಯ ಬಲ ಹೆಚ್ಚಾಗಿ ಗುಂಡ್ಲುಪೇಟೆಯಲ್ಲಿ ಕಳೆದ ಚುನಾವಣೆಯಲ್ಲಿ 66 ಸಾ ಮತ ಗಳಿಸಿದ್ದ ನಮ್ಮ ಅಭ್ಯರ್ಥಿ ಈ ಚುನಾವಣೆಯ ಸುಮಾರು 80 ಸಾವಿರ ಮತ ಗಳಿಸಿದ್ದಾರೆ. ಅದೇ ರಿ ನಂಜನಗೂಡಿನಲ್ಲಿ ಕಳೆದ ಚುನಾವಣೆಯಲ್ಲಿ ಬಿಜೆಪಿ, ಕೆಜ ಸೇರಿ ಗಳಿಸಿದ್ದ 35 ಸಾವಿರ ಮತಗಳಿಗಿಂತ ಈ ಬ 30 ಸಾವಿರ ಹೆಚ್ಚು ಮತ ಗಳಿಸಿದ್ದೇವೆ. ನಂಜನಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾ ವೇಳೆ ಸರ್ಕಾರಿ ಅಧಿಕಾರಿಗಳೇ ಹಣ ಹಂಚಿದ ಬಗ್ಗೆ ದಾಖಲೆಗಳು ಲಭ್ಯವಾಗಿವೆ. ಮತ್ತಷ್ಟು ದಾಖಲೆಗಳ ಕಲೆ ಹಾಕಲಾಗುತ್ತಿದೆ. ಸಂಪೂರ್ಣ ಮಾಹಿತಿ ದೊ ನಂತರ ತನಿಖೆಗೆ ಆಗ್ರಹಿಸುತ್ತೇನೆ. ಗುಂಡ್ಲುಪೇ ನಂಜನಗೂಡು ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯ ಕಾಂಗ್ರೆಸ್ ನಡೆಸಿದ ತಂತ್ರಗಾರಿಕೆ ಹೇಳಲು ನಾಚಿಕೆಯಾಗು ಅಧಿಕಾರ ದುರುಪಯೋಗ, ಹಣದ ಹೊಳೆ ಹರಿಸಿ ಗೆ ಮೌಲ್ಯಾಧಾರಿತ ರಾಜಕಾರಣವನ್ನು ಗಾಳಿಗೆ ತೂರಲಾಗಿ ಇಂತಹ ತಂತ್ರಗಳು ಮುಂದಿನ ಚುನಾವಣೆಯ ನಡೆಯುವುದಿಲ್ಲ" ಅಂತೆಲ್ಲ ಬೊಂಬಡ ಬಜಾಯಿಸಿದಾ ಇದನ್ನೇ ನಮ್ಮ ಹಳ್ಳಿ ಜನ ಜಟ್ಟಿ ನೆಲಕ್ಕೆ ಬಿದ್ದರೂ ಮ ಮಣ್ಣಾಗಲಿಲ್ಲ ಅಂತ ಸೊಗಸಾಗಿ ವರ್ಣಿಸುತ್ತಾರೆ.

■ ಶ



ಕಳಲೆ ಕೇಶವಮೂರ್ತಿ


ಶ್ರೀನಿವಾಸ್ ಪ್ರಸಾದ್


ಗೀತಾ


ನಿರಂಜನ್ ಕುಮಾರ್

ಯಲಬುರ್ಗಾ: ಸೋಲುಂಡ ಅಧಿಕಾರಿಗೆ ಪಂಚಮಸಾಲಿ 'ಪಾದ'ವೇ ಗತಿ


ಶ್ರೀಪಾದಪ್ಪ


ಯಲಬುರ್ಗಾದ ಶ್ರೀಪಾದಪ್ಪ ಅಧಿಕಾರಿ ಸತತ ಸೋಲುಗಳ ಅನುಕಂಪವನ್ನೇ ಗೆಲುವಿನ ಬಂಡವಾಳವಾಗಿಸಿಕೊಳ್ಳಲು ಹೊರಟುನಿಂತಿದ್ದಾರೆ. ಕರ್ನಾಟಕ ವೀರಶೈವ ಪಂಚಮಸಾಲಿ ಸಮಾಜದ ರಾಜ್ಯ ಉಪಾಧ್ಯಕ್ಷರಾಗಿ ಪ್ರಭಾವಿಯಾಗಿದ್ದರೂ ಯಾಕೋ ತಮ್ಮ ಸುದೀರ್ಘ 40 ವರ್ಷಗಳ ರಾಜಕೀಯ ಬದುಕಿನಲ್ಲಿ ಒಮ್ಮೆಯೂ ಅವರಿಗೆ ಗೆಲುವು ಒದಗಿಬಂದಿಲ್ಲ. 2018ರ ಎಲೆಕ್ಷನ್‌ಗೆ ಜೆಡಿಎಸ್ ಹುರಿಯಾಳಾಗಿ ಕಣಕ್ಕಿಳಿಯುವ ಸಿದ್ಧತೆ ಮಾಡಿಕೊಂಡಿರುವ ಅವರು ಹಾಲಿ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಹಾಗೂ ಬಿಜೆಪಿಯ ಹಾಲಪ್ಪ ಆಚಾರಿಯ ವಿರುದ್ಧ ಸೆಣೆಸಾಡಬೇಕಿದೆ. ರಾಯರೆಡ್ಡಿ ಹಾಗೂ ಹಾಲಪ್ಪ ಆಚಾರಿ ವಿರುದ್ಧ ರಾಜಕೀಯ ಮಾಡಿದ ನವೀನ ಕುಮಾರ ಗುಳಗಣ್ಣ, ಬಿ.ಎಸ್.ಆರ್ ಹಾಗೂ ಕೆಜೆಪಿಯಿಂದ ಸ್ಪರ್ಧಿಸಿದ್ದ ಸಿ.ಎಚ್.ಪಾಟೀಲ್ ಹಾಗೂ ಜೆಡಿಎಸ್‌ನಿಂದ ಕಣಕ್ಕಿಳಿದಿದ್ದ ಗಣೆಕುಳ ಜಿ.ಟಿ ಪಂಪಾಪತಿಯಂತಹ ಘಟಾನುಘಟಿ ನಾಯಕರೆ ರಾಜಕೀಯವಾಗಿ ಅತಂತ್ರವಾಗಿರುವ ಸಂದರ್ಭದಲ್ಲಿ ಶ್ರೀಪಾದಪ್ಪ ಅಧಿಕಾರಿ ತೃತೀಯ ಶಕ್ತಿ ಕಟ್ಟಲು ಹೊರಟಿರೋದು ಅಚ್ಚರಿ ಮೂಡಿಸುತ್ತಿದೆ.

ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಣ್ಣ ಮತ್ತು ಉತ್ತರ ಕರ್ನಾಟಕದ ಪ್ರಮುಖ ನಾಯಕ ಬಸವರಾಜ ಹೊರಟ್ಟಿ ಮೂಲಕ ಅಧಿಕಾರಿ ಟಿಕೆಟ್ ನಿಕ್ಕಿ ಮಾಡಿಕೊಂಡಿದ್ದಾರೆಂದು ಹೇಳಲಾಗುತ್ತಿದ್ದು ಮಾರ್ಚ್ ಕೊನೆಯ ವಾರದಲ್ಲಿ ಜೆಡಿಎಸ್ ಪ್ರಕಟಿಸಲಿರುವ 150 ಅಭ್ಯರ್ಥಿಗಳ ಪಟ್ಟಿಯಲ್ಲೇ ಅವರ ಹೆಸರು ಇರಲಿದೆ ಎನ್ನಲಾಗುತ್ತಿದೆ.

ಅಧಿಕಾರಿಯ ರಾಜಕೀಯ ಬದುಕು ಸತತ ಸೋಲುಗಳಿಂದಲೇ ತುಂಬಿದೆ. 1978ರಲ್ಲಿ ಅರಸು ಕಾಂಗ್ರೆಸ್ ಮತ್ತು ರೆಡ್ಡಿ ಕಾಂಗ್ರೆಸ್ ಎಂದು ವಿಭಜನೆಯಾದಾಗ ಅರಸು ಕಾಂಗ್ರೆಸ್‌ನಿಂದ ಇವರಿಗೆ ಟಿಕೆಟ್ ಖಚಿತವಾಗಿತ್ತು. ಇನ್ನೇನು ಬಿ ಫಾರಂ ಸಿಕ್ಕೇಬಿಟ್ಟಿತು ಅನ್ನೋ ಹೊತ್ತಿಗೆ ರೆಡ್ಡಿ ಕಾಂಗ್ರೆಸ್ ಅಧ್ಯಕ್ಷ ಕೆ.ಎಚ್.ಪಾಟೀಲ್‌ರು ಶ್ರೀಪಾದಪ್ಪರನ್ನು ಭೇಟಿ ಮಾಡಿ ತಮ್ಮ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದರು. ಅವತ್ತು ಅರಸು ಕಾಂಗ್ರೆಸ್ ಚುನಾವಣೆಗೆ ಸ್ಪರ್ಧಿಸ ಮೀನಾಮೇಷ ಎಣಿಸುತ್ತಿದ್ದ ಲಿಂಗರಾಜ ದೇಸಾಯಿಯ ತನ್ನ ಅಭ್ಯರ್ಥಿಯಾಗಿ ನಿಲ್ಲಿಸಿತ್ತು. ವಿಪರ್ಯಾಸವೆಂದರೆ ಒ ಮನಸ್ಸಿಂದ ನಿಂತ ಲಿಂಗರಾಜ ದೇಸಾಯಿಯವ ಗೆದ್ದುಬಿಟ್ಟರು. ಒಲಿದುಬಂದಿದ್ದ ಅರಸು ಕಾಂಗ್ರೆಸ್ ಟಿಕೆ ತಿರಸ್ಕರಿಸಿದ ಶ್ರೀಪಾದಪ್ಪನವರು ತಾವೇ ಕೈಯಾರೆ ತ ಸೋಲನ್ನು ಮೈಮೇಲೆ ಎಳೆದುಕೊಂಡಿದ್ದರು.

ನಂತರ ಕರ್ನಾಟಕದ ವರ್ಣರಂಜಿತ ರಾಜಕಾ ಸಾರೆಕೊಪ್ಪ ಬಂಗಾರಪ್ಪನವರು ಕ್ರಾಂತಿರಂಗ ಕಟ್ಟಿದ 1983ರಲ್ಲಿ ಶ್ರೀಪಾದಪ್ಪನವರು ಕ್ರಾಂತಿರಂಗದಿಂದ ಸ್ಪ 2ನೇ ಬಾರಿಗೆ ಸೋಲುಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಮುಂದೆ ಬಂಗಾರಪ್ಪನವರು ಕಾಂಗ್ರೆಸ್ ಸೇರಿದಾಗ ಅವರ ಅನುಸರಿಸಿದ ಶ್ರೀಪಾದಪ್ಪನವರು 1989ರಲ್ಲಿ ಕಾಂಗ ಟಿಕೆಟ್‌ಗೆ ಬೇಡಿಕೆ ಇಟ್ಟರಾದರು. ಹೈಕಮಾಂಡ್ ಚ ರಾಜಕಾರಣಿ ಶಿವಶರಣಪ್ಪಗೌಡ ಪಾಟೀಲರ್‌ಗೆ ಬಿ ಫಾ ದಯಪಾಲಿಸಿತ್ತು. ಟಿಕೆಟ್ ಸಿಗದಿದ್ದರೂ ಪಕ್ಷ ನಿಷ್ಠೆಯಿ

ಹರಿಹರ: 'ಹರಿ'ಯ ಅವಾಂತರಗಳ ನಡುವೆ 'ಹರ'ನ ಲೀಲೆಗಳು!



ಹರಿಹರ ರಾಜಕಾರಣದಲ್ಲಿ ಅದಾಗಲೇ ಬರಲಿರುವ 2018ರ ಚುನಾವಣೆಯ ರಾಜಕೀಯ ರಂಗುಗಳು ಕಳೆಗಟ್ಟತೊಡಗಿವೆ. ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಮೂರೂ ಪಾರ್ಟಿಗಳಲ್ಲಿ ಭವಿಷ್ಯದ ಲೆಕ್ಕಾಚಾರಗಳು ಭರ್ಜರಿಯಾಗೇ ಗುಣಿಸಿಕೊಳ್ಳುತ್ತಿವೆ. ಹಾಲಿ ಜೆಡಿಎಸ್ ಶಾಸಕ ಎಚ್.ಎಸ್. ಶಿವಶಂಕರನಿಗೆ ಅರ್ಧರಾತ್ರಿಯ ಹೊತ್ತಲ್ಲಿ ಸೋಲಿನ ಭಯಾನಕ ಕನಸುಗಳು ಬಿದ್ದು ಬೆಚ್ಚತೊಡಗಿದ್ದಾನಂತೆ. ಅಭಿವೃದ್ಧಿಯ ವಿಚಾರದಲ್ಲಿ ತೋರಿದ ಗಾಢ ನಿರ್ಲಕ್ಷ್ಯ, ತನ್ನ ಚೇಲಾಗಳನ್ನು ಮುಂದಿಟ್ಟುಕೊಂಡು ನಗರಸಭೆಯನ್ನು ಉಸಿರು ಬಿಡುತ್ತಾ ಮೆಯ್ದ ಪರಿಗಳೇ ಅವನನ್ನು ಸೋಲಿಸಲು ಕಾದು ಕುಳಿತಿವೆ. ಇನ್ನು ಬಿಜೆಪಿಯಲ್ಲಿ 'ಯಡ್ಡಿ ಸಂತ್ರಸ್ತ' ಬಿ.ಪಿ ಹರೀಶನಿಗೆ ಟಿಕೆಟು ತಪ್ಪಿಸಲು ವಿರೇಶ ಎನ್ನುವ ಹೊಸಮುಖ ಹೆಣಗಾಡುತ್ತಿರುವ ಸುದ್ದಿ ಬರುತ್ತಿದೆ. ಅತ್ತ ಕಾಂಗ್ರೆಸ್‌ನಲ್ಲಿ ರಾಮಪ್ಪ-ನಾಗಪ್ಪ ಎಂಬಿಬ್ಬರು ಮಾಜಿಗಳ ಜಿದ್ದಾಜಿದ್ದಿನ ಗುದ್ದಾಟದ ಲಾಭ ಪಡೆದು ಟಿಕೆಟು ಹೆಗಲಿಗೇರಿಸಿಕೊಳ್ಳಲು ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಮಾಜಿ ಕುಲಸಚಿವ ಮಹೇಶ್ವರಪ್ಪ ಸಜ್ಜಾಗಿರುವ ವರ್ತಮಾನ ರಾಜಕಾರಣಕ್ಕೆ ಮತ್ತಷ್ಟೂ ರಂಗು ತುಂಬಿಸಿದೆ.

ಆರಂಭದಿಂದಲೂ ಹರಿಹರ ಕ್ಷೇತ್ರ ಲಿಂಗಾಯತ ಮತ್ತು ಕುರುಬರ ರಾಜಕಾರಣಕ್ಕಷ್ಟೇ ಸೀಮಿತವಾಗುತ್ತಾ ಬಂತು. 80ರ ದಶಕದವರೆಗೆ ಸಿದ್ದವೀರಪ್ಪ, ಗಾಂಜಿವೀರಪ್ಪಗಳೆಂಬ ಲಿಂಗವಂತ ಲೀಡರುಗಳ ಪ್ರತಿಷ್ಠೆಯ ಕಣವಾಗಿದ್ದ ಇದು ನಂತರದಲ್ಲಿ ಗಾಂಜೀವೀರಪ್ಪನ ಶಿಷ್ಯ ಬನ್ನಿಕೋಡು ಶಿವಪ್ಪ ಬಸವನಗೌಡರಂತಹ ಲಿಂಗಾಯತರ ಪಾಳೆಪಟ್ಟಿಗೂ ಒಳಪಟ್ಟಿತ್ತು. ಹರಿಹರದ ವಿಶೇಷವೆಂದರೆ ಇಲ್ಲಿ ಲಿಂಗಾಯತರ ನಡುವೆಯೇ ಸಾಧು ಲಿಂಗಾಯತ ಮತ್ತು ಬಣಜಿಗ ಲಿಂಗಾಯತರ ನಡುವೆ ಭಾರೀ ಪೈಪೋಟಿಗೆ ಸಾಕ್ಷಿಯಾಗುತ್ತಾ ಬಂದಿದೆ. 50ರಿಂದ 80ರ ದಶಕದವರೆಗೆ ಸಾಧು ಲಿಂಗಾಯತರ ಸಿದ್ಧವೀರಪ್ಪ ಮತ್ತು ಬಣಜಿಗರ ಗಾಂಜೀವೀರಪ್ಪರ ಜಿದ್ದಾಜಿದ್ದಿನ ಕಾದಾಟವೇ ಇದಕ್ಕೆ ನಿದರ್ಶನ. ಆ ನಂತರವೂ ಸಾದರ ಪರವಾಗಿ ಶಿವಪ್ಪ ಮತ್ತು ಬಣಜಿಗರಿಂದ ಬಸವನಗೌಡ್ರು ಸೆಣೆಸಾಡುತ್ತಲೇ ಬಂದರು. ಅದಾದಮೇಲೆಯೇ ಚಿನ್ನಯ್ಯ ಒಡೆಯರ್, ರಾಮಪ್ಪ ಡಾ.ವೈ.ನಾಗಪ್ಪಾದಿಗಳ ಕುರುಬರ ರಾಜಕಾರಣ ಶುರುವಾದದ್ದು. ಅಂದಹಾಗೆ ಹರಿಹರದಲ್ಲಿ ಲಿಂಗವಂತರ ರಾಜಕಾರಣದ ಮೇಲುಗೈ ಪ್ರತಿಷ್ಠಾಪನೆಯಾಗುವುದಕ್ಕೂ ಮೊದಲೇ ಅಂದರೆ 1957ರ ಮೊದಲ ಚುನಾವಣೆಯಲ್ಲೇ ಹೊಳಲ್ಕೆರೆಯ ರಾಮಪ್ಪ ಅನ್ನೋ ಕುರುಬರ ಕ್ಯಾಂಡಿಡೇಟು ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯಿಂದ ನಿಂತು ಕಾಂಗ್ರೆಸ್‌ನ ಸಾಧು ಲಿಂಗಾಯತರ ಸಿದ್ಧವೀರಪ್ಪನನ್ನು ಸೋಲಿಸಿದ್ದುಂಟು. ಆದರೆ ಆನಂತರ ಶುರುವಾದ ಲಿಂಗವಂತರ ರಾಜಕಾರಣದ ಅಬ್ಬರದ ನಡುವೆ ಕೆಲಕಾಲ ಕುರುಬರ ಪೊಲಿಟಿಕ್ಸ್ ಬರ್ಕತ್ತಾಗಿರಲಿಲ್ಲ. 80ರ ದಶಕದ ಉತ್ತರಾರ್ಧದಿಂದೀಚೆಗೆ ರಾಮಪ್ಪ, ನಾಗಪ್ಪರ ಮೂಲಕ ಕುರುಬರ ರಾಜಕಾರಣ ರಂಗೇರಿತ್ತು.

ಹರಿಹರದ ದುರದೃಷ್ಟವೋ ಏನೋ, ತುಂಗಭದ್ರ ನದಿಯ ತಟದಲ್ಲೇ ಮೈಚೆಲ್ಲಿಕೊಂಡಿದ್ದರೂ, ಕಿರ್ಲೋಸ್ಕರ್ ಕಂಪನಿಯಂತಹ ಕೈಗಾರಿಕಾ ಆಗರವಾಗಿದ್ದರೂ, ಲಿಂಗವಂತ ಮತ್ತು ಕುರುಬ ಜಾತಿರಾಜಕಾರಣದ ಮೇಲಾಟಕ್ಕೆ ಸಾಕ್ಷಿಯಾಯಿತೇ ವಿನಾಃ ಅಭಿವೃದ್ಧಿಯ ವಿಚಾರದಲ್ಲಿ ಮುಂದಕ್ಕೆ ಸಾಗಲೇ ಇಲ್ಲ. ಕಿರ್ಲೋಸ್ಕರ್ ಕಂಪನಿ ಲಾಕ್‌ಔಟ್ ಘೋಷಿಸಿ ಅನಾಮತ್ತು ಸಾವಿರಾರು ಕಾರ್ಮಿಕರು ಬೀದಿಗೆ ಬಿದ್ದಾಗ ಈ ಯಾವೊಬ್ಬ ಜಾತಿ ಬುಡದ ರಾಜಕಾರಣಿಯೂ ಕದಲಾಡಲಿಲ್ಲ. ಇನ್ನು ಸುಸ್ಥಿರವಾಗಿದ್ದ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯು ಭ್ರಷ್ಟರಿಂದ ಲುಕ್ಸಾನಿನತ್ತ ಮುಖ ಮಾಡಿ, ಕೊನೆಗೆ ರೋಗಗ್ರಸ್ತಗೊಂಡರೂ ಯಾರೊಬ್ಬರೂ ಕ್ಯಾರೇ ಅನ್ನಲಿಲ್ಲ. ದುರಂತವೆಂದರೆ ಸರ್ಕಾರವು ಭದ್ರಾ ಸಕ್ಕರೆ ಕಾರ್ಖಾನೆಯನ್ನು ಬಂದ್ ಮಾಡುವ ನಿರ್ಧಾರ ಕೈಗೊಂಡಾಗ ಈ ರಾಜ್ಯದ ಕೈಗಾರಿಕಾ ಸಚಿವ ಗದ್ದುಗೆಯಲ್ಲಿ ಕುಳಿತದ್ದು ಇದೇ ಹರಿಹರದ ಶಾಸಕನಾಗಿದ್ದ ಎಚ್. ಶಿವಪ್ಪ! ಕೈಗಾರಿಕಾ ಮಂತ್ರಿಯಾಗಿಯೂ ತನ್ನ ಕ್ಷೇತ್ರದ ಒಂದು ಸಕ್ಕರೆ ಕಾರ್ಖಾನೆಯನ್ನು ಉಳಿಸಿಕೊಳ್ಳಲು ಆತ ಮುಂದಾಗಲಿಲ್ಲ. ಹರಿಹರದ ರಾಜಕಾರಣಿಗಳು ಅದೆಷ್ಟು ಜಿಡ್ಡುಗಟ್ಟಿದ ಮನಸ್ಥಿತಿಯವರು ಅನ್ನೋದಕ್ಕೆ ಇದು ಸಾಕ್ಷಿ.

ಶಿವಶಂಕ'ಹರ'ನ ಲೀಲೆಗಳು


ಗಾಂಜಿವೀರಪ್ಪನ ಶಿಷ್ಯ ಅಂತೇಳಿಕೊಳ್ಳುತ್ತಲೇ ಒಮ್ಮೆ ಕಾಂಗ್ರೆಸ್ (ಐ)ನಿಂದ, ಮತ್ತೊಮ್ಮೆ ಪಕ್ಷೇತರನಾಗಿ ಒಟ್ಟು ಎರಡು ಬಾರಿ ಶಾಸಕನಾಗಿ ಮಿಂಚಿದ್ದ ಬನ್ನಿಕೋಡು ಶಿವಪ್ಪನ ಮಗ ಎಚ್.ಎಸ್.ಶಿವಶಂಕರನೇ ಹರಿಹರದ ಹಾಲಿ ಶಾಸಕ. ಅಪ್ಪನ ಹೆಸರಿನ ಬಲದಲ್ಲೂ ಗೆಲ್ಲೋದಕ್ಕೆ ನಾಲಾಯಕ್ಕಾಗಿದ್ದ ಶಿವಶಂಕರನನ್ನು 2013ರಲ್ಲಿ ಗೆಲ್ಲಿಸಿದ್ದು ಜೆಡಿಎಸ್ ಅಲ್ಲ, ಬಿಜೆಪಿ ಮತ್ತು ಕಾಂಗ್ರೆಸ್‌ಗಳು! ಆ ಚುನಾವಣೆಯಲ್ಲಿ ಲಿಂಗಾಯತರ ಮತಗಳನ್ನು ಬಿಜೆಪಿ-ಕೆಜೆಪಿ ವಿಭಜಿಸಿ ಹಾಕಿದರೆ, ತನಗೆ ಕಾಂಗ್ರೆಸ್ ಟಿಕೆಟ್ ಸಿಗಲಿಲ್ಲ ಅನ್ನೋ ಕಾರಣಕ್ಕೆ ಕುರುಬರ ವೈ.ನಾಗಪ್ಪ ಸ್ವಜಾತಿಯ ಕ್ಯಾಂಡಿಡೇಟ್ ಎಸ್.ರಾಮಪ್ಪನ ವಿರುದ್ಧ ಪಿತೂರಿ ಮಾಡಿ ಕುರುಬರ ಮತಗಳನ್ನು ದಿಕ್ಕೆಡಿಸಿದ್ದು ಶಿವಶಂಕರ ಗೆದ್ದು ಬರಲು ನೆರವಾಗಿದ್ದವು.


ಹೀಗೆ ಗೆದ್ದು ಬಂದ ಶಿವಶಂಕರ ಕೊಂಚವಾದರೂ ಕ್ಷೇತ್ರದತ್ತ ಗಮನ ಹರಿಸಿದ್ದರೆ ತನ್ನ ರಾಜಕೀಯ ಭವಿಷ್ಯವನ್ನು ಅಪ್ಪನಂತೆಯೇ ಗಟ್ಟಿ ಮಾಡಿಕೊಳ್ಳಬಹುದಿತ್ತು. ಆದರೆ ಜನರಿಗೋಸ್ಕರ ಆತ ನಯಾಪೈಸೆಯ ಕೆಲಸ ಮಾಡಲಿಲ್ಲ. ಈ ಹಿಂದಿನ ಕಾಮಗಾರಿಗಳ ಮುಂದೆ ಫೋಜು ಕೊಟ್ಟು ಕ್ರೆಡಿಟ್ಟು ತೆಗೆದುಕೊಳ್ಳುತ್ತಿದ್ದ ಶಿವಶಂಕರನ ಬಣ್ಣ ಬಹಳಷ್ಟು ಬೇಗವೇ ಬೆತ್ತಲಾಗಿಹೋಯ್ತು. ಇನ್ನು 31 ಸಂಖ್ಯಾಬಲದ ಹರಿಹರ ನಗರಸಭೆಯಲ್ಲಿ ಜೆಡಿಎಸ್ ಶಾಸಕನಾಗಿ ಗೆಲ್ಲಿಸಿಕೊಳ್ಳಲು ಸಾಧ್ಯವಾದದ್ದು ಕೇವಲ 10 ಮಂದಿ ಜೆಡಿಎಸ್ ಸದಸ್ಯರನ್ನು. ಕಾಂಗ್ರೆಸ್ ಪಾರ್ಟಿಯೇ 13 ಜನರನ್ನು ಗೆಲ್ಲಿಸಿಕೊಂಡಿದೆ. ಕುತಂತ್ರ ರಾಜಕಾರಣದಲ್ಲಿ ಪಳಗಿರುವ ಶಿವಶಂಕರ್ ಐದು ಮಂದಿ ಕಾಂಗ್ರೆಸ್ ಸದಸ್ಯರನ್ನು ಹೈಜಾಕ್ ಮಾಡಿದ್ದಲ್ಲದೇ ಮೂವರು ಪಕ್ಷೇತರರನ್ನು ಕೊಂಡುಕೊಂಡು ಪ್ರತಿಭಾ ಪ್ರಕಾಶ್ ಎಂಬ ತನ್ನ ಚೇಲೆಯನ್ನು ಅಧ್ಯಕ್ಷ ಗಾದಿಯಲ್ಲಿ ಕೂರಿಸಿದ್ದ. ಈಕೆ ಮತ್ತು ಅವಳ ಗಂಡ ಪ್ರಕಾಶ್ ನಗರಸಭೆಯನ್ನು ಹರಿದು ಮುಕ್ಕಿದ್ದಾರೆ. ಇರೋ 31 ವಾರ್ಡುಗಳ ಬೀದಿ ದೀಪಕ್ಕೆ ಅಂತ ಅವರು ಖರೀದಿಸಿರೋದು 40 ಲಕ್ಷದ ಬಲ್ಬುಗಳನ್ನು! ಎಸ್ಸಿ, ಎಸ್ಟಿ ಪಂಗಡದವರಿಗೆ ಉಚಿತವಾಗಿ ಗ್ಯಾಸ್ ವಿತರಿಸುವ ಯೋಜನೆಯಡಿ ಐನೂರು ರೂಪಾಯಿಗೂ ಬೆಲೆಬಾಳದ ಸ್ಟೌಗಳಿಗೆ 3800 ರೂಪಾಯಿ ಬಿಲ್ ಮಾಡಿ ಗುಳುಂ ಮಾಡಿದ್ದಾರೆ!! ಕಾಮಗಾರಿಯೇ ನಡೆಸದ ರಸ್ತೆ ದುರಸ್ತಿಗೆ ಬಿಲ್ ಪಾಸಾಗಿದೆ!!!


ಹೇಳುತ್ತಾ ಹೋದರೆ ಅಕ್ರಮಗಳು ತೆರೆದುಕೊಳ್ಳುತ್ತಲೇ ಸಾಗುತ್ತವೆ. ಅವುಗಳಿಗೆಲ್ಲ ಶಾಸಕ ಶಿವಶಂಕರನ ಕೃಪಾಕಟಾಕ್ಷ ಇತ್ತೆನ್ನುವುದನ್ನು ಬಿಡಿಸಿಹೇಳಬೇಕಿಲ್ಲ. ಪ್ರತಿಭಾ ಮೇಡಮ್ಮಳ ಅಧಿಕಾರ ಮುಗಿದು ಕೈ ಪಾರ್ಟಿಯ ಆಶಾ ಮರಿಯೋಜಿರಾವ್ ಅಧ್ಯಕ್ಷೆಯಾದದ್ದೇ ತಡ ಅಷ್ಟೂ ಹಗರಣಗಳು ಒಂದೊಂದಾಗಿ ಬಯಲಿಗೆ ಬರಲಾರಂಭಿಸಿವೆ. ಹಗರಣಗಳ ಗಾತ್ರ ಕಂಡು ಖುದ್ದು ಹೊಸ ಅಧ್ಯಕ್ಷೆಯೇ ದಂಗು ಬಡಿದುಹೋಗಿರೋದಲ್ಲದೆ ಕಚೇರಿ ತನಿಖೆಗೆ ಆದೇಶಿಸಿ, ಹಳೇ ಕಾಮಗಾರಿ ಬಿಲ್‌ಗಳಿಗೆ ಸಹಿ ಹಾಕಲ್ಲ ಅಂತ ಕೂತಿದ್ದಾರೆ. ಯಾವಾಗ ತನಿಖೆ ಶುರುವಾಯ್ತೋ, ಆಗ ತನ್ನ ಹುಳುಕುಗಳೆಲ್ಲ ಹೊರಬರುತ್ತೆ ಅಂತ ಬೆದರಿದ ಶಿವಶಂಕರನ ಜೆಡಿಎಸ್‌ನ ಸದಸ್ಯರು ಮತ್ತು ಒಂದಷ್ಟು ಕಾಂಗ್ರೆಸ್ ಸದಸ್ಯರನ್ನು ಮುಂದೆಬಿಟ್ಟು ನಗರಸಭೆಯಲ್ಲಿ ದೊಡ್ಡ ಗಲಾಟೆಯನ್ನೇ ಮಾಡಿಸಿದ್ದ ಇವೆಲ್ಲವೂ ಶಿವಶಂಕರನಿಗೆ ಸೋಲಿನ ಪಾಠ ಹೇಳಲು ತಯಾರಾಗಿ ಕೂತಿವೆ.


ಕೈಯೊಳಗಿನ ಕುತಂತ್ರಗಳು

1985ರಿಂದೀಚೆಗೆ ಹರಿಹರದಲ್ಲಿ ಕುರುಬರ ರಾಜಕಾರಣ ಕದಲಾಡಲು ಶುರುವಾದಾಗಿನಿಂದಲೂ ಅಲ್ಲಿ ಆಂತರಿಕ ಗುದುಮುರುಗಿ ನಡೆಯುತ್ತಲೇ ಬಂದಿದೆ. ಅದರಲ್ಲೂ ಡಾ. ವೈ. ನಾಗಪ್ಪ ಮತ್ತು ರಾಮಪ್ಪರ ನಡುವಿನ ಸೆಣೆಸಾಟ ಕುರುಬ ಮತಗಳನ್ನು ಗೊಂದಲಕ್ಕೆ ತಳ್ಳುತ್ತಲೇ ಬಂದಿದೆ. ಈ ಸಲವೂ ಅದು ಮುಂದುವರೆಯುವ ಎಲ್ಲಾ ಲಕ್ಷಣಗಳು ಢಾಳಾಗಿ ಕಾಣಿಸತೊಡಗಿವೆ. 2013ರಲ್ಲೇ ಕಾಂಗ್ರೆಸ್ ಪಾರ್ಟಿ ವಯೋಸಹಜ ಅನಾರೋಗ್ಯದ ಕಾರಣಕ್ಕೆ









ವೈ. ನಾಗಪ್ಪನಿಗೆ ನಕ್ಕೋ ಅಂದು ರಾಮಪ್ಪನಿಗೆ ಟಿಕೆಟ್ ನೀಡಿತ್ತು. ಆಗಲೇ ತನ್ನ ಸ್ವಜಾತಿಯ ಕ್ಯಾಂಡಿಡೇಟ್ ವಿರುದ್ಧ ಕ್ರುದ್ಧಗೊಂಡಿದ್ದ ನಾಗಪ್ಪನ ಸಿಟ್ಟನ್ನು ಸಖತ್ತಾಗಿ ಬಳಸಿಕೊಂಡದ್ದು ಜೆಡಿಎಸ್‌ನ ಶಿವಶಂಕರ್. ಆತ ಮತ್ತು ಆತನ ತಂದೆ ಬನ್ನಿಕೋಡು ಶಿವಪ್ಪನ ಸಮಯಸಾಧಕ ರಾಜಕಾರಣದ ಬಗ್ಗೆ ಅರಿವಿದ್ದೂ ಟಿಕೆಟ್ ಕೈತಪ್ಪಿದ ಸಿಟ್ಟಿಗೆ ನಾಗಪ್ಪ, ಒಳಗೊಳಗೇ ಕುರುಬರ ಮತಗಳನ್ನು ಚದುರಿಸಿಬಿಟ್ಟರು. ಅದು ಕಾಂಗ್ರೆಸ್‌ನ ಸೋಲಿಗೆ ಕಾರಣವಾಯ್ತು. ರಾಮಪ್ಪ ಕೇವಲ 40 ಸಾವಿರ ಮತ ಕಲೆಹಾಕುವುದಕ್ಕಷ್ಟೇ ಸುಸ್ತಾಗಿ ಹೋದರು.

ಈ ಸಲವೂ ವೈ.ನಾಗಪ್ಪ ಸ್ವಜಾತಿಯ ರಾಮಪ್ಪನಿಗೆ ಟಿಕೆಟ್ ತಪ್ಪಿಸಲು ಸರ್ವ ಪ್ರಯತ್ನ ಮಾಡುತ್ತಿದ್ದು ಅದಕ್ಕೋಸ್ಕರ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಮಾಜಿ ಕುಲಸಚಿವ ಮಹೇಶ್ವರಪ್ಪನನ್ನು ದಾಳವಾಗಿ ಬಳಸಿಕೊಳ್ಳುತ್ತಿದ್ದಾರೆ. 'ರಾಮಪ್ಪ ದಡ್ಡ, ಅವನಿಗೆ ರಾಜಕೀಯ ಜ್ಞಾನವಿಲ್ಲ. ಹಾಗಾಗಿ ಪಾರ್ಟಿ ಟಿಕೆಟು ಬೇರೆಯವರಿಗೆ ನೀಡಿದರೆ ಬೆಂಬಲಿಸುವುದಾಗಿ' ಹೇಳಿಕೆ ನೀಡಿರುವ ವೈ.ನಾಗಪ್ಪ ಸ್ವಜಾತಿಬಂಧು ಮಹೇಶ್ವರಪ್ಪನತ್ತ ಒಲವು ಹೊಂದಿದ್ದಾರೆ ಅನ್ನೋದರಲ್ಲಿ ಎರಡು ಮಾತಿಲ್ಲ. ಅತ್ತ ಟಿಕೆಟು ತರುವ ವಿಶ್ವಾಸದಲ್ಲಿರುವ ರಾಮಪ್ಪ ಕಂಗಾಲಾಗಿಹೋಗಿದ್ದಾರೆ.


ಹರೀಶನ ಅವಾಂತರಗಳು

ಇನ್ನು ಬಿಜೆಪಿಯ ಬಿ.ಪಿ. ಹರೀಶ ಮಾಡಿಕೊಂಡ ಅವಾಂತರಗಳು ಆತನನ್ನು ಹಣ್ಣುಗಾಯಿ-ನೀರುಗಾಯಿ ಮಾಡಿಹಾಕಿವೆ. ಈತನ ತಂದೆ ಬಸವನಗೌಡ್ರು ಎಡಪಂಥದ ಬಗ್ಗೆ ಒಲವಿದ್ದಂತವರು. ಬೇರೆಯವರಂತೆ ಜಾತಿರಾಜಕಾರಣ ಮಾಡದ ಸಾಧು ಲಿಂಗಾಯತರ ಬಸವನಗೌಡರು ಜನತಾ ದಳದಿಂದ ಗೆದ್ದು ಶಾಸಕರಾಗಿದ್ದರಾದರು, ಫಲಿತಾಂಶ ಹೊರಬಿದ್ದ ಕೇವಲ ಹತ್ತೇ ತಿಂಗಳ ಅವಧಿಯಲ್ಲಿ ಹೃದಯಾಘಾತಕ್ಕೆ ತುತ್ತಾಗಿ ಅಸುನೀಗಿದ್ದರು. ಅವರ ಮಗ ಹರೀಶ್ ಕೂಡಾ ಅಪ್ಪನದೇ ಎಡಪಂಥದ ಹಾದಿಯಲ್ಲಿ ಹೆಜ್ಜೆ ಹಾಕುತ್ತಾನೆ ಅಂದುಕೊಂಡಿದ್ದವರಿಗೆ ಭಾರೀ ಆಘಾತವನ್ನೇ ನೀಡಿ ಬಿಜೆಪಿಯ, ಅದರಲ್ಲೂ ಯಡಿಯೂರಪ್ಪನ ಲಿಂಗಾಯತ ರಾಜಕಾರಣದ ವೇದಿಕೆಯಲ್ಲಿ ರಾರಾಜಿಸತೊಡಗಿದ್ದಾನೆ.

2008ರ ಎಲೆಕ್ಷನ್‌ನಲ್ಲಿ ಹರಿಹರದ ಜನ ಬದಲಾವಣೆಯನ್ನು ಬಯಸಿಯೋ ಅಥವಾ ಆತನ ತಂದೆಯ ದುರಂತ ರಾಜಕಾರಣವನ್ನೋ ಕಂಡು ಮರುಗಿ ಹರೀಶನನ್ನು ಆಯ್ಕೆ ಮಾಡಿದ್ದು ನಿಜ. ಆದರೆ ಆತ ಯಡಿಯೂರಪ್ಪನ ಬೆನ್ನಿಗಂಟಿದ ಬಾಲದಂತೆ ತನ್ನ ಅಸ್ತಿತ್ವವನ್ನೇ ಕಳೆದುಕೊಂಡು, ಮಾಡಿದ್ದ ಚೂರುಪಾರು ಅಭಿವೃದ್ಧಿ ಕೆಲಸಗಳ ಕ್ರೆಡಿಟ್ಟನ್ನೂ ಕೈಚೆಲ್ಲಿ ಕೂತ. ಯಡಿಯೂರಪ್ಪನನ್ನು ಅನುಸರಿಸಿ ಕೆಜೆಪಿಗೆ ಹೋಗಿ, ಸೋತು, ಶಾಮನೂರು ದಣಿಗಳ ಕೈ ಕಬ್ಜಾದಲ್ಲಿ ಒಂದಷ್ಟು ದಿನ ನರಳಾಡಿ ಇದೀಗ ಬಿಜೆಪಿಗೆ ವಾಪಾಸಾಗಿ ತಾನೆಂತಹ ಅತಂತ್ರಗೇಡಿ ಅನ್ನೋದನ್ನು ಆತನೇ ಸಾಬೀತುಮಾಡಿಕೊಂಡಿದ್ದಾನೆ. ಇದನ್ನೇ ಎನ್‌ಕ್ಯಾಶ್ ಮಾಡಿಕೊಂಡು ಬಿಜೆಪಿಯ ಟಿಕೆಟು ಗಿಟ್ಟಿಸಲು ಕಳೆದ ಎಲೆಕ್ಷನ್‌ಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಹನಗವಾಡಿ ಎಸ್.ಎಂ ವೀರೇಶ್ ಕಸರತ್ತು ನಡೆಸುತ್ತಿದ್ದಾನೆ. ಆದರೆ ಪಾರ್ಟಿಯ ರಾಜ್ಯಾಧ್ಯಕ್ಷ ಯಡಿಯೂರಪ್ಪನ ಒಲವು ಹರೀಶ್ ಕಡೆ ಇರೋದ್ರಿಂದ ಟಿಕೆಟ್ ಸಿಕ್ಕೋದು ಕಷ್ಟವಾಗಲಿಕ್ಕಿಲ್ಲ. ಆದರೆ ಮತದಾರರೇ ಹರೀಶನನ್ನು ನಂಬುವ ಮನಸ್ಥಿತಿಯಲ್ಲಿಲ್ಲ. ಆದರೂ ಕಾಂಗ್ರೆಸ್‌ನೊಳಗಿನ ರಾಮಪ್ಪ-ನಾಗಪ್ಪನ ಕಿತ್ತಾಟ ಮುಂದುವರೆದು, ಜೆಡಿಎಸ್‌ನಿಂದ ಹೊಣೆಗೇಡಿ ಶಿವಶಂಕರನೇ ಅಖಾಡಕ್ಕಿಳಿದರೆ ಯಡಿಯೂರಪ್ಪನ 'ಲಿಂಗಾಯತ' ಅಸ್ತ್ರದಡಿ ಹರೀಶ್ ಗೆದ್ದರೂ ಅಚ್ಚರಿಯಿಲ್ಲ. ಯಾವುದಕ್ಕೂ ಚುನಾವಣೆ ಸಮೀಪಿಸಿದಂತೆ ಏನೆಲ್ಲಾ ವಿದ್ಯಮಾನಗಳು ಘಟಿಸುತ್ತವೆ ಅನ್ನೋದರ ಮೇಲೆ ಫಲಿತಾಂಶದ ವಿಚಬೇಳೆ ನಿಂತಿದೆ.

■ ಟಿ.ಎನ್.ಷಣ್ಮುಖ

ಪ್ರಾಮಾಣಿಕವಾಗಿ ದುಡಿದ ಅಧಿಕಾರಿಯವರು ಶಿವಶರಣಪ್ಪಗೌಡ ಪಾಟೀಲ್ ಪರ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಆದರೂ ಶಿವಶರಣಪ್ಪಗೌಡರು ಆ ಚುನಾವಣೆಯಲ್ಲಿ ರಾಯರೆಡ್ಡಿ ವಿರುದ್ಧ ಪರಾಭವಗೊಂಡರು.



1994ರ ಚುನಾವಣೆ ವೇಳೆಗೆ ಅಧಿಕಾರಿಯವರ ಪರ ಅಪಾರ ಜನಾಭಿಪ್ರಾಯ ರೂಪುಗೊಂಡಿತ್ತು, ಅವರು ಗೆದ್ದು ಶಾಸಕರಾಗೋದು ಗ್ಯಾರಂಟಿ ಎನ್ನುವ ಮಾತಿತ್ತು, ಆದರೆ ಅಡ್ಡಗಾಲು ಹಾಕಿದ ರಾಯರೆಡ್ಡಿ, ಅಂದಿನ ಸಂಸದೆ ಬಸವರಾಜೇಶ್ವರಿ ಮೂಲಕ ಮಲಬುರ್ಗಾದ ಕಾಂಗ್ರೆಸ್ ಟಿಕೆಟ್ ತಮ್ಮ ಸಂಬಂಧಿ ಬಾಂಧವ ಮಾಜಿ ಶಾಸಕ ಸುಭಾಷಚಂದ್ರ ಪಾಟೀಲ್‌ರ ಧರ್ಮಪತ್ನಿ ಜಯಶ್ರೀಯವರಿಗೆ ಸಿಗುವಂತೆ ಮಾಡಿದ್ದರು. ಇದರಿಂದ ಅಧಿಕಾರಿಯವರಿಗೆ ಟಿಕೆಟ್ ಕೈತಪ್ಪಿತು. ಆದರೂ ಅಧಿಕಾರಿಯವರು ಪಕ್ಷೇತರರಾಗಿ ಸ್ಪರ್ಧಿಸಿದ್ದು ಭಾರಿ ಪೈಪೋಟಿ ನೀಡಿ ಪರಾಭವಗೊಂಡರು.


ನಂತರ 1999ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಯತ್ನಿಸಿ ವಿಫಲರಾದರು. ಮುಂದೆ 2004ರಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರಾದರೂ ಅಲ್ಲಿಯೂ ಟಿಕೆಟ್ ಸಿಕ್ಕಲಿಲ್ಲ. ಜೆಡಿಎಸ್ ವರಿಷ್ಠರು ವಕೀಲ ಸಿ.ಎಚ್.ಪಾಟೀಲ್‌ರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದರು.

ಬದಲಾದ ರಾಜಕಾರಣದಲ್ಲಿ 2013ರಲ್ಲಿ ಕೆಜೆಪಿ ಸೇರಿದ ಅಧಿಕಾರಿಯವರು ಟಿಕೆಟ್‌ಗೆ ಯತ್ನಿಸಿದಾಗ ಸಿ.ಎಚ್.ಪಾಟೀಲ್ ಅಲ್ಲಿಯೂ ಅಡ್ಡಗಾಲು ಹಾಕಿ ತಾನೂ ಕೆಜೆಪಿ ಸೇರಿಕೊಂಡು ಟಿಕೆಟ್ ದಕ್ಕಿಸಿಕೊಂಡರು. ಇದರಿಂದ ರೊಚ್ಚಿಗೆದ್ದ ಅಧಿಕಾರಿ ಜೆಡಿಎಸ್‌ಗೆ ವಾಪಾಸಾಗಿ ಆ ಸಲದ ಜೆಡಿಎಸ್ ಅಭ್ಯರ್ಥಿ ಪಂಪಾಪತಿ ಪರವಾಗಿ ದುಡಿಯಬೇಕಾಯ್ತು. ಹೀಗೆ ನಿರಂತರವಾಗಿ ಚುನಾವಣಾ ರಾಜಕಾರಣದಲ್ಲಿದ್ದರೂ 3 ಬಾರಿ ಸ್ಪರ್ಧಿಸಿ ಸೋತು, 4 ಬಾರಿ ಟಿಕೆಟ್ ವಂಚಿತರಾದ ಅಧಿಕಾರಿಯವರು ಈಗ ತಮ್ಮ ಕೊನೆಯ ಯತ್ನದಲ್ಲಿದ್ದಾರೆ.

ಶ್ರೀಪಾದಪ್ಪನವರು ಉಪಾಧ್ಯಕ್ಷರಾಗಿ ಪ್ರತಿನಿಧಿಸುವ ಕರ್ನಾಟಕ ವೀರಶೈವ ಪಂಚಮಸಾಲಿ ಸಮಾಜದ ಮತಗಳೇ ತಾಲ್ಲೂಕಿನಲ್ಲಿ 50 ಸಾವಿರಕ್ಕಿಂತಲೂ ಹೆಚ್ಚಿವೆ. ಆದರೂ ಸ್ವತಂತ್ರಾನಂತರ ಚುನಾವಣೆಯಲ್ಲಿ ಇಲ್ಲಿಯವರೆಗೆ ಈ ಜನಾಂಗದ ಯಾರೊಬ್ಬರೂ ಇಲ್ಲಿಂದ ಶಾಸಕರಾಗಿಲ್ಲ. ಪಂಚಮಸಾಲಿ ಸಮಾಜದವರೇ ಆದ ಸಿ.ಎಚ್.ಪಾಟೀಲ್, ಅಂದಪ್ಪ ಸೋಂಪೂರ್, ಮಂಜುನಾಥ್ ಸೊರಟೂರ ಮೊದಲಾದವರು ಅಧಿಕಾರಿಯವರಂತೆ ಸ್ಪರ್ಧಿಸಿ ಸೋಲುಂಡಿದ್ದಾರೆಯೇ ವಿನಾಃ ಗೆಲುವಿನ ರುಚಿ ಕಂಡಿಲ್ಲ. ಹೀಗಾಗಿ ಈ ಸಲವಾದರು ತಮ್ಮ ಸಮಾಜದ ಒಬ್ಬರು ಶಾಸಕರಾಗಲಿ ಅನ್ನೋ ಒಗ್ಗಟ್ಟಿನ ಮಂತ್ರ ಜಪಿಸುತ್ತಿದ್ದಾರೆ. ಇದು ಅಧಿಕಾರಿಗೆ ವರವಾದರೂ ಆಗಬಹುದು. ಅಲ್ಲದೇ ತಾಲೂಕಿನ ನಾಯಕ ಸಮಾಜವೂ ಅಧಿಕಾರಿಯವರನ್ನು ಬೆಂಬಲಿಸುವ ಸಾಧ್ಯತೆ ಇದೆ. ಅದೇ ಆಸೆಯಲ್ಲಿ ಅಧಿಕಾರಿ ಕಸರತ್ತು ಶುರು ಮಾಡಿದ್ದಾರೆ. ಆದರೆ ಟಿಕೆಟ್ ಕೈತಪ್ಪುವ ನತದೃಷ್ಟತೆ ಈ ಸಲವಾದರೂ ಅವರ ಬೆನ್ನುಬಿಟ್ಟು ದೂರವಾಗುತ್ತಾ ಅನ್ನೋದನ್ನು ಮೊದಲು ಕಾದುನೋಡಬೇಕು.

■ ಸ.ಶರಣಪ್ಪ ಪಾಟೀಲ್ ಕರಮುದಿ

ವಿಜಯ ಮಲ್ಯ ಬಂಧನ ಎಂಬ ಪ್ರಹಸನ



ವಿಜಯ ಮಲ್ಯ ಮತ್ತೊಮ್ಮೆ ಮುಖಪುಟದ ಸುದ್ದಿಗೆ ಬಂದಿದ್ದಾನೆ. ಲಂಡನ್ನಿನ ಪೊಲೀಸರು ಮಲ್ಯನನ್ನು ಬಂಧಿಸಿದ ಕೆಲವೇ ಗಂಟೆಗಳಲ್ಲೇ ಬಿಡುಗಡೆಗೊಳಿಸಿದ್ದಾರೆ. ಅದೂ ಕೇವಲ ಮೂರು ಗಂಟೆಗಳಲ್ಲಿ - ಕೋರ್ಟಿನ ಜಾಮೀನಿನ ಮೇಲೆ. ಇತ್ತ ಭಾರತದಲ್ಲಿ ಮತ್ತೆ ನ್ಯೂಸ್ ಚಾನಲ್‌ಗಳು ಮಲ್ಯನ ಬಗ್ಗೆ ವಿಶೇಷ ಪ್ಯಾನಲ್ ಚರ್ಚೆಗಳನ್ನು ನಡೆಸಿ ಟಿ.ಆರ್.ಪಿ ಹೆಚ್ಚಿಸಿಕೊಳ್ಳುವ ಲೆಕ್ಕಾಚಾರದಲ್ಲಿವೆ. ಮೋದಿ ಸರ್ಕಾರದ ವಕ್ತಾರರು ಇದು ತಮ್ಮ ಸರ್ಕಾರದ ಕಠಿಣ ಪರಿಶ್ರಮದ ಫಲ, ಇನ್ನು ಮಲ್ಯನನ್ನು ಭಾರತಕ್ಕೆ ಕರೆತಂದು ಕಾನೂನು ಕ್ರಮ ಜರುಗಿಸುವುದೊಂದೇ ಬಾಕಿ ಎಂಬಂತೆ ಬಡಾಯಿ ಕೊಚ್ಚುತ್ತಿದ್ದರೆ ವಿರೋಧಿಗಳು ಇದೊಂದು ರಾಜಕೀಯ ನಾಟಕ ಎನ್ನುತ್ತಿದ್ದಾರೆ.

ಆದರೆ ವಸ್ತುಸ್ಥಿತಿ ಭಿನ್ನವಾಗಿದ್ದು ಮಲ್ಯ ಸದ್ಯದಲ್ಲಿ ಭಾರತಕ್ಕೆ ಬರುವ ಯಾವ ಸಾಧ್ಯತೆಯೂ ಇಲ್ಲ.

ಬ್ರಿಟನ್ ಜೊತೆಗೆ ಭಾರತ 1992ರಲ್ಲೇ ಅಪರಾಧಿಗಳ ಹಸ್ತಾಂತರ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಒಪ್ಪಂದ 1993ರಿಂದಲೂ ಅಧಿಕೃತವಾಗಿ ಜಾರಿಯಲ್ಲಿದೆ. ಆದರೆ ಈ ಒಪ್ಪಂದ ಒಂದು ಪುಸ್ತಕದ ಬದನೆಕಾಯಿ ಇದ್ದಂತೆ. ನೋಡಲಷ್ಟೇ ಚೆನ್ನ. ತಿನ್ನಲು ಬರುವುದಿಲ್ಲ.


ಇದುವರೆಗೂ ಇಂಗ್ಲೆಂಡ್ ನೆಲದಲ್ಲಿ ನೆಲೆಸಿದ್ದು ಭಾರತಕ್ಕೆ ಹಸ್ತಾಂತರ ಆಗಬೇಕಿರುವ ಮಹಾನುಭಾವರ ಪಟ್ಟಿಯನ್ನೊಮ್ಮೆ ನೋಡೋಣ. ಐಪಿಎಲ್ ದೊರೆ ಲಲಿತ್ ಮೋದಿ ನಾನಾ ಅಕ್ರಮಗಳ ಸರದಾರ. ಈತನನ್ನು ಪರ್ಮನೆಂಟಾಗಿ ಜೈಲಿಗೆ ಅಟ್ಟಬೇಕಾದಂತಹ ಕೇಸುಗಳು ಸಾಕಷ್ಟಿವೆ. ಆದರೇನು? ಆತ ಎಷ್ಟೇ ಆಗಲಿ, ಹೈಪ್ರೈ ಕ್ರಿಮಿನಲ್. ಸ್ವತಃ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಅವರೇ ಆತನಿಗೆ ಅನುಕೂಲ ಕಲ್ಪಿಸಲು ಶಿಫಾರಸ್ಸುಗಳನ್ನು ಮಾಡುವುದು ನಮಗೆಲ್ಲ ತಿಳಿದಿದೆ. ಹೀಗಿದ್ದರೂ ಈತನನ್ನು ಭಾರತಕ್ಕೆ ಹಸ್ತಾಂತರ ಮಾಡಬೇಕೆಂಬ ಕಾಟಾಚಾರದ ಒಂದು ಪತ್ರ ಒಗಾಯಿಸಲಾಗಿದೆ. ಹೀಗೆ ವರ್ಷಗಳೇ ಕಳೆದು ಹೋಗುತ್ತಿವೆ.

ಗುಲ್ಷನ್ ಕುಮಾರ್ ಕೊಲೆ ಕೇಸಿನಲ್ಲಿ ಆರೋಪಿಯಾಗಿರುವ ಸಂಗೀತಗಾರ ನದೀಮ್‌ನನ್ನು ಹಸ್ತಾಂತರಿಸುವಂತೆ ಕೇಳಿದ ಪತ್ರ ಧೂಳು ಹಿಡಿದು ದಶಕವೇ ಕಳೆದುಹೋಗುತ್ತಿದೆ. ಲಂಡನ್‌ನಲ್ಲೇ ಠಿಕಾಣಿ ಹೂಡಿರುವ ನೌಕಾಪಡೆಯ ರಹಸ್ಯಗಳನ್ನು ಸೋರಿಕೆ ಮಾಡಿದ ರವಿಶಂಕರನ್ ಹಾಯಾಗಿದ್ದಾನೆ. ಇನ್ನು ನೂರಾರು ಜನರ ಮಾರಣಹೋಮಕ್ಕೆ ಕಾರಣವಾದ ಟೈಗರ್ ಹನೀಫ್‌ನ ಕೇಸು ಇನ್ನಷ್ಟು ಕುತೂಹಲಕಾರಿಯಾಗಿದೆ. ಈತ ಹೇಳಿಕೇಳಿ ದಾವೂದ್ ಇಬ್ರಾಹಿಂನ ಬಲಗೈ ಬಂಟ. ಬಾಂಬೆ ಬ್ಲಾಸ್ಟ್ ಕೇಸಿನ ಪ್ರಮುಖ ಆರೋಪಿಗಳಲ್ಲೊಬ್ಬ. ದಾವೂದ್ ಇಬ್ರಾಹಿಂನ ಆಪ್ತ ಟೈಗರ್ ಹನೀಫ್‌ನ ಕೇಸಿನ ವೃತ್ತಾಂತ ತಿಳಿದರೆ ಮಲ್ಯನ ಕೇಸನ್ನು ಅರ್ಥಮಾಡಿಕೊಳ್ಳುವುದು ಬಹಳ ಸುಲಭ.

2012ರಲ್ಲಿ ಬ್ರಿಟನ್ ಜಿಲ್ಲಾ ಕೋರ್ಟ್ ಹನೀಫ್ ವರ್ಗಾವಣೆಗೆ ಅಸ್ತು ಎಂದು ತೀರ್ಪು ನೀಡಿತು. 2013ರಲ್ಲಿ ಯುಕೆ ಹೈಕೋರ್ಟ್ ಕೂಡ ಜಿಲ್ಲಾ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು. ನಂತರ ಹನೀಫ್ ಗೃಹ ಕಾರ್ಯದರ್ಶಿಗೆ ಜಿಲ್ಲಾ ನ್ಯಾಯಾಲಯದ ತೀರ್ಪಿನ ವಿರುದ್ಧ ಅಪೀಲು ಸಲ್ಲಿಸಿದ. ಈ ಅಪೀಲು ಅರ್ಜಿ ಇಂದಿಗೂ ಗೃಹ ಕಾರ್ಯದರ್ಶಿ ಕಚೇರಿಯಲ್ಲೇ ಬಿದ್ದಿದೆ. ಅಂದಿನ ಗೃಹ ಕಾರ್ಯದರ್ಶಿಯಾಗಿದ್ದ ತೆರೆಸಾ ಮೇ ಇಂದು ಬ್ರಿಟನ್ನಿನ ಪ್ರಧಾನಿಯಾಗಿದ್ದಾರೆ. ಅವರ ಸ್ಥಾನಕ್ಕೆ ಆಂಬರ್ ರುಡ್ ಬಂದಿದ್ದಾರೆ. ಈ ಹೊಸ ಕಾರ್ಯದರ್ಶಿ ತ್ವರಿತವಾಗಿ ಕಡತ ವಿಲೇವಾರಿ ಮಾಡಿ, ಹನೀಫ್‌ನನ್ನು ಭಾರತಕ್ಕೆ ಕಳಿಸುವ ತೀರ್ಮಾನಕ್ಕೆ ಒಪ್ಪಿಗೆ ಕೊಟ್ಟುಬಿಟ್ಟ ತಕ್ಷಣ ಹನೀಫ್‌ನನ್ನು ಭಾರತಕ್ಕೆ ಕರೆತರಲಾಗುವುದಿಲ್ಲ, ಹನೀಫ್ ಅಲ್ಲಿನ ಸುಪ್ರೀಂಕೋರ್ಟ್ ಮೊರೆ ಹೋಗಲು ಅವಕಾಶವಿದೆ. ಹೀಗೆ ಮಲ್ಯನನ್ನೂ ಒಳಗೊಂಡು ಈ ಎಲ್ಲ ಅಪರಾಧಿಗಳು ಬಲಿಷ್ಠರು, ಪ್ರಭಾವಿಗಳೂ ಆಗಿದ್ದು ಕಾನೂನು ಪ್ರಕ್ರಿಯೆಯನ್ನು ಮ್ಯಾನೇಜ್ ಮಾಡಲು ಶಕ್ತರಾಗಿದ್ದಲ್ಲಿ ಅವರು ಹೀಗೆ ಒಂದಾದನಂತರ ಒಂದು ಮನವಿ - ಮೇಲ್ಮನವಿಗಳನ್ನು ಸಲ್ಲಿಸುತ್ತಾ ಜೀವಮಾನವಿಡೀ ಹಾಯಾಗಿ ಇರಬಹುದಾದ ವ್ಯವಸ್ಥೆಯನ್ನು ನಮ್ಮ ಮಾಜಿ ವಸಾಹತುಕೋರರು ರೂಪಿಸಿಟ್ಟಿದ್ದಾರೆ. ಹೈ ಪ್ರೊಫೈಲ್ ಕ್ರಿಮಿನಲ್‌ಗಳು ನಮ್ಮ ಸರ್ಕಾರಗಳ ಶಾಮೀಲಿನೊಂದಿಗೆ ಬ್ರಿಟಿಷರ ಈ ಸವಲತ್ತನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ ಅಷ್ಟೆ.

ಒಮ್ಮೆ ಯೋಚಿಸಿ ನೋಡಿ, ಟೈಗರ್ ಹನೀಫ್‌ನ ಕೇಸೇ ಹೀಗಾದ ಮೇಲೆ. ಇನ್ನು ವಿಜಯ್ ಮಲ್ಯನ ಕೇಸು ಇತ್ಯರ್ಥವಾಗಲು ಎಷ್ಟು ದಶಕಗಳು ಬೇಕಾಗಬಹುದು?

ಸಿಬಿಐ ಮತ್ತಿತರ ಸಂಸ್ಥೆಗಳು ಪದೇಪದೇ ರೆಡ್ ಕಾರ್ನರ್ ನೋಟಿಸ್‌ಗಳನ್ನು, ವಾರಂಟ್‌ಗಳನ್ನು ಕಳಿಸಿಕೊಟ್ಟಾಗ್ಯೂ ಬ್ರಿಟನ್ ಈ ಯಾವುದೇ ಮನವಿಗಳಿಗೆ ಸೊಪ್ಪು ಹಾಕಿಲ್ಲ. 23 ವರ್ಷಗಳ ಸುದೀರ್ಘ ಅವಧಿಯಲ್ಲಿ ಇದುವರೆಗೆ



ಭಾರತಕ್ಕೆ ಹಸ್ತಾಂತರವಾದ ಏಕೈಕ ವ್ಯಕ್ತಿ ಸಮಿರ್ಭಾಯ್ ವಿನುಭಾಯ್ ಪಟೇಲ್.

2002ರ ಮಾರ್ಚ್ 1 ನೇ ತಾರೀಕು - ಗುಜರಾತ್‌ನ ಓದೆ ಎಂಬ ಗ್ರಾಮದಲ್ಲಿ 23 ಮಂದಿಯನ್ನು ಜೀವಂತ ಸುಟ್ಟು ಹಾಕಲಾಗಿತ್ತು. ಇದರ ಪ್ರಮುಖ ಆರೋಪಿ ಸಮಿರ್ಭಾಯ್ ವಿನುಭಾಯ್ ಪಟೇಲ್ ವಿರುದ್ಧ ಬಲವಾದ ಸಾಕ್ಷ್ಯಾಧಾರಗಳಿದ್ದು ತಾನು ಜೈಲು ಸೇರುವುದು ಅಥವ ಭಾರತದ ಕಾನೂನಿನ ಪ್ರಕಾರ ನೇಣುಗಂಬಕ್ಕೇರುವುದು ಖಚಿತ ಎಂದು ಗೊತ್ತಾದಕೂಡಲೇ ಇಂಗ್ಲೆಂಡ್‌ಗೆ ಪರಾರಿಯಾದ. ಈ ವ್ಯಕ್ತಿಯನ್ನು 23 ವರ್ಷಗಳ ನಂತರ 2016ರ ಅಕ್ಟೋಬರ್ 18ರಂದು ಭಾರತಕ್ಕೆ ಕರೆತರಲಾಯಿತು. ಇದೂ ಕೂಡ ಸಾಧ್ಯವಾದದ್ದು ಹೇಗೆ ಅಂತೀರಿ? ಈ ಸಮಿರ್ಭಾಯ್ ಪಟೇಲ್ ಭಾರತದ ರೆಡ್ ಕಾರ್ನರ್ ನೋಟಿಸ್‌ಗೆ ತಕರಾರೇ ತೆಗೆಯಲಿಲ್ಲ, ಭಾರತಕ್ಕೆ ಹಿಂತಿರುಗುವ ಇಚ್ಛೆ ವ್ಯಕ್ತಪಡಿಸಿ ಸಹಕಾರ ನೀಡಿದ್ದಾನಂತೆ. ಅಂದರೆ ಅಹಮದಾಬಾದ್‌ನಲ್ಲಿದ್ದ ಮೋದಿ ಸರ್ಕಾರ ಈಗ ದೆಹಲಿಯಲ್ಲಿ ಗದ್ದುಗೆ ಹಿಡಿದಿದೆಯೆಂಬ ಧೈರ್ಯ ಬಂದಿರಬೇಕು. ಸದ್ಯ ಈತ ಗುಜರಾತ್‌ನ ಆನಂದ್ ಜಿಲ್ಲೆಯ ಒಂದು ಜೈಲಿನಲ್ಲಿದ್ದಾನೆ. ಕೆಲ ದಿನಗಳಲ್ಲಿ ಆತ ಕ್ಲೀನ್‌ಚಿಟ್ ಪಡೆದು ಬಿಡುಗಡೆಯಾದರೆ ಆಶ್ಚರ್ಯವೇನೂ ಇಲ್ಲ, ಆ ಮಾತು ಬೇರೆ.


ಇದು ಬ್ರಿಟನ್ನಿನ ಹಸ್ತಾಂತರದ ಸ್ಥಿತಿಗತಿ. ಹೀಗಿರುವಾಗ ಮೋದಿ ಸರ್ಕಾರದ ವಕ್ತಾರರು ಹೇಳುತ್ತಿರುವುದು ನಿಜವೇ? ಅಸಲು ಈ ಸರ್ಕಾರಕ್ಕೆ ಅಂಥಾ ಉದ್ದೇಶವಾದರೂ ಇದೆಯೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕೆಂದರೆ ಈ ಮಹಾಶಯ ಮಲ್ಯ ನಮ್ಮ ಬ್ಯಾಂಕುಗಳಿಂದ 9600 ಕೋಟಿ ನುಂಗಿ ಹಾಕಿ ಲಂಡನ್‌ಗೆ ರಾಜಾರೋಷವಾಗಿ ಪರಾರಿ ಆಗಿದ್ದಾದರೂ ಹೇಗೆಂಬ ಸನ್ನಿವೇಶವನ್ನು ಒಮ್ಮೆ ನೆನಪಿಸಿಕೊಳ್ಳುವುದು ಒಳ್ಳೆಯದು.

2016ರ ಮಾರ್ಚ್ 2ರಂದು ಮಲ್ಯ ದೇಶ ಬಿಟ್ಟು ಪರಾರಿಯಾಗಿ ಇಲ್ಲಿಗೆ 13 ತಿಂಗಳು ಕಳೆದಿವೆ. ಮಲ್ಯ ದೇಶ ಬಿಟ್ಟು ಹೋಗುವ ಮುನ್ನ ಕೆಲವು ನಾಟಕೀಯ ಬೆಳವಣಿಗೆಗಳು ನಡೆದುಹೋಗಿದ್ದವು. ಸಿಬಿಐನ ಅಧಿಕಾರಿಗಳು 2015ರ ಅಕ್ಟೋಬರ್ 12ರಂದು ವಿಮಾನಯಾನ/ ವಲಸೆ ಅಧಿಕಾರಿಗಳಿಗೆ ಒಂದು ಸುತ್ತೋಲೆ ಕಳಿಸಿ ವಿಜಯ್ ಮಲ್ಯ ದೇಶ ಬಿಟ್ಟು ಹೋಗಲು ಪ್ರಯತ್ನಿಸಿದರೆ, ಕೂಡಲೇ ತಡೆದು ವಶಕ್ಕೆ ಪಡೆಯಬೇಕೆಂದು ಸೂಚಿಸಿದ್ದರು. ಈ ಸುತ್ತೋಲೆಯಲ್ಲಿದ್ದ ಅಸ್ಪಷ್ಟ ವಿಷಯಗಳನ್ನು ಸ್ಪಷ್ಟಪಡಿಸುವಂತೆ ಕೋರಿ ವಲಸೆ ಅಧಿಕಾರಿಗಳು ಸಿಬಿಐಗೆ ಪತ್ರ ಬರೆದರು. ಈ ಸುದ್ದಿ ಮಲ್ಯ ಸಾಹೇಬರಿಗೆ ಮುಟ್ಟಲು ತಡವಾಗಲಿಲ್ಲ, ಮಲ್ಯ ಕೂಡಲೇ ಕಾರ್ಯಪ್ರವೃತ್ತನಾದ. ತನ್ನ ರಾಜಕೀಯ - ಆರ್ಥಿಕ ಸಂಪರ್ಕಗಳನ್ನೆಲ್ಲಾ ಬಳಸಿ ಆ ಸುತ್ತೋಲೆಗೆ ಒಂದು ಗತಿ ಕಾಣಿಸಿದ. ನಂತರ ನಡೆದದ್ದೇನು? ಸಿಬಿಐ ಆ ಸುತ್ತೋಲೆ ಪ್ರಕರಣದಿಂದಲೇ ಉಲ್ಟಾ ಹೊಡೆದು ಬಿಟ್ಟಿತು. ಕೆಲವು ಕಿರಿಯ ಅಧಿಕಾರಿಗಳ ತಪ್ಪಿನಿಂದಾಗಿ ಆ ಸುತ್ತೋಲೆ (ಲುಕ್ ಔಟ್ ನೋಟಿಸ್) ರವಾನೆಯಾಗಿದೆ ಎಂದು ಹೇಳಿ, ಆ ಸುತ್ತೋಲೆಯನ್ನೇ ರದ್ದು ಮಾಡಿಬಿಟ್ಟಿತು. ಮಲ್ಯನ ಓಡಾಟದ ಬಗ್ಗೆ ಸಿಬಿಐಗೆ ಮಾಹಿತಿ ನೀಡಿದರಷ್ಟೇ ಸಾಕು ಎಂಬಂತೆ ಆ ಸುತ್ತೋಲೆಯನ್ನು ಬದಲಿಸಿಬಿಟ್ಟರು. ಈ ಎರಡನೇ ತಿದ್ದುಪಡಿಯಾದ ಸುತ್ತೋಲೆ ಜಾರಿಯಾಗಿದ್ದು 2015ರ ನವೆಂಬರ್ 23ರಂದು.

ನಂತರದ ದಿನಗಳಲ್ಲಿ ಮಲ್ಯ ಪ್ರಕರಣವನ್ನು ಮೂಲೆಗುಂಪು ಮಾಡಲು ಏನೆಲ್ಲಾ ತಿಪ್ಪರಲಾಗ ಹಾಕಿದರೂ ಅದು ಫಲಕಾರಿಯಾಗಲಿಲ್ಲ. ಬದಲಿಗೆ ಮಲ್ಯನ 9000 ಕೋಟಿ ಗುಳುಂ ಪ್ರಕರಣದ ಬಗ್ಗೆ ದಿನೇದಿನೇ ರಾಜಕೀಯ ಒತ್ತಡ ಹೆಚ್ಚಾಗುತ್ತಲೇ ಹೋಯ್ತು. ಮಾಧ್ಯಮಗಳಿಗಂತೂ ಇದು ಟಿ.ಆರ್.ಪಿ ಪೈಪೋಟಿಯ ಪ್ರಕರಣವಾಗಿ ಹೋಯ್ತು. ಪರಿಣಾಮವಾಗಿ ಮೋದಿ ಸರ್ಕಾರದ ಬಗ್ಗೆ ಇನ್ನಿಲ್ಲದಂತೆ ಟೀಕೆಗಳು ಕೇಳಿಬಂದವು. ಸಾಮಾಜಿಕ ಜಾಲತಾಣಗಳಲ್ಲಿ ಮಲ್ಯನ ವಿಷಯವಾಗಿ ಮೋದಿ ಸರ್ಕಾರ ತೀವ್ರ ಮೂದಲಿಕೆಗೆ ಗುರಿಯಾಯ್ತು. ಮಲ್ಯನ ಪಾಸ್‌ಪೋರ್ಟ್ ಮುಟ್ಟುಗೋಲು ಹಾಕಿಕೊಳ್ಳಬೇಕೆಂಬ, ಆವನನ್ನು ಜೈಲಿಗೆ ಹಾಕಬೇಕೆಂಬ, ಆಸ್ತಿ-ಪಾಸ್ತಿ ಮುಟ್ಟುಗೋಲು ಹಾಕಬೇಕೆಂಬ ಕೂಗು ಹೆಚ್ಚುತ್ತಲೇ ಹೋಯ್ತು. ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳಲೇಬೇಕಾದ ಒತ್ತಡದ ಸನ್ನಿವೇಶ ಅದು.

ಬೀಸೋ ದೊಣ್ಣೆ ತಪ್ಪಿಸಿಕೊಂಡರೆ ನೂರು ವರ್ಷ ಆಯಸ್ಸು ಅಂತಾರಲ್ಲಾ ಹಾಗೆ, ಮಲ್ಯ ತನ್ನ 'ಹಿತೈಷಿಗಳು ಹಾಗೂ ಬೆಂಬಲಿಗರ' ಜೊತೆ ಚರ್ಚಿಸಿ ಕೊನೆಗೆ ಒಂದು ಸೂಕ್ತ ನಿರ್ಧಾರಕ್ಕೆ ಬಂದ. ಆ ಯೋಜಿತ ಕ್ರಮದ ಪ್ರಕಾರ 2016ರ ಮಾರ್ಚ್ 2 ನೇ ತಾರೀಕು ರಾಜಾರೋಷವಾಗಿ ವಿಮಾನ ಏರಿ ವಿದೇಶಕ್ಕೆ ಹಾರಿಯೇ ಬಿಟ್ಟ.

ಈ ಪರಾರಿಯ ಬಗ್ಗೆ ಮೋದಿಯಂತೂ ಬಾಯಿ ಬಿಚ್ಚಲಿಲ್ಲ, ಸರ್ಕಾರದ ಪರವಾಗಿ ಹಣಕಾಸು ಸಚಿವ ಅರುಣ್ ಜೈಟ್ಲಿ ಮಾನಮರ್ಯಾದೆ ಎಲ್ಲವನ್ನೂ ಬಿಟ್ಟು ಈ ಪರಾರಿಯನ್ನು ಸಮರ್ಥನೆ ಮಾಡಿಕೊಂಡರು. ಜೈಟ್ಲಿ ಪ್ರಕಾರ 'ವಿಜಯ ಮಲ್ಯರವರ ಪ್ರಯಾಣವನ್ನು ತಡೆ ಹಿಡಿಯಬಹುದಾದ ಯಾವುದೇ ಕೇಸುಗಳು ಅವರ ಮೇಲಿರಲಿಲ್ಲ'ವಂತೆ!! ಆದರೆ ವಾಸ್ತವವೇನು? 2015ರ ಜುಲೈ 29ರಂದೇ ಸಿಬಿಐ ಈತನ ಮೇಲೆ ಎಫ್.ಐ.ಆರ್ ದಾಖಲಿಸಿ, ಒಂದು ಲುಕ್ ಔಟ್ ನೋಟಿಸ್ ಕೂಡ ಹೊರಡಿಸಿತ್ತು, SEBI (ಷೇರು ವಿನಿಮಯ ಮಂಡಳಿ), ಇಡಿ (ಜಾರಿ ನಿರ್ದೇಶನಾಲಯ), ಸೇವಾ ಶುಲ್ಕ ಇಲಾಖೆ ಹೀಗೆ ಹತ್ತಾರು ಇಲಾಖೆಗಳು ಮಲ್ಯ ವಿರುದ್ಧ ತನಿಖೆ ಕೈಗೊಂಡಿದ್ದವು. ಬ್ಯಾಂಕುಗಳು ತಮ್ಮ ಬಾಕಿ ವಸೂಲಿಗಾಗಿ ಕೋರ್ಟ್‌ಗಳ ಮೊರೆ ಹೋಗಿದ್ದವು, ಹೀಗಿದ್ದರೂ ಅರುಣ್ ಜೈಟ್ಲಿ ತಮ್ಮ ಮಿತ್ರನನ್ನು ಕಾಪಾಡಲಿಕ್ಕೆ ತಮ್ಮ ಎಲುಬಿಲ್ಲದ ನಾಲಗೆ ಹರಿಯಬಿಟ್ಟಿದ್ದರು.



ಕೊಳ್ಳೆ ಹೋದ ಮೇಲೆ ಬಾಗಿಲು ಬಂದ್

ತಮಾಷೆ ಹೇಗಿದೆ ನೋಡಿ, ಮಲ್ಯ ವಿದೇಶಕ್ಕೆ ಹಾರಿ ಹೋಗಿ, ಎಲ್ಲವೂ ಸುಸೂತ್ರವಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಂಡ ನಂತರ ಮೋದಿ ಸರ್ಕಾರ ಮಲ್ಯನ ಪಾಸ್‌ಪೋರ್ಟ್ ಸಸ್ಪೆಂಡ್ ಮಾಡುವ ನಾಟಕ ಮಾಡಿದೆ. ಮಲ್ಯನಿಗೆ ನೋಟಿಸ್ ಕೊಡುವ ನಾಟಕ ನಡೆದಿದೆ. ಯಾವ ಕಾರಣಕ್ಕೂ ಬಿಡುವುದಿಲ್ಲ ಎಂಬ ವೀರಾವೇಶದ ಮಾತುಗಳಿಗಂತೂ ಬರವಿಲ್ಲ.

ಲಂಡನ್‌ಗೆ ಹಾರಿದ ಮೇಲೆ ಮಲ್ಯ ಸಾಹೇಬ ಹೇಳಿದ ಮಾತುಗಳು ಆಸಕ್ತಿಕರವಾಗಿವೆ. "ನಾನೊಬ್ಬ ಅಂತಾರಾಷ್ಟ್ರೀಯ ಮಟ್ಟದ ಉದ್ಯಮಿ, ನಾನು ಭಾರತಕ್ಕೆ ಬರುವುದು ಹೋಗುವುದು ಸರ್ವೇಸಾಮಾನ್ಯ ಅಷ್ಟೇ ಹೊರತು ನಾನು ದೇಶ ಬಿಟ್ಟು ಓಡಿಹೋಗಿಯೂ ಇಲ್ಲ ಅಥವ ನಾಪತ್ತೆಯೂ ಆಗಿಲ್ಲ, ಇದೆಲ್ಲಾ ಕೀಳುಮಟ್ಟದ ಅಪಪ್ರಚಾರ" ಎಂದು ಟ್ವೀಟ್ ಮಾಡಿದ್ದ! ಮತ್ತೆ ಒಂದು ಗಂಟೆಯ ನಂತರ "ಭಾರತದ ಒಬ್ಬ ಪಾರ್ಲಿಮೆಂಟ್ ಸದಸ್ಯನಾಗಿ ನೆಲದ ಕಾನೂನನ್ನು ಗೌರವಿಸುತ್ತೇನೆ ಮತ್ತು ಕಾನೂನಿನ ಪ್ರಕಾರ ನಡೆದುಕೊಳ್ಳುತ್ತೇನೆ. ನಮ್ಮ ಕಾನೂನು ವ್ಯವಸ್ಥೆ ಸದೃಢವಾಗಿದೆ.. ಆದರೆ ಮಾಧ್ಯಮಗಳು ನ್ಯಾಯ ವಿಚಾರಣೆ ಮಾಡುವುದು ಬೇಕಾಗಿಲ್ಲ" ಎಂದ.

"ಈಗ ಟಿಆರ್‌ಪಿ ಗಿಟ್ಟಿಸಲು ಅಪಪ್ರಚಾರಕ್ಕೆ ಇಳಿದಿರುವ ಮಾಧ್ಯಮ ದಣಿಗಳು ನನ್ನಿಂದ ಪಡೆದ ಸಹಾಯ, ಅನುಕೂಲ, ಒದಗಿಸಿದ ಇತರೆ ಸೇವೆಗಳನ್ನು ಅಷ್ಟು ಬೇಗ ಮರೆತುಬಿಡಬಾರದು, ಯಾಕೆಂದರೆ ನಾನು ಅವುಗಳನ್ನು ದಾಖಲಿಸಿಟ್ಟುಕೊಂಡಿದ್ದೇನೆ'' ಎಂಬ ಪರೋಕ್ಷ ಬೆದರಿಕೆಯನ್ನೂ ಹಾಕಿದ್ದ.

ಮಲ್ಯನ ಹೇಳಿಕೆ ಏನೇ ಇರಲಿ, ಈಗ ವಿರೋಧ ಪಕ್ಷಗಳ ಚೀರಾಟ ಏನೇ ಇರಲಿ. ಮಲ್ಯನಿಗೆ ಬೆಂಬಲವಾಗಿ ನಿಂತಿದ್ದು ಮಾತ್ರ ಇದೇ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಎಂಬುದು ಚಾರಿತ್ರಿಕ ಸತ್ಯ. ಮಲ್ಯ ಬಿಜೆಪಿ ಅಭ್ಯರ್ಥಿಯಾಗಿ ರಾಜ್ಯಸಭಾ ಸ್ಥಾನಕ್ಕೆ ಸ್ಪರ್ಧಿಸಿದ್ದರೂ ಕೂಡ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ಹೆಚ್ಚುವರಿ ಮತವನ್ನು ಮಲ್ಯನಿಗೆ ನೀಡಿ ಆತನನ್ನು ರಾಜ್ಯಸಭೆಗೆ ಕಳಿಸಿಕೊಟ್ಟಿದ್ದನ್ನು ಯಾರೂ ಮರೆತಿಲ್ಲ.

ಈ ಹಿಂದೆ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಹೀಗೆ ಮಲ್ಯನಿಗೆ ಯಥೇಚ್ಛ ಬ್ಯಾಂಕುಗಳ ಸಾಲ ಹರಿದುಹೋಗುವಂತೆ ವ್ಯವಸ್ಥೆ ಮಾಡಿದ್ದು ಗುಟ್ಟಿನ ವಿಷಯವೇನಲ್ಲ, ಅದೂಅಲ್ಲದೆ ಮಾನ್ಯ ಪ್ರಣಬ್ ಮುಖರ್ಜಿ ಅವರು ಹಣಕಾಸು ಸಚಿವರಾಗಿದ್ದಾಗ ಮಲ್ಯನ ಸಾಲದ ಬಿಕ್ಕಟ್ಟು ತೀವ್ರಗೊಂಡಿತ್ತು. ಆಗ ಕಂಡುಕೊಂಡ ಪರಿಹಾರ ಸೂತ್ರ ಏನು ಗೊತ್ತೆ? ಮಲ್ಯನ ಕಿಂಗ್ ಫಿಷರ್ ಕಂಪನಿಯ ಸುಮಾರು 1400 ಕೋಟಿ ಸಾಲವನ್ನು ಷೇರುಗಳನ್ನಾಗಿ ಪರಿವರ್ತಿಸಿದ್ದು, ಪ್ರತಿ ಷೇರು ಮೌಲ್ಯ 60 ರೂಪಾಯಿಯಂತೆ 1400 ಕೋಟಿ ರೂ. ಮೌಲ್ಯದ ಷೇರುಗಳನ್ನು ಸಾಲಕ್ಕೆ ಪ್ರತಿಯಾಗಿ ಬ್ಯಾಂಕುಗಳಿಗೆ ವರ್ಗಾಯಿಸಲಾಯ್ತು. ಆ ಷೇರುಗಳಿಗೆ ಈಗ ಯಾವ ಮೌಲ್ಯವೂ ಇಲ್ಲದೆ ಸಾವಿರಾರು ಕೋಟಿಗಳು ಕೊಚ್ಚಿ ಹೋಗಿವೆ. ನಮ್ಮ ಬ್ಯಾಂಕುಗಳ ಬಂಡವಾಳವನ್ನು ಮಲ್ಯನಂತಹ ಕಾರ್ಪೊರೇಟ್ ಖದೀಮರ ರಾಕ್ಷಸ ಒಡಲಿಗೆ ಸುರಿಯುವುದು ಸರ್ಕಾರಗಳ ನೀತಿ.

ತಮ್ಮ ಮುಖ ಉಳಿಸಿಕೊಳ್ಳುವ ನಾಟಕದ ಭಾಗವಾಗಿ ಹೊಸ ಹೊಸ ವೇಷಗಳನ್ನು, ದೃಶ್ಯಗಳನ್ನು ಸೃಷ್ಟಿಸುತ್ತಿದ್ದಾರೆ ಅಷ್ಟೆ ಹೊರತು ಮಲ್ಯನ ಕೂದಲೂ ಕೂಡ ಕೊಂಕಿಲ್ಲ.

ಈ ಬಂಧನ ಪ್ರಹಸನದ ನಂತರ ಮಲ್ಯ ಹೇಳಿದ್ದು ಇಷ್ಟು: "ಇದೆಲ್ಲಾ ಮಾಧ್ಯಮಗಳ ರೋಚಕತೆ ಅಷ್ಟೆ: ನನ್ನ ಎಲ್ಲ ವ್ಯವಹಾರಗಳೂ ಅಬಾಧಿತವಾಗಿ ಎಂದಿನಂತೆ ಮುಂದುವರೆಯುತ್ತವೆ."

ಇದು ಮಾತ್ರ ನೂರಕ್ಕೆ ನೂರು ಸತ್ಯ.

■ ದೊಡ್ಡಿಪಾಳ್ಯ ನರಸಿಂಹಮೂರ್ತಿ

ಬಾಂಬ್ ನಾಗ

ಹಳೇ ನೋಟು ಎಕ್ಸ್‌ಚೇಂಜ್ ರ್‍ಯಾಕೆಟ್



4.8 ಕೋಟಿ ರೂಪಾಯಿಗಳಷ್ಟು ಹಳೇ ನೋಟುಗಳ
ಿ
00 ಕೋಟಿಯಷ್ಟು ಬೆಲೆಬಾಳುವ ಭೂದಾಖಲೆಗಳು
ರಾಂಪುರದಲ್ಲೇ ಅಕ್ಕಪಕ್ಕ ನಾಲ್ಕು ಮನೆಗಳು
ಗಳೂರಿನ ಬೇರೆ ಬೇರೆ ಕಡೆಗಳಲ್ಲಿ ಐದು ಶಾಪಿಂಗ್ ಂಪ್ಲೆಕ್ಸ್‌ಗಳು
ಗೇರಿ ಉಪನಗರ ರಿಂಗ್ ರಸ್ತೆಯಲ್ಲೊಂದು ಾರಾಮಿ ರೆಸಾರ್ಟ್
ಮಂಗಲ ತಾಲ್ಲೂಕು ಮಾರಗೊಂಡನಹಳ್ಳಿ ಯಲ್ಲೊಂದು ಫಾರ್ಮ್ ಹೌಸ್.....!

ಕೃತವಾಗಿ ಮೂವರು ಪತ್ನಿಯರು, ಮಕ್ಕಳ ಪೈಕಿ ್ಬನ ಹೆಸರು ಗಾಂಧಿ ಮತ್ತೊಬ್ಬನ ಹೆಸರು ಶಾಸ್ತ್ರೀ.... ು ಬಾಂಬ್ ನಾಗ ಉರುಫ್ ಹಾಲು ನಾಗ ಸ್ ವಿ. ನಾಗರಾಜ್ ಎಂಬ ಸ್ಲಂ ರೌಡಿಯೊಬ್ಬನ ಐದು ವರ್ಷದ ಕೌನ್ಸಿಲರ್‌ಗಿರಿಯ ಕಮಾಯಿ.....? ಗುತ್ತಿಲ್ಲ, ಊಹೆಗೂ ನಿಲುಕದಷ್ಟು ಈ ಪಾಟಿ ್ನು ಓರ್ವ ಸ್ಲಂ ಲಾರ್ಡ್ ತನ್ನ ಜೀವಿತಾವಧಿಯಲ್ಲಿ ಸಿದ್ದಾದರೂ ಹೇಗೆ?

ರಾಂಪುರದ ಹಳೇ ಪಾತಕಿ ಬಾಂಬ್ ನಾಗನನ್ನು ಸರು ಬಂಧಿಸಿದ್ದಾಗಲಿ, ಆತನ ಮನೆ ಮೇಲೆ ದಾಳಿ ದ್ದಗಲಿ, ನಾಗ ಯಾರ್‍ಯಾರ ಮೇಲೋ ಹಲ್ಲೆಗೆ ದ್ದಾಗಲೀ, ಆತನಿಗೂ ಗಾಂಧಿನಗರದ ಶಾಸಕ ದಿನೇಶ್ ರಾವ್‌ಗಿದ್ದ ಜಿದ್ದಾಜಿದ್ದಿಯಾಗಲಿ ಹೊಸದೇನಲ್ಲ. ಾರಿಯಾಗುವುದು, ಶಾಸಕ ದಿನೇಶ್ ಗುಂಡೂರಾವ್ ಕೊಲ್ಲಿಸುತ್ತಾನೆಂದು ಪದೇಪದೇ ಆರೋಪಿಸುವುದೂ ೇನಲ್ಲ; ಆದರೆ ಇಷ್ಟೊಂದು ಆಸ್ತಿ ಆತ ಅದ್ಹೇಗೆ ೆಂಬುದೇ ಯಾರಿಗೂ ಅರ್ಥವಾಗುತ್ತಿಲ್ಲ!

02 ರ ಪಾಲಿಕೆ ಚುನಾವಣೆಯಲ್ಲಿ ತನ್ನ ಪತ್ನಿ ಬಾಕೆಯ ಸಮೇತ ಕೌನ್ಸಿಲರ್ ಆಗಿದ್ದವನು ನಾಗ. ಂಡತಿಬ್ಬರೂ ಏಕಕಾಲಕ್ಕೆ ಕೌನ್ಸಿಲರ್‌ಗಳಾದರೆ ಕೇವಲ ರ್ಷದ ಅವಧಿಯಲ್ಲಿ ಇಷ್ಟೊಂದು ಸಂಪತ್ತು ಗಳಿಸಲು ಹದಿನಾಲ್ಕು ಕೋಟಿಯಷ್ಟು ಹಳೇ ನೋಟುಗಳೇ ಇನ್ನು ಹೊಸ ನೋಟುಗಳ ಮೊತ್ತ ಎಷ್ಟಿರಬೇಡ, ಇಟ್ಟಿರಬೇಡ?

ಹಾಲುನಾಗನ ಜಾತಕ

ಗಳೂರು ಕಂಡ ಚಿತ್ರವಿಚಿತ್ರ ಪಾತಕಿಗಳು, ಸಾರಾಯಿ ರು, ಹಂತಕರು, ವೈಟ್ ಕಾಲರ್ ಕ್ರಿಮಿನಲ್‌ಗಳು, ಪೈಕಿ ತಮಿಳುನಾಡು ಮೂಲದ ಸ್ಲಂ ದೊರೆಗಳದ್ದೇ ಚರಿತ್ರೆಯಿದೆ. ಟ್ಯಾನರಿ ರಸ್ತೆಯ ಸಾರಾಯಿ ರಾಣಿ ುತ್ತು, ಭಕ್ಷಿಗಾರ್ಡನ್ನಿನ ಕಳ್ಳಭಟ್ಟಿ ರಾಣಿ ಮಾಲಾ, ತಮ್ಮ ರೌಡಿ ಕೌನ್ಸಿಲರ್ ಕದಿರೇಶ; ದ್ರಪುರದ ಕೌನ್ಸಿಲರ್ ಚಕ್ರಿ, ಅಲಸೂರಿನ ಶರವಣ, ಪುರದ ಪಳನಿಕಾಂತ್; ತಮಿಳುನಾಡಿನಿಂದ ವಲಸೆ ಸ್ಲಂ ದೊರೆಗಳಾಗಿಯೇ ಬಿಬಿಎಂಪಿಯು ಗಳಿಸಿಕೊಂಡವರ ಪೈಕಿ ಅತ್ಯಂತ ವರ್ಣರಂಜಿತ, ಹಿನ್ನೆಲೆಯವನು ವಿ. ನಾಗರಾಜ್ ಅಲಿಯಾಸ್ ನಾಗ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಆರ್ ಕಾಂಗ್ರೆಸ್ಸಿನಿಂದ ನಿಂತು ಸಾವಿರದಷ್ಟು ಮತಗಳನ್ನು ಪಡೆದು ದಿನೇಶ್ ರಾವ್ ವಿರುದ್ಧ ಸೋತಾಗಲೇ 'ನಾಗನ ರಾಜಕೀಯ ಮುಗಿಯಿತು' ಎಂದು ಶ್ರೀರಾಂಪುರದ ತಮಿಳರು ಕೊಂಡರು. ಕೇವಲ ಐನೂರು ಮತಗಳಿಂದ ರುದ್ಧ ಹಕ್ಷೇತರನಾಗಿ ನಿಂತೇ ಸೋತಿದ್ದ ತಾನಲ್ಲದೇ ಬಿಕ್ಕಿಯನ್ನೂ ಪಾಲಿಕೆಗೆ ಗೆಲ್ಲಿಸಿಕೊಂಡು ತನ್ನ ಬೆಂಬಲಿಗರನ್ನು ಪಾಲಿಕೆಗೆ ಕಳುಹಿಸಿ, ಎದುರಾಳಿಗಳಿಗೆ ಸಿದ್ದ, ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಾಗಿ ದಿನೇಶ್ ವಿರುದ್ಧ ನಿಲ್ಲಲು ಪದೇಪದೇ ಒಂದಲ್ಲಾ ಾದಕ್ಕೆ ಸಿಲುಕುತ್ತಿದ್ದ ನಾಗನ ಹಿನ್ನೆಲೆ, ವಿಕೃತಿ, ಪಾತಕಗಳೆಲ್ಲವೂ ಪೊಲೀಸರಿಗಷ್ಟೇ ಅಲ್ಲ

ಇಡೀ ಶ್ರೀರಾಂಪುರಕ್ಕೇ ತಲೆನೋವಾಗಿ ಪರಿಣಮಿಸಿದ್ದೇ ಹೆಚ್ಚು.

ಇಂಥವನು ಅದ್ಹೇಗೆ ಹದಿನಾಲ್ಕು ಕೋಟಿಯಷ್ಟು ರದ್ದಾದ ನೋಟುಗಳನ್ನು ತನ್ನ ಮನೆಯಲ್ಲಿ ಗುಡ್ಡೆ ಹಾಕಿಕೊಂಡ ಮತ್ತು ಏಕೆ ಈ ಪಾಟಿ ಪೊಲೀಸ್ ದಾಳಿಗೆ ಬಲಿಯಾದ ಎಂಬುದೇ ಯಾರಿಗೂ ಅರ್ಥವಾಗುತ್ತಿಲ್ಲ. ವರ್ಷದ ಹಿಂದಷ್ಟೇ ಗುಂಪೊಂದು ನಾಗನ ಮನೆ ಮೇಲೆ ದಾಳಿ ನಡೆಸಿ ಆತನ ತಮ್ಮ ಮತ್ತು ಪತ್ನಿಯನ್ನೂ ಸೇರಿಸಿ ಕತ್ತರಿಸಿತ್ತು. ನಾಗ ಪೊಲೀಸರ ವಿರುದ್ಧವೇ ಪ್ರತಿಭಟನೆ ನಡೆಸಿದ. ದಿನೇಶ್ ಗುಂಡೂರಾವ್ ತನ್ನನ್ನು ಕೊಲ್ಲಿಸುತ್ತಾರೆಂದೇ ಬೊಬ್ಬೆಯಿಟ್ಟ. ತನ್ನ ಮನೆ ಮೇಲೆ ದಿನೇಶ್ ಬೆಂಬಲಿಗರು ನಡೆಸಿದ ದಾಳಿಯಲ್ಲಿ ಪೊಲೀಸರು ಶಾಮೀಲಾಗಿದ್ದಾರೆಂದೇ ಕೋರ್ಟ್ ಮೆಟ್ಟಿಲೇರಿದ.

ನೋಟು ದಂಧೆ!

ಇದೆಲ್ಲವೂ ಆತನ ರಾಜಕೀಯ ಗಿಮ್ಮಿಕ್‌ಗಳಾದರೆ ನಾಗನ ರಾತ್ರಿ ಕಾರ್ಯಾಚರಣೆಗಳ ಖದರ್ರೇ ಬೇರೆಯಿತ್ತು. ಶುರುವಿನಿಂದಲೂ ಬಡ್ಡಿ ದಂಧೆ, ರಿಯಲ್ ಎಸ್ಟೇಟ್, ಪಾರ್ಟ್‌ಟೈಂ ಗೂಂಡಾಗಿರಿ ನಡೆಸಿಕೊಂಡೇ ಬಂದಿದ್ದ ನಾಗ ಯಾವತ್ತು ಐನೂರು, ಸಾವಿರದ ನೋಟುಗಳು ರದ್ದಾದವೋ ಬೇರೆಯದೇ ಅನಾಹುತವೊಂದಕ್ಕೆ ಕೈಯಿಟ್ಟಿದ್ದ. ಅದು



ರದ್ದಾದ ನೋಟುಗಳನ್ನು ಹೊಸ ನೋಟುಗಳಾಗಿ ಮಾಡಿಕೊಡುವುದು!

ಸರ್ಕಾರ ವಿಧಿಸಿದ್ದ ಗಡುವೆಲ್ಲವೂ ಮುಗಿದಮೇಲೂ ಇಂತಿಷ್ಟು ಪರ್ಸೆಂಟೇಜಿಗೆ ನೋಟು ಬದಲಾಯಿಸಿಕೊಡುತ್ತೇನೆಂದರೆ ಒಂದೋ ಅದರಲ್ಲಿ ಮೋಸವಿರುತ್ತದೆ ಅಥವಾ ಪರ್ಸೆಂಟೇಜಿನ ಪ್ರಮಾಣ ಹೆಚ್ಚಿರುತ್ತದೆ. ಅರ್ಧಕ್ಕರ್ಧ ಕೊಡುತ್ತೇನೆಂದರೂ ನೋಟು ಬದಲಾಯಿಸುವುದು ದುಸ್ಸಾಧ್ಯವಾಗಿರುವಾಗ ಈತ ತಾನು 30 ಪರ್ಸೆಂಟಿಗೆ ಹೊಸ ನೋಟು ಕೊಡುತ್ತೇನೆಂದರೆ ಯಾರು ತಾನೇ ಆಸೆ



ಪಡುವುದಿಲ್ಲ?

ಇದು ನಾಗನ ಪಾತಕಿ ಟೆಕ್ನಿಕ್ಕು. ಮೂವತ್ತು ಪರ್ಸೆಂಟಿಗೆ ನೋಟು ಬದಲಿಸಿಕೊಡುತ್ತೇನೆಂದು ಬೆಂಗಳೂರಿನ ಅನೇಕ ರಾಜಕಾರಣಿಗಳು, ಮಾರ್ವಾಡಿಗಳು, ಅಧಿಕಾರಿಗಳು ಕಂಟ್ರಾಕ್ಟರುಗಳ ಸುತ್ತ ನಾಗ ಬಲೆಬೀಸಿದ್ದ. ಹಾಗೆ ಯಾಮಾರಿದವರಿಗೆ ಅಸಲೀ ನೋಟುಗಳ ರಾಶಿಯನ್ನೇ ತೋರಿಸುತ್ತಿದ್ದ. ಅಂಥವರನ್ನು ಅಜ್ಞಾತಸ್ಥಳಕ್ಕೆ ಕರೆಸಿಕೊಂಡು ಮೊದಲು ಅವರಿಂದ ಹಳೇ ನೋಟುಗಳನ್ನು ಪಡೆದುಕೊಳ್ಳುತ್ತಿದ್ದ. ಮೂರ್‍ನಾಲ್ಕು ದಿನ ಕಳೆದ ನಂತರ ಹೊಸನೋಟು ಇನ್ನೇನು ಬರಬೇಕು ಸ್ವಲ್ಪ ಕಾಯಿರಿ ಎನ್ನುತ್ತಿದ್ದ. ಹಾಗೆ ಕಾಲ ತಳ್ಳಿಕೊಂಡೇ ಇಂದು ಹಿಂದೆ ಹೇಳಿದಷ್ಟು ಆಗಲ್ಲ ಈಗ ಹೆಚ್ಚು ಪರ್ಸೆಂಟೇಜ್ ಬೇಕು ಅನ್ನುತ್ತಿದ್ದ. ಹೀಗೆ ಸತಾಯಿಸಿ ಸತಾಯಿಸಿ ಅದನ್ನು ಅರ್ಧಕ್ಕರ್ಧಕ್ಕೆ ತಂದು ನಿಲ್ಲಿಸುತ್ತಿದ್ದ. ಬರಬರುತ್ತ ನಾಗ ಎಂಥಾ ಸುಲಿಗೆಗಿಳಿದನೆಂದರೆ ಕಮೀಶನ್ನನ್ನು 75 ಪರ್ಸೆಂಟೇಜಿಗೇರಿಸಿ ಗಿರಾಕಿಗೆ 25 ಪರ್ಸೆಂಟಷ್ಟನ್ನೇ ಕೊಡುತ್ತಿದ್ದ. ಇದಕ್ಕೆ ನಾಗ ಚೆನ್ನೈನ ರಿಸರ್ವ್ ಬ್ಯಾಂಕ್‌ನ ಹಿರಿಯ ಅಧಿಕಾರಿಯೊಬ್ಬರನ್ನು ಪಳಗಿಸಿಕೊಂಡಿದ್ದ. ರಿಸರ್ವ್ ಬ್ಯಾಂಕ್‌ನ ಆ ಅಧಿಕಾರಿ ಯಾರು? ಆತನ ಎನ್ನಾರೈ ಏಜೆಂಟ್ ಯಾರು? ಈತನಕ ಆತ ಯಾರ್‍ಯಾರಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ನೋಟು ಬದಲಿಸಿಕೊಟ್ಟಿದ್ದಾನೆ? ಇತ್ಯಾದಿಗಳೆಲ್ಲವೂ ಇವತ್ತಿಗೂ ನಿಗೂಢ.


ಸೂತ್ರಧಾರ ಯಾರು?

ಡಿಸೆಂಬರ್ ಕೊನೆಯತನಕ ಸ್ಥಳೀಯವಾಗೇ ನೋಟು ಬದಲಾಯಿಸಿ ಕೊಡುವ ಅವಕಾಶವಿತ್ತಲ್ಲ, ಅಲ್ಲೀತನಕ ನಾಗ ಚೆನ್ನಾಗಿಯೇ ದುಡಿದುಕೊಂಡ. ಆದರೆ ಜನವರಿ 1 ರಿಂದ ವಿದೇಶಿ ಎನ್ನಾರೈಗಳಿಗಷ್ಟೇ ನೋಟು ಬದಲಾಯಿಸಿಕೊಡುವ ಅವಕಾಶವಿತ್ತಲ್ಲ, ಅದನ್ನು ಬಳಸಿಕೊಂಡ ನಾಗ ಬೆಂಗಳೂರಿನ ದೊಡ್ಡದೊಡ್ಡ ಆಸಾಮಿಗಳಿಗೆ ಗಾಳ ಹಾಕಲಾರಂಭಿಸಿದ. ಹೀಗೆ ನೋಟು ಬದಲಾಯಿಸಿ ಕೊಡುತ್ತೇವೆಂದು ಬೆಂಗಳೂರಿನಲ್ಲಿ ಎಲ್ಲೆಂದರಲ್ಲಿ ಹುಟ್ಟಿಕೊಂಡ ವಂಚಕ ತಂಡಗಳ ಪೈಕಿ ಕಾಂಗ್ರೆಸ್ ನಾಯಕ ವೀರಣ್ಣ ಮತ್ತಿಕಟ್ಟಿಯ ಅಳಿಯ ಪ್ರವೀಣ್ ಕುಮಾರನೂ ಒಬ್ಬ. ಕಳೆದ ತಿಂಗಳು ಪ್ರವೀಣ್‌ಕುಮಾರ್ ಜೊತೆ ಹದಿನಾಲ್ಕು ಮಂದಿಯನ್ನು ಬಂಧಿಸಿದ್ದ ಸಿಸಿಬಿ ಪೊಲೀಸರ ಬಲೆಗೆ ಬಿದ್ದವರಲ್ಲಿ ಹೆಣ್ಣೂರಿನ ಎನ್. ಉಮೇಶ್ ಕೂಡ ಒಬ್ಬ. ಈತನಿಗೆ ನಾಗನ ಮನೆಯಲ್ಲಿ ಕೋಟಿ ಕೋಟಿ ಮೊತ್ತದ ಹಳೇ ನೋಟುಗಳಿರುವುದು ಗೊತ್ತಿತ್ತು.

ಏಪ್ರಿಲ್ ಐದರ ಹೊತ್ತಿಗೆ ಜೈಲಿಂದ ಹೊರಬಿದ್ದ ಉಮೇಶ್ ತನಗೆ ಪರಿಚಿತವಿದ್ದ ಒಂದಿಬ್ಬರಿಂದ ಹಳೇ ನೋಟು ಕಿತ್ತುಕೊಂಡಿದ್ದ ನಾಗನಿಗೊಂದು ಗತಿ ಕಾಣಿಸಲು ನಿರ್ಧರಿಸಿದ್ದಾನೆ. ಇದಕ್ಕೆಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರಿಗೆ ವಿಷಯ ಮುಟ್ಟಿಸಿದ್ದಾನೆ. ಆ ಹಿರಿಯ ಅಧಿಕಾರಿಗೆ ಸುಲಭಕ್ಕೆ ನಾಗನ ಮನೆಗೆ ನುಗ್ಗಲು ಸಾಧ್ಯವಿಲ್ಲವೆಂಬುದು ಮನದಟ್ಟಾಗಿದೆ. ಅದಕ್ಕೆ ಉಮೇಶ್ ಮೂಲಕವೇ ಹಿಂದೆ ತನ್ನನ್ನು ಅಪಹರಿಸಿ 50 ಲಕ್ಷ ಕಿತ್ತಿದ್ದಾನೆಂಬಂತೆ ದೂರು ಪಡೆದಿದ್ದಾರೆ. ಆದರ ಮೇಲೆ ಸರ್ಚ್ ವಾರಂಟನ್ನೂ ಪಡೆದಿದ್ದಾರೆ. ಏಪ್ರಿಲ್ 14 ರ ಬೆಳಗಿನ ಜಾವವೇ ಹೆಣ್ಣೂರು ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ 50 ಮಂದಿಯಿದ್ದ ಪೊಲೀಸ್ ತಂಡ ಶ್ರೀರಾಂಪುರದ ನಾಗನ ಮನೆ ಮೇಲೆ ದಾಳಿಯಿಟ್ಟಿದೆ. ಸಿಕ್ಕಿದ್ದು ಬರೋಬ್ಬರಿ 14.8 ಕೋಟಿ ಮೊತ್ತದ ಹಳೇ ನೋಟುಗಳು. ಜೊತೆಗೆ ಒಂದಷ್ಟು ಲಿಟಿಗೇಷನ್ ಸೊತ್ತುಗಳ ಭೂ ದಾಖಲೆಗಳು.

ನೋಟುಗಳೇನೋ ಜಪ್ತಿಯಾದವು ನಿಜ. ಆದರೆ ಈ ಪಾಟಿ ನೋಟುಗಳು ನಾಗನ ಕೈಗೆ ಬಂದದ್ದು ಹೇಗೆ? ಅವುಗಳ ಹಿನ್ನೆಲೆಯೇನು? ಇಷ್ಟು ಮೊತ್ತದ ನೋಟುಗಳನ್ನು ಹೊಸ ನೋಟುಗಳಾಗಿ ಬದಲಾಯಿಸಿಕೊಡುವ ವ್ಯವಸ್ಥಿತ ಜಾಲ ಯಾವುದು? ಇತ್ಯಾದಿಗಳೆಲ್ಲವೂ ಪ್ರಶ್ನೆಗಳಾಗಿಯೇ ಉಳಿದಿವೆ.

■ ರಾ. ಸೋಮನಾಥ್



ಬಿಜೆಪಿ ಸಂಸದನಿಗೆ ರಜನಿ ಸ್ಟೈಲಲ್ಲಿ ನಾಗ ಬತ್ತಿ ಇಟ್ಟನೆ?

ನಾಗನ ಚಾಲಾಕಿತನ, ಕ್ರಿಮಿನಲ್ ಕಲೆಗಾರಿಕೆಯನ್ನು ಕಂಡವರ್‍ಯಾರೂ ಆತ ಈ ರೀತಿ ಹಳೇ ನೋಟುಗಳನ್ನು ಮನೆಯಲ್ಲಿಟ್ಟುಕೊಂಡು ಅಷ್ಟು ಸುಲಭಕ್ಕೆ ಯಾಮಾರಿಸುತ್ತಾನೆಂಬುದನ್ನು ಒಪ್ಪುವುದೇ ಇಲ್ಲ. ಈಗ ಸಿಕ್ಕಿಬಿದ್ದ 14 ಕೋಟಿ ಪೂರ್ತಿ ಆತ ಕಪ್ಪು ಹಣದ ಖದೀಮರಿಂದ ಕಿತ್ತುಕೊಂಡಿದ್ದೆ. ಹಳೇ ನೋಟುಗಳನ್ನು ಕೊಟ್ಟು ಅದಕ್ಕೆ ಪ್ರತಿಯಾಗಿ ಹೊಸ ನೋಟುಗಳು ಬರಲಿಲ್ಲವೆಂದರೆ ಕೊಟ್ಟವರ್‍ಯಾರೂ ಪೊಲೀಸರಿಗೆ ದೂರು ನೀಡುವುದಿಲ್ಲ. ಹಾಗೊಮ್ಮೆ ದೂರೇನಾದರೂ ದಾಖಲಿಸಿದರೆಂದರೆ ಅದು ಅವರಿಗೇ ಮುಳುವಾಗುತ್ತದೆ. ಸುಮ್ಮನೇ ಕೆರಕೊಂಡು ಗಾಯಮಾಡಿಕೊಂಡಂತೆ ಕಪ್ಪು ಹಣ ಬದಲಿಸ ಹೊರಟವರು ಐಟಿಯವರನ್ನೂ ಇಡಿಯವರನ್ನೂ ಮೇಲೆಳೆದುಕೊಂಡು ತಾಪತ್ರಯಕ್ಕೆ ಬೀಳುವ ಬದಲು ಹೋದ ದುಡ್ಡು ಹೋಗಲಿ ಎಂದೇ ತೆಪ್ಪಗಿದ್ದು ಬಿಡುತ್ತಾರೆ.

ಉದ್ಯಮಿಗಳು, ಸರ್ಕಾರದ ಅಧಿಕಾರಿಗಳು, ಡೊನೇಷನ್ ಪೀಕುವ ಕಾನ್ವೆಂಟ್ ಖದೀಮರು ಮೊದಲಾಗಿ ಯಾರೆಲ್ಲ ಬ್ಲ್ಯಾಕ್‌ಮನಿ ಬಿಳಿಯಾಗಿಸಲು ಕಳ್ಳದಾರಿ ಹುಡುಕುತ್ತಿದ್ದರೋ ಅಂಥವರನ್ನೇ ನಾಗ ಬೇಟೆಯಾಡುತ್ತಿದ್ದ. ಕೆಲ ವರ್ಷಗಳ ಹಿಂದೆ ತಮಿಳಿನಲ್ಲಿ ರಜನಿಕಾಂತ್ ನಟಿಸಿದ್ದ 'ಶಿವಾಜಿ' ಚಿತ್ರದಲ್ಲಿ ಹೇಗೆ ಬ್ಲ್ಯಾಕ್‌ಮನಿಯವರನ್ನು ಹೀರೋ ಆಟ ಆಡಿಸುತ್ತಿದ್ದನೋ ಅದೇ ಟೆಕ್ನಿಕ್ಕನ್ನು ನಾಗ ಪ್ರಯೋಗಿಸುತ್ತಿದ್ದ. ಇದಕ್ಕೆ ದೊಡ್ಡ ಮಟ್ಟದಲ್ಲಿ ಹಳ್ಳಕ್ಕೆ ಬಿದ್ದವನು ಬಿಜೆಪಿ ಸಂಸದ ಎಂಬುದು ಒಂದು ವಾದ. ಸಂಸದನ ಭಾಮೈದನ ಮೂಲಕ 14 ಕೋಟಿಯಷ್ಟನ್ನು ವೈಟ್ ಮಾಡಿಸಿ ಕೊಡುತ್ತೇನೆಂದ ನಾಗ ಅದನ್ನು ಮನೆಯಲ್ಲಿಟ್ಟುಕೊಂಡೇ ವಂಚಿಸಿಬಿಟ್ಟ.




ಹದಿನಾಲ್ಕು ಕೋಟಿಗೆ ಅರ್ಧವನ್ನಾದರೂ ಬಿಳಿಯಾಗಿಸಿಕೊಟ್ಟಿದ್ದರೆ ನಾಗನಿಗೆ ತಾಪತ್ರಯವಿರುತ್ತಿರಲಿಲ್ಲ. ಆದರೆ ಪೂರ್ತಿ ದುಡ್ಡಿಗೇ ಕೈ ಎತ್ತಿದ. ಈ ಬಗ್ಗೆ ಸಂಸದರು ಸಿಸಿಬಿಯ ಎಸಿಪಿಯೊಬ್ಬರಿಗೆ ಮೌಖಿಕವಾಗಿ ದೂರು ಕೊಟ್ಟರಾದರೂ ಪ್ರಯೋಜನವಾಗಲಿಲ್ಲ. ದುಡ್ಡು ತಿಂದ ಸಿಸಿಬಿಯ ಎಸಿಪಿ ಕೂಡ ಕೈ ಎತ್ತಿದಾಗ ವಿಧಿಯಿಲ್ಲದೆ ಸಂಸದ ಮಹಾಶಯರು ಗೃಹಸಚಿವ ಪರಮೇಶ್ವರ್ ಮೊರೆ ಹೊಕ್ಕಿದ್ದಾರೆ. ಅಂತಿಮವಾಗಿ ಇದು ನಾಗನ ಮನೆ ಮೇಲಿನ ದಾಳಿಗೆ ಕಾರಣವಾಗಿದೆ. ಹಾಲಿಂದು ಹಾಲಿಗೆ ನೀರಿಂದು ನೀರಿಗೆ ಎಂಬಂತೆ ಕೊಟ್ಟಿದ್ದು ಆದರೆ ಸಂಸದರ ದುಡ್ಡು ಮಾತ್ರ ಗೋವಿಂದಾರ್ಪಣ. ತನಗೆ ಬಚ್ಚಿಟ್ಟಿದ್ದು ಪರರಿಗೆ ಎಂಬಂಥ ದುರ್ಗತಿ ಬಿಜೆಪಿ ಸಂಸದರದ್ದು.

ತುಮಕೂರು: ಗಣಿಕಳ್ಳರಿಗೆ ಓಟು ಕಳ್ಳರ ಸಾಥ್



ಚಿಕ್ಕನಾಯಕನಹಳ್ಳಿ ಗಣಿ ಪ್ರದೇಶ





ಚಿಕ್ಕನಾಯಕನಹಳ್ಳಿಯ ಗಣಿ ಮಾಫಿಯಾ ಈ ಭಾಗದ ರೈತರನ್ನು ಇನ್ನಿಲ್ಲದಂತೆ ಕಾಡುತ್ತಿದೆ. ಸ್ಥಳೀಯ ರಾಜಕಾರಣಿ ಗಳೂ ಗಣಿ ಕಂಪನಿಗಳಿಗೆ ಸಾಥ್ ನೀಡುತ್ತಿರೋದು ಮಹಾ ದುರಂತ. ಈ ಗಣಿ ಮಾಫಿಯಾ ತುಮಕೂರು ಜಿಲ್ಲೆಯ ವಾತಾವರಣ ವನ್ನು ಕುಲಗೆಡಿಸಿರುವ ಬಗ್ಗೆ ಅಧ್ಯಯನ ನಡೆಸಲು ಜಯಕೃಷ್ಣನ್ ನೇತೃತ್ವದ ಸಮಿತಿ 2011ರ ಆಗಸ್ಟ್ ತಿಂಗಳಲ್ಲಿ ಜಿಲ್ಲೆಯ ಗಣಿಕಾರಿಕಾ ಪ್ರದೇಶಗಳಿಗೆ ಭೇಟಿನೀಡಿ ತನ್ನ ವರದಿ ನೀಡಿತ್ತು. ಈ ವರದಿಯ ಪ್ರಕಾರ ಜಿಲ್ಲೆಯಲ್ಲಿ 55 ಗಣಿ ಕಂಪನಿಗಳಿಗೆ 2678 ಹೆಕ್ಟೇರ್ ಪ್ರದೇಶದಲ್ಲಿ ಅದಿರು ತೆಗೆಯಲು ಅನುಮತಿ ನೀಡಲಾಗಿತ್ತು. 1203 ಹೆಕ್ಟೇರ್‌ನಲ್ಲಿ ಗಣಿಕಾರಿಕೆ ನಡೆಸಿದ್ದವು. ಅಕ್ರಮವಾಗಿ 257 ಎಕರೆ ಅರಣ್ಯ ಪ್ರದೇಶದಲ್ಲಿ ಅದಿರು ಹೊರ ತೆಗೆದಿದ್ದವು ಎಂದು ವರದಿಯಲ್ಲಿ ತಿಳಿಸಲಾಗಿದೆಯಂತೆ. 2001-02ರಲ್ಲಿ ಲಕ್ಷ ಟನ್ ಅದಿರು ಹೊರ ತೆಗೆದಿದ್ದ ಕಂಪನಿಗಳು 2008-09ರ ಒಂದೇ ವರ್ಷದಲ್ಲಿ 25.03 ಲಕ್ಷ ಟನ್ ಅದಿರನ್ನು ಕಾನೂನುಬಾಹಿರವಾಗಿ ಹೊರತೆಗೆದಿರುವುದು ಜಂಟಿ ಸರ್ವೇಯಲ್ಲಿ ಬಹಿರಂಗ ಗೊಂಡಿತ್ತು. ಲೀಜ್ ಉಲ್ಲಂಘಿಸಿ 130 ಎಕರೆ ಅಧಿಕ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಿದ್ದವು. ಇದಕ್ಕಾಗಿ ಸರ್ಕಾರಕ್ಕೆ 206 ಕೋಟಿ ದಂಡ ಪಾವತಿಸಿದ್ದವು. ಕಾನೂನುಬಾಹಿರವಾಗಿ ಅದಿರು ತೆಗೆದುದ್ದಕ್ಕಾಗಿ 18 ಕಂಪನಿಗಳ ಲೀಸ್ ರದ್ದುಪಡಿಸಲಾಗಿತ್ತು.

ಇಷ್ಟೆಲ್ಲ ಕಣ್ಣೆದುರಲ್ಲೇ ನಡೆಯುತ್ತಿದ್ದರೂ ಸ್ಥಳೀಯ ಜನಪ್ರತಿನಿಧಿಗಳು ಚಕಾರವೆತ್ತದೆ ಕಣ್ಮುಚ್ಚಿ ಕುಳಿತಿರೋದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಗಣಿ ಮಾಫಿಯಾ ಮೂರೂ ಪಕ್ಷಗಳಿಗೆ ಸಲ್ಲಬೇಕಾದ ಸೂಟ್‌ಕೇಸ್‌ಗಳನ್ನು ಕಾಲಕಾಲಕ್ಕೆ ತಲುಪಿಸುತ್ತಿರೋದರಿಂದಲೇ ಇವರೆಲ್ಲ ಬಾಯಿಗೆ ಬೀಗ ಜಡಿದುಕೊಂಡು ಕೂತಿದ್ದಾರೆ ಅಂತ ಜನರೇ ಮಾತಾಡಿಕೊಳ್ಳುತ್ತಿದ್ದಾರೆ.

ಹೀಗೆ ತುಮಕೂರಿನ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿರುವ ಕಂಪನಿಗಳಲ್ಲಿ ಮಾಜಿ ಸಚಿವ ವಿ. ಸೋಮಣ್ಣನ ಮಾತಾ ಮಿನರಲ್ಸ್ ಮೈನ್ಸ್ ಕಂಪನಿ ಪ್ರಮುಖವಾದುದು. ಆದರೆ ಇದುವರೆಗೂ ಅದರ ವಿರುದ್ಧ ಕ್ರಿಮಿನಲ್ ಕೇಸು ದಾಖಲಾಗಿಲ್ಲ. ಈ ನಡುವೆ ಚಿಕ್ಕನಾಯಕನಹಳ್ಳಿಯಲ್ಲಿ ನಡೆದಂತಹ ದಲಿತ ಹೋರಾಟಗಾರ್ತಿ ಹೊನ್ನಮ್ಮಳ ಕೊಲೆಗೂ ಈ ಗಣಿ ಮಾಫಿಯಾಕ್ಕೂ ಸಂಬಂಧವಿದೆ ಅಂತ ಜನ ಹೇಳುತ್ತಿದ್ದಾರೆ.

ಪುನಶ್ಚೇತನದ ಹಣ ಗುಳುಂಗೆ ಸ್ಕೆಚ್?

ಗಣಿಗಾರಿಕೆ ನಡೆಸಲು ಗುತ್ತಿಗೆ ಪಡೆದಿರುವ ಪ್ರತಿ ಕಂಪನಿಯು ಅದಿರು ಮಾರಾಟದಿಂದ ಬಂದ ಹಣದಲ್ಲಿ ಶೇ. 10ರಷ್ಟು ಹಣವನ್ನು ಪರಿಸರ ಪುನಶ್ಚೇತನಕ್ಕೆ ಆರಂಭಿಸಲಾದ ನಿಗಮಕ್ಕೆ ನೀಡಬೇಕೆಂಬ ಆದೇಶವನ್ನು ಸುಪ್ರೀಂಕೋರ್ಟ್ ನೀಡಿತ್ತು. ಆದರೆ ಸರ್ಕಾರ ಈ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸುವ ಕನಸು ಕಂಡಿತ್ತು. ಕಾರ್ಪೊರೇಟ್ ಚೇಲಾದಂತೆ ವರ್ತಿಸುತ್ತಿರುವ ಕೇಂದ್ರ ಸರ್ಕಾರ ಈ ಹಣವನ್ನು ಇದೇ ಭಾಗದಲ್ಲಿ ರೈಲ್ವೇ ಅಭಿವೃದ್ಧಿಗೆ ಬಳಸಲು ಯೋಜಿಸಿತ್ತು. ಆ ಮೂಲಕ ಗಣಿ ಕಂಪನಿಗಳಿಗೆ ಅದಿರು ಸಾಗಿಸಲು ರೈಲ್ವೆ ಮಾರ್ಗ ನಿರ್ಮಿಸಿ ನೆರವಾಗುವ ಇರಾದೆ ಸರ್ಕಾರದ್ದಾಗಿತ್ತು.

ಆದರೆ ಇದಕ್ಕೆ ತುಮಕೂರಿನ ಸಾಕಷ್ಟು ಪರಿಸರವಾದಿ ಗಳು ವಿರೋಧ ವ್ಯಕ್ತಪಡಿಸಿದ್ದರು. ರಾಷ್ಟ್ರೀಯ ಪಕ್ಷವಲ್ಲದ ಮತ್ತು ಎಲ್ಲೂ



ಅಧಿಕಾರದಲ್ಲಿರದ ಜೆಡಿಎಸ್‌ನ ಸ್ಥಳೀಯ ಶಾಸಕ ಸಿ.ಬಿ.ಸುರೇಶ್‌ಗೆ ಇದು ಜನಪರವಾಗಿ ಮಾತನಾಡ[...] ಒಳ್ಳೆಯ ಅವಕಾಶ ಒದಗಿಸಿಕೊಟ್ಟಿತ್ತು. ಕಾವೇರಿ ಮ[...] ಮಹದಾಯಿ ವಿಚಾರಗಳಂತೆ ಜೆಡಿಎಸ್ ಪಕ್ಷಕ್ಕೆ ಒಂದಷ್ಟು ಬೂಸ್ಟ್ ತುಂಬಲು ಸಾಧ್ಯತೆ ಇತ್ತು. [...] ಗಣಿ ಕಂಪನಿಗಳ ಮೇವಿಗೆ ಮಾರಿಕೊಂಡ ಸುರೇಶ[...] ಕಾಂಗ್ರೆಸ್-ಬಿಜೆಪಿಗಳ ಧನದಾಹಕ್ಕಿಂತ ತಾನೇನೂ ಇಲ್ಲ ಅನೋದನ್ನು ಸಾಬೀತುಮಾಡಿದ್ದಾರೆ.

ಆದರೆ ಈಗ ಹೊರಬಂದಿರುವ ಸುಪ್ರೀಂಕೋ[...] ತೀರ್ಪು ಸರ್ಕಾರಕ್ಕೆ ಮುಖಭಂಗ ಮಾಡಿದಂತಾಗಿ[...] ಜಿಲ್ಲೆಯ ತಿಪಟೂರು, ಚಿಕ್ಕನಾಯಕನಹಳ್ಳಿ ಹಾಗೂ [...] ಗುಬ್ಬಿ ತಾಲ್ಲೂಕುಗಳಲ್ಲಿ ಅದಿರು ಗಣಿಗಾರಿಕೆ ನಡೆಯುತ್ತಿದೆ. ಈ ಪ್ರದೇಶಗಳ ಪುನರ್ವಸತಿ ಹಾ[...] ಪುನಶ್ಚೇತನಕ್ಕೆ ಈಗ 3000 ಕೋಟಿ ಹಣ ಬರಬಹುದು ಎಂದು ಅಂದಾಜಿಸಲಾಗಿದೆ. ಹತ್ತು ವರ್ಷಗಳ ಕಾಲ ಈ ಹಣವು ಹಂತ-ಹಂತಗಳಲ್ಲಿ [...] ಬರಲಿದೆ.

ಪರಿಸರ ನಾಶ ಮಾಡುತ್ತಿರುವ ಗಣಿಕಂಪನಿಗಳು

ಗಣಿ ಮಾಲೀಕರೆಂಬ ದುರಾಸೆಯ ಬಂಡವಾಳಿಗರಿಗೆ ಅಯೋಗ್ಯ ಜನಪ್ರತಿನಿಧಿಗಳ ಸಾ[...] ಸಿಕ್ಕುಬಿಟ್ಟರೆ ಏನೆಲ್ಲಾ ಅನಾಹುತ ಆಗಬಹುದೋ [...] ಅದೆಲ್ಲವೂ ತುಮಕೂರು ಗಣಿ ಮಾಫಿಯಾ ಕೂಟ[...] ಕಾಣಬಹುದು. ಈಗ ಗಣಿಗಾರಿಕೆ ನಡೆಯುತ್ತಿರುವ[...]

ಬಿಜೆಪಿಗೂ ಬೇಡವಾಗಿದ್ದೀರಲ್ಲ ಸಾರ್!

ದಶಕಗಳಿಂದ ಕಾಪಾಡಿಕೊಂಡು ಬಂದಿದ್ದ ಸ್ವಾಭಿಮಾನವನ್ನು ಹಾಳು ಮಾಡಿಕೊಂಡು ಒಂದು ರೀತಿ ಅಜ್ಞಾತವಾಸಕ್ಕೆ ತಮ್ಮನ್ನು ತಾವೇ ದೂಡಿಕೊಂಡ ಶ್ರೀನಿವಾಸ ಪ್ರಸಾದರನ್ನು ಸಾಂತ್ವನಗೊಳಿಸುವುದು ನಮ್ಮ ಕರ್ತವ್ಯ ಎಂದು ಭಾವಿಸಿ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಕರಿಹೈದನೆಂಬೋನು ಮಾದೇಶ್ವರ ಮಾದೇಶ್ವರಿಗೆ ಶರಣು ಮಾದೇಶ್ವರ...."

"ಹಲೋ."

"ಹಲೋ, ನಮಸ್ಕಾರ ಸಾರ್. ನಾನು ಯಾಹು ಅಂತ. ಪತ್ರಕರ್ತ."

"ಹೇಳಿ ಇವರೆ."

"ಒಂದೆರಡು ಮಾತನಾಡಬೇಕಾಗಿತ್ತು ಸಾರ್."

"ಮಾತಾಡಿ."

"ನಾನು ನಿಮ್ಮ ಅಭಿಮಾನಿಯಾಗಿದ್ದೆ ಸಾರ್."

"ಅಂದ್ರೆ ಈಗಿಲ್ಲವ?"

"ನಾನು ಬಿಜೆಪಿ ವಿರೋಧಿ ಸಾರ್. ನಾನು ಗೌರವ ಕೊಡೋ ಯಾರೇ ಬಿಜೆಪಿ ಸೇರಿದ್ರು ಅದನ್ನ ಸಹಿಸಕ್ಕಾಗಲ್ಲ ಸಾರ್."

"ನಾನು ಬಿಜೆಪಿ ಸೇರಿದ್ದಕ್ಕೆ ನಾನು ಕಾರಣನಾ?"

"ಹೌದು ಸಾರ್. ನೀವೇ ಹೋಗಿ ಸೇರಿದ್ರಿ. ನಿಮ್ಮನ್ನ ಯಾರೂ ಕರೆದಿರಲಿಲ್ಲ."



"ನನ್ನನ್ನು ಏಕಾಏಕಿ ಮಂತ್ರಿಗಿರಿಯಿಂದ ತಗದ್ರೆ ಸುಮ್ಮನಿರಕ್ಕಾಗತ್ತ?"

"ನಿಮ್ಮ ಜೊತೆ ಎಷ್ಟು ಜನ ತಗದ್ರು ಸಾರ್? ಅವ್ರುರೆಲ್ಲ ರಾಜಿನಾಮೆ ಕೊಟ್ಟು ಬಿಜೆಪಿ ಸೇರಿದ್ರಾ?"

"ಇಲ್ಲ, ಆದ್ರು ನನಗೆ ಸಿದ್ದರಾಮಯ್ಯ ಮಾಡಿದ್ದು ನಂಬಿಕೆದ್ರೋಹ. ಕೇಳಿದ್ರೆ ನಾನೇ ರಾಜಿನಾಮೆ ಬಿಸಾಕತಿದ್ದೆ."

"ಅಂತ ಮಂತ್ರಿಗಿರಿ ಹೋದದ್ದಕ್ಕೆ ಇಷ್ಟೊಂದು ಸಿಟ್ಟೆ ಸಾರ್?"

"ಸಿಟ್ಟಲ್ಲ. ನನ್ನ ಸ್ವಾಭಿಮಾನಕ್ಕೆ ಆದ ಅವಮಾನಕ್ಕೆ ನಾನು ಪ್ರತೀಕಾರ ತೀರಿಸಿಕೋಬೇಕಾಗಿತ್ತು."

"ಸಾರ್ವತ್ರಿಕ ಚುನಾವಣೆ ಇನ್ನ ಒಂದು ವರ್ಷ ಇದೆ ಅನ್ನುವಾಗ ಪ್ರತೀಕಾರನ ಮುಂದೂಡಬಹುದಿತ್ತು ಸಾರ್. ಸಾರ್ವಜನಿಕರ ಹಣದ ಬಗ್ಗೆ ಕಾಳಜಿ ಇದ್ದ ರಾಜಕಾರಣಿ ಮಾಡಬಹುದಾದ ಯೋಚನೆ ಅದು."

"ಇರಬಹುದು. ಆದ್ರೆ ನನ್ನಂತ ಹಿರಿಯ ರಾಜಕಾರಣಿಯ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ತಕ್ಷಣ ಉತ್ತರ ಕೊಡಬೇಕು."

"ಸರಿ ಸಾರ್. ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದ್ಲು ನಿಮ್ಮನ್ನ ಒಳ್ಳೆ ಗೌರವಾನ್ವಿತ ರಾಜಕಾರಣಿ ಅಂತ ತಿಳಿದಿದ್ದೆ. ಕಾಂಗ್ರೆಸಿಗರೂ ದಲಿತ ಜನಾಂಗದ ವಿದ್ಯಾವಂತ, ಪ್ರಬುದ್ಧ ರಾಜಕಾರಣಿ ಅಂತ ಬಹಳ ಗೌರವದಿಂದ ನಡೆಸಿಕೊಂಡೇ ಬಂದಿದ್ರು. ನೀವು ಅದಕ್ಕೆ ಯೋಗ್ಯರಿದ್ರಿ. ಒಂದು ಕ್ಷಣದ ಅವಿವೇಕದಿಂದ ಯಲ್ಲ ನಾಶ ಆಯ್ತು ನೋಡಿ."

"ನಾನು ಅವಿವೇಕದಿಂದ ಎಂದೂ ವರ್ತಿಸಿಲ್ಲ."

"ನಿಮ್ಮ ಭಾಗದ ವಿವೇಕಯುತ ನಡವಳಿಕೆಯಿಂದ್ಲೆ ಅದು ಸಾಬೀತಾಯ್ತು ಸಾರ್. ನಿಜಕ್ಕೂ ಇದೊಂದು ಹೀನಾಯ ಸೋಲು."

"ಚುನಾವಣಾ ಫಲಿತಾಂಶ ನನ್ನ ಪರವಾಗೇ ಇತ್ತು. ಆದ್ರೆ ಮೂರು ದಿನದಲ್ಲಿ ಎಲ್ಲ ಬದಲಾಯ್ತು."

"ಮೂರೇ ದಿನದ ಬದಲಾವಣೆಗೆ ಕಾರಣ ಏನು ಸಾರ್?"

"ಕಾಂಗ್ರೆಸ್ಸಿನವರು ಕೆಂಪಯ್ಯನ ಮುಖಾಂತರ ಹಣ ಹಂಚಿ ಕ್ಷೇತ್ರದ ಮತದಾರರನ್ನು ಖರೀದಿ ಮಾಡಿದ್ರು[...]"

ಧಾತ್ತೇರಿ

▶ ಯಾಹು[...]

"ಮೂರು ದಿವಸದಲ್ಲಿ ಖರೀದಿ ಮಾಡಕ್ಕೆ ಸಾ[...] ಸಾರ್?"

"ಯಾಕಾಗಲ್ಲ? ನಂಜನಗೂಡಲ್ಲಿ ನೆಡಿತಲ್ಲ, ಕೆಂಪ[...] ಅನ್ನೋ ಮಾಜಿ ಪೊಲೀಸ್ ಅಧಿಕಾರಿಯಿಂದ ಬದಲಾಯ್ತು."

"ಸಾರ್, ನಿಜವಾಗ್ಲು ಇದೊಂದು ಬಾಲಿಶ ಹೇ[...] ಸಾರ್. ಆ ಕೆಂಪಯ್ಯ ಮೂರೇ ದಿನದಲ್ಲಿ ಒಂದು ಕ್ಷೇತ್ರ[...] ಬದಲಾಯಿಸಬಲ್ಲ ಅನ್ನದಾದ್ರೆ ಇತ್ತೀಚಿನ ಭಾ[...] ರಾಜಕಾರಣದಲ್ಲಿ ಕಂಡ ಅಪರೂಪದ ಮಾಂತ್ರಿಕ ಅನ್ನಂಗಾ[...] ಇಂತವರನ್ನೇ ಹುಡುಕ್ತಾಯಿರೋ ಬಿಜೆಪಿಗೆ ಇವರನ್ನ [...] ಹಿಡಿದು ಕೊಡಬಹುದು."

"ಆತ ಸಿದ್ದರಾಮಯ್ಯನ್ನ ಬಿಟ್ಟು ಬರಲ್ಲ, ಅವ[...] ಅದೇ ಜಾತಿ."

"ಇರ್ಲಿ, ನಿಮ್ಮ ಕಡೆ ಇದ್ದ ಮತದಾರ ದುಡ್ಡು ತಗೊ[...] ಮೂರೇ ದಿನದಲ್ಲಿ ಬದಲಾದ ಅಂದ್ರೆ ಅದು ಮತದಾ[...] ಮಾಡೋ ಅವಮಾನ ಸಾರ್. ಸಾಮಾನ್ಯವಾಗಿ ಮತ[...] ಬಹಳ ದಿನಗಳ ಮೊದಲೇ 'ಬಾ ನಿನಿಗೆ ಮಾಡ್ತಿನಿ' ಅ[...] ತೀರ್ಮಾನ ಮಾಡಿರತನೆ."

ು ತಾಲೂಕುಗಳು ಅದ್ಭುತ ಪ್ರಾಕೃತಿಕ ಸಂಪತ್ತನ್ನು
ಿದ್ದ ಪ್ರದೇಶಗಳಾಗಿದ್ದವು. ಆದರೆ ಆ ಸಂಪತ್ತು
ವೇಗವಾಗಿ ಕರಗುತ್ತಿದೆ. ಇತ್ತೀಚೆಗೆ ರಾಜ್ಯದ
ಾಧಿತ ಪ್ರದೇಶದಲ್ಲಿ ಘಟಿಸಿದ ಭೂಕಂಪನಕ್ಕೆ ಈ
ನ್ನರ ಭೂ-ಕೊರೆತವೇ ಕಾರಣ.

ಾಯಕನಹಳ್ಳಿಯ ಮದಲಿಂಗನ ಕಣಿವೆಯನ್ನು
ೆ ಪ್ರವಾಸೋದ್ಯಮ ಕೇಂದ್ರವಾಗಿ ರೂಪಿಸಲು
ಾಶವಿದೆ. ವಜ್ರ ತೀರ್ಥರಾಮೇಶ್ವರ ಬೆಟ್ಟವನ್ನು
ಳ ಉದ್ಯಾನವಾಗಿ ರೂಪಿಸಬೇಕಾದ ಪರಿಸ್ಥಿತಿ
ಸ್ವತಃ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ)
ದ ಸಂಶೋಧನಾ ವರದಿಯಲ್ಲಿ ಗಣಿಗಾರಿಕೆ
ುವ ಸುತ್ತಮುತ್ತಲ ಗ್ರಾಮಗಳ ಕೃಷಿಯ ಮೇಲೆ,
ೀವನದ ಮೇಲೆ ದುಷ್ಪರಿಣಾಮ ಬೀರಿದೆ
ಾಗಿದೆ. ಕೃಷಿಯಲ್ಲಿ 75%ರಷ್ಟು ಇಳುವರಿ
ಯಾಗಿದೆ. ಐರನ್ ಆಕ್ಸೈಡ್ ಪ್ರಮಾಣದ
ದಿಂದ ಮಣ್ಣಿನ ಫಲವತ್ತತೆ ಹಾಗೂ ಅಂತರ್ಜಲ
ದೆ. ತೋಟಗಾರಿಕೆ ಬೆಳೆಗಳಲ್ಲಿ 60%ರಿಂದ
ಷ್ಟು ಇಳುವರಿ ಕುಸಿತ ಕಂಡಿದೆ ಎಂದು
ಯಲ್ಲಿ ತಿಳಿಸಿದೆ. ಗಣಿಧೂಳಿನಿಂದಾಗಿ ಶಾಲೆಗಳಲ್ಲಿ
ತುಂಬಿ ಮಧ್ಯಾಹ್ನದ ಬಿಸಿಯೂಟ ಯೋಜನೆ
ರ್ಕ ಅನುಷ್ಠಾನ ಸಾಧ್ಯವಾಗಿಲ್ಲ. ಧೂಳಿನ ಕಾರಣ
ಗೈರುಹಾಜರಿ ಹೆಚ್ಚಿದೆ ಎಂಬುದೂ
ಾರ್ಹ ಅಂಶ.

ಂಥಾ ಸಮಯದಲ್ಲಿ ಜನರ ಪರವಾಗಿ
ೇಕಿದ್ದ ಜನಪ್ರತಿನಿಧಿಗಳು ಹೋರಾಟಗಾರರನ್ನು
ಲು, ಅವರನ್ನು ಗೇಲಿ ಮಾಡಲೂ ತಮ್ಮನ್ನು
ತವಾಗಿಸಿಕೊಂಡಿದ್ದಾರೆ. ಎಸ್.ಆರ್.ಹಿರೇಮಠ್,
ತ್ಯ ಹೋರಾಟಗಾರರಾದ ರೇವಣ್ಣ, ಪರಿಸರವಾದಿ
ಾಜು ಮುಂತಾದವರ ನೇತೃತ್ವದಲ್ಲಿ ಸಾಕಷ್ಟು
ಜನರು ಪ್ರತಿಭಟನೆ ನಡೆಸುತ್ತಲೇ ಬಂದಿದ್ದಾರೆ.
ಜನಪ್ರತಿನಿಧಿಗಳಿಂದ ಬೆಂಬಲ ಸಿಗುತ್ತಿಲ್ಲ.

ನ ಈ ಬಗ್ಗೆ ಪ್ರಶ್ನಿಸುತ್ತಾರೆ ಎನ್ನುವಾಗ ಅವರಿಗೆ
ಕ್ಕ ಆಮಿಷವೊಡ್ಡಿ ಬಾಯಿ ಮುಚ್ಚಿಸುವುದು
ಾರಣಿಗಳಿಗೆ ಕರಗತವಾಗಿದೆ. ರಾಜಕೀಯ ವೈರತ್ವ
ಿಸಿ ಜನರ ಒಗ್ಗಟ್ಟು ಮುರಿಯುವುದು ಅವರಿಗೆ
ೆ. ಜನರ ಮುಂದೆ ಬದ್ಧ ವೈರಿಗಳಂತೆ ಕಾಣುವ
ೀಯ ಮುಖಂಡರು ಒಳಗೊಳಗೆ ಮಿಲಾಪಿ
ಾರಣ ಮಾಡಿಕೊಂಡು ಗಣಿ ಮಾಫಿಯಾಕ್ಕೆ
ವಾಗಿದ್ದಾರೆ. ಇಷ್ಟುದಿನ ಪ್ರಕೃತಿ ಸಂಪತ್ತನ್ನು
ಲೂಟಿ ಮಾಡುತ್ತಿದ್ದ ಮಾಫಿಯಾ ಇದೀಗ
ರ ಪುನಶ್ಚೇತನ ಅನುದಾನವನ್ನೂ ಗುಳುಂ
ಲು ರಾಜಕಾರಣಿಗಳನ್ನು ಬಳಸಿಕೊಳ್ಳಲು
ದಾಗಿದೆ. ಇದು ಈ ನೆಲದ ದುರಂತ!

ಅನಿಲ್ ಕುಮಾರ್ ಚಿಕ್ಕದಾಳವಟ್ಟಿ

ಆದ್ರೆ ನಂಜನಗೂಡಲ್ಲಿ ಜನ ನನ್ನ ಜೊತೆ ಇದ್ರು."

ಈಗ್ಲೂ ಇದಾರಲ್ಲ ಸಾರ್. ನಿಮ್ಮ ತೀರ್ಮಾನ
ಜೋರೆಲ್ಲ ನಿಮಗೆ ಓಟು ಮಾಡಿದೊರೆ ಅಲ್ಲವೆ.
ನಿಮ್ಮನ್ನ ತಿರಸ್ಕಾರ ಮಾಡಿದೊರು ನಿಮ್ಮ ರಾಜಕಾರಣ
ೀರು."

ಇರಬಹುದು."

ಅಂದಮೇಲೆ ಹಣದ ಹಂಚಿಕೆ ಇರ್ಲಿ, ಇಲ್ದೆ ಇರ್ಲಿ
ಸೋಲಂತೂ ನೀವು ನಿಂತಾಗಲೇ ನಿಗದಿಯಾಗಿತ್ತು."

ಇಲ್ಲ, ಯಲ್ಲಾ ಚೆನ್ನಾಗಿತ್ತು, ಹಣ ಹಂಚಿ ಹಾಳು
ದ್ರು."

ಈಗೆಲ್ಲ ಮುಗಿತಲ್ಲ, ಮುಂದೇನು ಸಾರ್?"

ಬಿಜೆಪಿಲಿರ್ತಿನಿ."

ವಯಸ್ಸಾದವ್ರುನ್ನ ಗೌರವವಾಗಿ ನಡಿಸಿಗಳೊ ಒಂದೇ
ಕಾಂಗ್ರೆಸ್ಸು ಸಾರ್. ಈ ಬಿಜೆಪಿಗಳು ನಿಮ್ಮನ್ನ
ಗೌರವದಿಂದ ನಡಿಸಿಗಳಲ್ಲ, ಯಾಕೆ ಅಂದ್ರೇ
ಹೊರಗಿನವರು. ಇಡೀ ಇಂಡಿಯಾದ ಚೆಡ್ಡಿಗಳು
ವರ್ನ ಹ್ಯಂಗೆ ನಡಿಸಿಗಂಡ್ರು ಅಂತ ನಿಮಗೆ ಗೊತ್ತಿಲ್ಲ,
ಅಲ್ಲಿಗೋಗ್ತಿರಲಿಲ್ಲ, ಮನುಷ್ಯ ತನ್ನ ಸ್ವಸ್ಥ ಜೀವನವನ್ನ
ಮಾಡ್ಕೊಂಡು ಯಾಕೆ ದುರಂತ ತಂದುಕೊಳ್ತನೆ
ಅನಾದಿಕಾಲದ ಪ್ರಶ್ನೆಯಂತೆ. ನಮ್ಮ ಕಣ್ಣು ಮುಂದೆ
ಚೆನ್ನಾಗಿದ್ದೊರು ಹಿಂಗಾದರಲ್ಲ ಸಾರ್."

ದೇನಾಗಿದ್ರಿ?"

ಬಿಜೆಪಿಗೂ ಬೇಡದವರಾಗಿದ್ದೀರಿ."

ಲ್ಲ!"

...!!!"

ಕಾಶ್ಮೀರವು ನೀಡಿರುವ ಸಂದೇಶ ಸ್ಪಷ್ಟವಾಗಿದೆ

EPW ಸಂಪಾದಕೀಯ

ಕೃಪೆ: *Economic and Political Weekly April 15, 2017. Vol. 52, No. 15*

■ ಅನು: ಶಿವಸುಂದರ್

ಸಂಸತ್ ಉಪಚುನಾವಣೆಯ ಬಹಿಷ್ಕಾರವು ಭಾರತದ ಪ್ರಭುತ್ವದ ಬಗ್ಗೆ ಕಾಶ್ಮೀರಿಗಳು ಎಷ್ಟು ಭ್ರಮನಿರಸನಗೊಂಡಿದ್ದಾರೆಂಬುದನ್ನು ತೋರಿಸುತ್ತದೆ.

ಕಾಶ್ಮೀರದ ಕಣಿವೆಯಲ್ಲಿ ನಡೆದ ಚುನಾವಣೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಭಾಗವಹಿಸುತ್ತಿರುವುದು ಅಲ್ಲಿನ ಜನರ ಬದಲಾಗುತ್ತಿರುವ ಮನೋಧರ್ಮಕ್ಕೆ ಸೂಚಕವೆಂದು ತುಂಬಾ ದಿನಗಳಿಂದ ಭಾರತೀಯರನ್ನು ನಂಬಿಸಿಕೊಂಡು ಬರಲಾಗಿದೆ. ನಾವೂ ಸಹ ಚುನಾವಣೆಯಲ್ಲಿ ಮತಹಾಕಿದವರ ಸಂಖ್ಯೆಯನ್ನು ಗಮನಿಸುತ್ತಿದ್ದೇವೆಯೇ ವಿನಃ ಮತವನ್ನು ಬಹಿಷ್ಕಾರ ಮಾಡಿದವರ ಸಂಖ್ಯೆಯನ್ನು ಗಮನಿಸುತ್ತಿಲ್ಲ. ದಮನದ ತೀವ್ರತೆ ಎಷ್ಟೇ ಇದ್ದರೂ ಕಾಶ್ಮೀರಿಗಳು ಹೊರಬಂದು ತಮ್ಮ ಮತಗಳನ್ನು ಚಲಾಯಿಸುತ್ತಾರೆಂದು ನಮ್ಮನ್ನು ನಂಬಿಸಲಾಗಿತ್ತು.

ಆದರೆ ಏಪ್ರಿಲ್ 9 ರಂದು ನಡೆದ ಶ್ರೀನಗರದ ಉಪಚುನಾವಣೆಯಲ್ಲಿ ದಾಖಲಾದ ಅತ್ಯಂತ ಕನಿಷ್ಟ- ಶೇ.7.14 - ಮತದಾನ ಮತ್ತು ಅದೇ ದಿನ ನಡೆದ ಹಿಂಸಾಚಾರಗಳಲ್ಲಿ 9 ಯುವ ಪ್ರತಿಭಟನಾಕಾರರು ಸತ್ತು 200ಕ್ಕೂ ಹೆಚ್ಚು ಜನ ಗಾಯಗೊಂಡಿದ್ದು ನಿಜವಾದ ಕಥೆಯನ್ನು ಬಿಚ್ಚಿಟ್ಟಿದೆ. ಭಾರತದ ಸಾಂವಿಧಾನಿಕ ಸಂಸ್ಥೆಗಳ ಬಗ್ಗೆ ಕಾಶ್ಮೀರಿಗಳು ಸಂಪೂರ್ಣವಾಗಿ ಭ್ರಮನಿರಸನಗೊಂಡಿದ್ದಾರೆಂಬುದನ್ನು ಇದು ಸಾಬೀತುಪಡಿಸುತ್ತದೆ.

ಇಲ್ಲಿ ಮತ್ತೊಂದು ವಿಷಯವನ್ನು ನಾವು ಸ್ಪಷ್ಟವಾಗಿ ಗಮನಿಸಬೇಕು. ಕಾಶ್ಮೀರದ ಸ್ಥಳೀಯ ಸಂಸ್ಥೆಗಳಿಗೆ, ಶಾಸನಸಭೆಗೆ ಮತ್ತು ಲೋಕಸಭೆಗೆ ನಡೆಯುವ ಚುನಾವಣೆಗಳಲ್ಲಿ ಭಿನ್ನ ಭಿನ್ನ ರೀತಿಯಲ್ಲಿ ಕಾಶ್ಮೀರಿಗಳು ಮತದಾನ ಮಾಡುತ್ತಾರೆ. ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಹೆಚ್ಚು ಮತದಾನ ದಾಖಲಾದರೆ ಲೋಕಸಭಾ ಚುನಾವಣೆಗಳಲ್ಲಿ ಅತ್ಯಂತ ಕಡಿಮೆ ಮತದಾನ ದಾಖಲಾಗುತ್ತದೆ. ಇದು ಆಯಾ ಸಂಸ್ಥೆಗಳ ಪ್ರಸ್ತುತತೆ ಮತ್ತು ಅವುಗಳ ಬಗ್ಗೆ ಕಾಶ್ಮೀರಿಗಳು ಇಟ್ಟಿರುವ ವಿಶ್ವಾಸದ ಮಟ್ಟವನ್ನು ಕೂಡಾ ಪ್ರತಿಫಲಿಸುತ್ತದೆ. ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ನಡೆಯುವ ಮತದಾನವು ತಮ್ಮ ನಿತ್ಯದ ಸಮಸ್ಯೆಗಳ ಪರಿಹಾರದ ಬಗ್ಗೆ ಜನರು ತೋರುತ್ತಿರುವ ಬಯಕೆಯನ್ನು ತೋರಿಸುತ್ತದೆ. ಶಾಸನಸಭೆಗೆ ಓಟುಹಾಕುವಾಗ ತಮ್ಮ ರಾಜ್ಯ ಸರ್ಕಾರವು ದಶಕಗಳಿಂದ ಜನರು ಎದುರಿಸುತ್ತಿರುವ ದಮನದ ವಿನಾಶಕಾರಿ ಪರಿಣಾಮಗಳನ್ನು ನಿವಾರಿಸಬಲ್ಲದೇ ವಿನಃ ರಾಜಕೀಯ ಬಿಕ್ಕಟ್ಟನ್ನಲ್ಲ ಎಂದು ಅರಿತುಕೊಂಡೇ ಮತದಾನ ಮಾಡುತ್ತಾರೆ. ಸಂಸತ್ತಿಗೆ ನಡೆಯುವ ಮತದಾನ ಸಂಪೂರ್ಣ ಭಿನ್ನವಾದದ್ದು. 1993ರಲ್ಲಿ ಭಾರತದ ಸಂಸತ್ತು ಜಮ್ಮು ಮತ್ತು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂದು ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರವೂ ಭಾರತಕ್ಕೇ ಸೇರಬೇಕೆಂದು ಸರ್ವಸಮ್ಮತಿಯಿಂದ ನಿರ್ಣಯವನ್ನು ಕೈಗೊಂಡಾಗಲಿಂದ ಬಹುಸಂಖ್ಯಾತ ಕಾಶ್ಮೀರಿಗಳ ಮಟ್ಟಿಗೆ ಭಾರತದ ಸಂಸತ್ತು ಪ್ರಸ್ತುತತೆಯನ್ನೆ ಕಳೆದುಕೊಂಡಿದೆ. ಅದೇ ಸಮಯದಲ್ಲಿ ಭಾರತದ ಸಂಸತ್ತು ಕಾಶ್ಮೀರಿಗಳು ಎದುರಿಸುತ್ತಿರುವ ಸೈನಿಕ ದಮನದ ಭೀಭತ್ಸತೆಯನ್ನು ಮತ್ತು ಅವರ ಪ್ರಜಾತಾಂತ್ರಿಕ ಆಶೋತ್ತರಗಳನ್ನು ಸಂಪೂರ್ಣವಾಗಿ ಕಡೆಗಣಿಸಿತು.

ಹಾಲಿ ಸರ್ಕಾರವಾಗಲೀ ಅಥವಾ ಈ ಹಿಂದಿನ ಸರ್ಕಾರಗಳಾಗಲೀ ಕಾಶ್ಮೀರದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಕಾಶ್ಮೀರಿಗಳೊಂದಿಗೆ ಒಂದು ಗಂಭೀರ ರಾಜಕೀಯ ಸಮಾಲೋಚನೆಯನ್ನು ಮಾಡಬೇಕೆಂಬ ಆಸಕ್ತಿಯನ್ನೇ ತೋರಲಿಲ್ಲ. ಇನ್ನು ಕಾಶ್ಮೀರಕ್ಕೆ ಸಂವಿಧಾನಿಕವಾಗಿ ದತ್ತವಾಗಿದ್ದ ಸ್ವಾಯತ್ತತೆಯ ಸ್ವರೂಪವನ್ನು 1964ರ ವೇಳೆಗೆ ಒಂದೊಂದಾಗಿ ಹಿಂತೆಗೆದುಕೊಂಡು ಟೊಳ್ಳಾಗಿಸಿದ ಮೇಲೆ ಕಾಶ್ಮೀರದ ಸ್ವಾಯತ್ತತೆಯ ವಿಷಯವನ್ನು ಕೇವಲ ಕಾಶ್ಮೀರದಲ್ಲಿ ಮಾತ್ರವಲ್ಲ ಕಾಶ್ಮೀರದ ಹೊರಗೂ ಯಾರೂ ಗಂಭೀರವಾಗಿ ಪರಿಗಣಿಸಲು ಸಿದ್ಧರಿಲ್ಲ.

ಹೀಗೆ ಸರ್ಕಾರದ ಮುಂದಿಡುತ್ತಿರುವ ತರ್ಕ ಸರಣಿಯನ್ನು ಪರಿಶೀಲಿಸಿದರೂ ಭಾರತದ ಸಂಸತ್ ಚುನಾವಣೆಯ ಬಗ್ಗೆ 1998ರಿಂದಲೂ ಕಾಶ್ಮೀರ ಕಣಿವೆಯಲ್ಲಿ ನಿರಾಸಕ್ತಿಯೇ ವ್ಯಕ್ತವಾಗಿರುವುದನ್ನು ಗಮನಿಸಬಹುದು. 1998ರಲ್ಲಿ ಶೇ. 70-80ರಷ್ಟು ಕಾಶ್ಮೀರಿ ಮತದಾರರು ಮತದಾನವನ್ನು ಬಹಿಷ್ಕರಿಸಿದ್ದರು. 2014ರಲ್ಲಿ ಶೇ.74ರಷ್ಟು ಜನರು ಮತದಾನವನ್ನು ಬಹಿಷ್ಕರಿಸಿದ್ದರೆ ಈಗ ಶೇ.93 ರಷ್ಟು ಜನರು ಸಂಸತ್ ಚುನಾವಣೆಯನ್ನು ಬಹಿಷ್ಕರಿಸಿದ್ದಾರೆ. ಇದು ಕೇಂದ್ರದ ಭಾರತೀಯ ಜನತಾ ಪಕ್ಷದ ನೇತೃತ್ವದಲ್ಲಿರುವ ಸರ್ಕಾರದ ಆಳ್ವಿಕೆಯಡಿಯಲ್ಲಿ ಕಾಶ್ಮೀರದೊಳಗೆ ಭಾರತದ ಪರವಾಗಿರುವವರ ಮತಸಂಖ್ಯೆ ಗಮನೀಯವಾಗಿ ಇಳಿಕೆಯಾಗಿರುವುದನ್ನೂ ಸಹ ಸೂಚಿಸುತ್ತದೆ. ನರೇಂದ್ರ ಮೋದಿಯವರು ತಮ್ಮ "ಪ್ರವಾಸೋದ್ಯಮವೋ ಅಥವಾ ಭಯೋತ್ಪಾದನೆಯೋ" ಎಂಬ ಪ್ರಾಸಬದ್ಧ ಹೇಳಿಕೆಗಳಿಂದ ಭಾರತದೊಳಗಿನ ತನ್ನ ಮತೋನ್ಮಾದಿ ಮತ್ತು ಭಾವೋನ್ಮಾದೀ ಭಕ್ತಗಣವನ್ನು ತೃಪ್ತಗೊಳಿಸಬಹುದು.

ಆದರೆ ಇಂಥಾ ಘೋಷಣೆಗಳು ಕಾಶ್ಮೀರ ಕಣಿವೆಯಲ್ಲಿ ಯಾವ ಅರ್ಥವನ್ನಾಗಲೀ ಅಥವಾ ಅತಿಸಣ್ಣ ಪರಿಣಾಮವನ್ನಾಗಲೀ ಉಂಟುಮಾಡುವುದಿಲ್ಲ. ದುರಂತವೆಂದರೆ ಕಾಶ್ಮೀರದ ಎಲ್ಲಾ ಸಮಸ್ಯೆಗಳಿಗೆ ಪಾಕಿಸ್ತಾನವೇ



ಕಾರಣ ಎಂದು ಇತರರನ್ನು ನಂಬಿಸಲು ತಾನು ಮಾಡುತ್ತಿರುವ ಹುಸಿಪ್ರಚಾರವನ್ನು ತಾನೇ ನಿಜವೆಂದು ನಂಬಿಕೊಂಡುಬಿಡುವ ಸರ್ಕಾರವೊಂದು ಪ್ರವಾಸೋದ್ಯಮ ಮತ್ತು ಉದ್ಯೋಗಗಳ ಆಮಿಷವನ್ನು ಮುಂದಿಡುವ ಮೂಲಕ ಸಮಸ್ಯೆಯನ್ನು ಬಗೆಹರಿಸಿಬಿಡ ಬಹುದೆಂದು ತನ್ನನ್ನು ತಾನೇ ನಂಬಿಸಿಕೊಳ್ಳುವುದು ಮತ್ತು ಇತರರನ್ನು ನಂಬಿಸಲು ಯತ್ನಿಸುವುದು..

ಈ ತಿಳಿವಳಿಕೆಯನ್ನು ಹಲವಾರು ಸಂಪುಟ ದರ್ಜೆ ಸಚಿವರುಗಳು, ಒಬ್ಬ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರರು ಮತ್ತು ಮಾಜಿ ಸೇನಾಧಿಕಾರಿಗಳನ್ನು ಒಳಗೊಂಡಂತೆ ಈ ಹಿಂದೆ ಭಾರತೀಯ ಆಡಳಿತ ವ್ಯವಸ್ಥೆಯ ಭಾಗವಾಗಿದ್ದವರೇ ಪ್ರಶ್ನಿಸಿದ್ದಾರೆ. ಕಾಶ್ಮೀರಿ ಬಂಡಾಯದ ಮೂಲವು ಅದರ ಸ್ಥಳೀಯತೆಯಲ್ಲೇ ಇರುವುದನ್ನೂ ಮತ್ತು ಪರಿಣಾಮಕಾರಿ ರಾಜಕೀಯ ಮಾತುಕತೆಗಳನ್ನು ಪ್ರಾರಂಭಿಸುವುದರ ಅಗತ್ಯವನ್ನೂ ಅಂಥವರು ಪ್ರತಿಪಾದಿಸಿದ್ದಾರೆ. ದುರದೃಷ್ಟವಶಾತ್ ದೆಹಲಿ ಸರ್ಕಾರವು ಕಾಶ್ಮೀರ ನೀತಿಯಲ್ಲಿ ತನಗಿರುವ ವಿವೇಕದ ಕೊರತೆಯ ಪ್ರದರ್ಶನವನ್ನು ಮುಂದುವರಿಸುತ್ತಲೇ ಇದೆ.

ಭಾರತದ ಸಾರ್ವಜನಿಕ ನೀತಿ ಮತ್ತು ಅಭಿಪ್ರಾಯಗಳನ್ನು ರೂಪಿಸುವ ಮಹಾಶಯರುಗಳು ಕಾಶ್ಮೀರಿಗಳನ್ನು, ತಮ್ಮ "ಮುಸ್ಲಿಮ್‌ತನ" ವನ್ನು ಎತ್ತಿಹಿಡಿಯುವುದನ್ನೂ ಮತ್ತು ಪಾಕಿಸ್ತಾನದ ಕೈಗೊಂಬೆಗಳಂತೆ ವರ್ತಿಸುವುದನ್ನೂ ತೀವ್ರವಾಗಿ ಆಕ್ಷೇಪಿಸುತ್ತಾರೆ. ಆದರೆ ಇದೇ ಮಹಾಶಯರುಗಳು ಇದೇ ಭಾರತದ ಪ್ರಭುತ್ವವು ಭಾರತದೊಳಗಿನ ಮುಸ್ಲಿಮರ ವಿರುದ್ಧವಾಗಿರುವುದನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾರೆ. ಉದಾಹರಣೆಗೆ, ಜಮ್ಮು ವಾಣಿಜ್ಯ ಮತ್ತು ಕೈಗಾರಿಕೆಗಳ ಒಕ್ಕೂಟದ ಅಧ್ಯಕ್ಷ ರಾಕೇಶ್ ಗುಪ್ತಾ ಅವರು ಇತ್ತೀಚೆಗೆ ಜನರು "ರೋಹಿಂಗ್ಯಾ ಮತ್ತು ಬಾಂಗ್ಲಾದೇಶಿ ಮುಸ್ಲಿಮರನ್ನು ಪತ್ತೆಹಚ್ಚಿ ಕೊಲ್ಲಬೇಕೆಂದು" ಕೊಟ್ಟ ಹೇಳಿಕೆಯನ್ನೇ ತೆಗೆದುಕೊಳ್ಳಿ. ಇದೊಂದು ಅಪವಾದದ ಸಂಗತಿಯೇನಲ್ಲ, ಇದು ದೇಶದ ಹಲವಾರು ಕಡೆ ಹೆಚ್ಚುತ್ತಿರುವ ಮತ್ತು ನಿರ್ಲಜ್ಜ ಬಹಿರಂಗ ಮುಸ್ಲಿಮ್ ವಿರೋಧಿ ದಾಳಿಗಳ ಮುಂದುವರಿಕೆಯಾಗಿದೆ.


ಅದೇ ರೀತಿ ಕಾಶ್ಮೀರದ ಬೀದಿಗಳಲ್ಲಿ ಅತ್ಯಂತ ಆಕ್ರೋಶ ಮತ್ತು ಬಂಡಾಯದ ಮನೋಭಾವಗಳು ಮಡುಗಟ್ಟಿದೆ ಎಂಬುದನ್ನೂ ಅರ್ಥಮಾಡಿಕೊಳ್ಳುವುದೂ ಅತ್ಯಗತ್ಯವಾಗಿದೆ. ಒಂದೆಡೆ ಗುಂಡುಗಳು ಮತ್ತು ಪೆಲೆಟ್ಟುಗಳ ದಾಳಿಗಳಿಗೆ ಬಲಿಯಾದವರ ಸಂಖ್ಯೆ ಹೆಚ್ಚುತ್ತಿದ್ದರೆ ಮತ್ತೊಂದು ಕಡೆ ಭಾರತ ಸರ್ಕಾರಕ್ಕೆ ಸಶಸ್ತ್ರ ಹೋರಾಟದ ಭಾಷೆ ಮಾತ್ರ ಅರ್ಥವಾಗುತ್ತದೆ ಎಂಬ ಮನೋಭಾವ ಬಹುಪಾಲು ಕಾಶ್ಮೀರಿಗಳಲ್ಲಿ ಅದರಲ್ಲೂ ವಿಶೇಷವಾಗಿ ಯುವಜನತೆಯಲ್ಲಿ ಗಟ್ಟಿಯಾಗತೊಡಗಿದೆ.

ಎನ್‌ಕೌಂಟರ್‌ಗಳು ನಡೆಯುತ್ತಿರುವಾಗಲೇ ಎನ್‌ಕೌಂಟರ್ ನಡೆಯುತ್ತಿರುವ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಜಮಾಯಿಸಿ ತಮಗಾಗಿ ಬಂದೂಕನ್ನು ಕೈಗೆತ್ತಿಕೊಂಡ ತಮ್ಮವರನ್ನು ಬೆಂಬಲಿಸಲು ಮತ್ತು ರಕ್ಷಿಸಿಕೊಳ್ಳಲೂ ಮುಂದಾಗುತ್ತಿದ್ದಾರೆ. ಈ ವಿದ್ಯಮಾನಗಳು ಹೇಳುತ್ತಿರುವುದಿಷ್ಟೆ. ಹಿಂದೂ ಬಹುಸಂಖ್ಯಾತರ ಪರವಾಗಿರುವ ಪ್ರಭುತ್ವವು ಅಧಿಕಾರದಲ್ಲಿರುವ ಭಾರತ ಒಕ್ಕೂಟದ ಜೊತೆ ಸೇರಿಕೊಳ್ಳುವುದು ತಮ್ಮ ಹಿತಾಸಕ್ತಿಗೆ ವಿರುದ್ಧವೆಂಬ ತೀರ್ಮಾನಕ್ಕೆ ಕಾಶ್ಮೀರಿಗಳು ಬಂದಂತಿದೆ. ಸರ್ಕಾರದ ಪರ ವಕಾಲತ್ತು ವಹಿಸುವವರು ಪ್ರಚಾರ ಮಾಡುತ್ತಿರುವಂತೆ ಕಾಶ್ಮೀರಿ ಯುವಕರು ಕೆಲವು ನೂರು ರೂಪಾಯಿಗಳಿಗಾಗಿ ತಮ್ಮ ಪ್ರಾಣವನ್ನು ಮತ್ತು ಅಂಗಾಂಗಗಳನ್ನು ಪಣಕ್ಕಿಡುತ್ತಿಲ್ಲ. ತಮ್ಮ ಕೂಗನ್ನು ಹಾಗೂ ಆಜಾದಿಗಾಗಿನ ತಮ್ಮ ಹಕ್ಕೊತ್ತಾಯಗಳನ್ನೂ ಕೇಳಿಸಿಕೊಳ್ಳುವಂತೆ ಮಾಡಲು ಇದಕ್ಕಿಂತ ಬೇರೆ ಮಾರ್ಗೋಪಾಯಗಳಿಲ್ಲವೆಂದು ಅವರು ಭಾವಿಸುತ್ತಿರುವುದರಿಂದ ಅವರು ಈ ದಾರಿಯನ್ನು ಹಿಡಿದಿದ್ದಾರೆ.

ಕಾಶ್ಮೀರಿಗಳ ಭ್ರಮನಿರಸನಕ್ಕೆ ಮತ್ತು ಆಕ್ರೋಶಕ್ಕೆ ಇರುವ ಕಾರಣಗಳು ಸಹ ಕಣ್ಣಿಗೆ ರಾಚುವಂತಿದೆ. ಜಮ್ಮು ಪ್ರಾಂತ್ಯದಲ್ಲಿ "ಗೋರಕ್ಷಕರ" ಕಾರ್ಯಾಚರಣೆ ಎಗ್ಗಿಲ್ಲದೆ ಮುಂದುವರೆದಿರುವುದೂ, "ಗಲಭೆಪೀಡಿತ ಪ್ರದೇಶಗಳಲ್ಲಿ" ರಾಷ್ಟ್ರೀಯ ಸ್ವಯಂಸೇವಕರ ದಂಡುಗಳಿಗೆ ಶಸ್ತ್ರಾಸ್ತ್ರಗಳನ್ನು ಝಳಪಿಸಲು ಅವಕಾಶ ಮಾಡಿಕೊಟ್ಟಿದ್ದು, 2014ರ ಸೆಪ್ಟೆಂಬರ್‌ನಲ್ಲಿ ಸಂಭವಿಸಿದ ಘನಘೋರ ಪ್ರವಾಹದ ಸಂದರ್ಭದಲ್ಲಿ ಪರಿಹಾರ ಮತ್ತು ಪುನರ್‌ವಸತಿಯನ್ನು ವಿತರಿಸುವಲ್ಲಿ ಉದ್ದೇಶಪೂರ್ವಕವಾದ ವಿಳಂಬ ತೋರಿದ್ದು, 2016ರ ಜುಲೈ 8 ರಂದು ಬುರ್ಹಾನ್ ವಾನಿಯ ಹತ್ಯೆಯ ನಂತರದಲ್ಲಿ ನಡೆದ ಸಾಮಾನ್ಯ ನಾಗರಿಕರ ಹತ್ಯೆಗಳು.. ಇಂಥಾ ಸಾಲು ಸಾಲು ಉದಾಹರಣೆಗಳು ಕಾಶ್ಮೀರಿಗಳ ಭ್ರಮನಿರಸನಕ್ಕೆ ಕಾರಣವನ್ನು ಒದಗಿಸುತ್ತವೆ.

ಕಾಶ್ಮೀರದ ಸಮಸ್ಯೆಯ ಮೂಲ ಇರುವುದು ಪಾಕಿಸ್ತಾನದಲ್ಲಲ್ಲ, ಬದಲಿಗೆ ಭಾರತೀಯರಾದ ನಮ್ಮೊಳಗೆ ಇದೆ ಎಂಬುದನ್ನೂ ಮತ್ತು ಭಾರತದ ಬಗ್ಗೆ ಮತ್ತು ಭಾರತೀಯ ನಾಗರಿಕ ಸಮಾಜದ ಬಗ್ಗೆ ಕಾಶ್ಮೀರಿಗಳ ಭ್ರಮನಿರಸನ ಇನ್ನಷ್ಟು ಆಳವಾಗುತ್ತಿದೆ ಎನ್ನುವ ಸತ್ಯವನ್ನೂ ಭಾರತೀಯರಾದ ನಾವು ಈಗಲಾದರೂ ಅರ್ಥಮಾಡಿ ಕೊಳ್ಳಬೇಕಿದೆ. ಇದೇ ಚುನಾವಣೆಯನ್ನು ಬಹಿಷ್ಕರಿಸಿದ ಆ ಶೇ.93 ಜನರು ಭಾರತಕ್ಕೆ ಕೊಡುತ್ತಿರುವ ಸಂದೇಶವಾಗಿದೆ ■

ದಲಿತರಿಗೆ ಭೀಮ ಸಂದೇಶ



21ನೇ ಶತಮಾನವನ್ನು ಸ್ಪರ್ಧಾತ್ಮಕ ಯುಗವೆಂದು ಅಭಿವೃದ್ಧಿ ತಜ್ಞರು ವ್ಯಾಖ್ಯಾನಿಸಿದ್ದಾರೆ. ಇಂದು ಸರ್ವರೀತಿಯಲ್ಲೂ ಜ್ಞಾನಿಗಳು, ಅನುಭವಿಗಳು, ಪರಿಣಿತರು ಮತ್ತು ಸಮರ್ಥರು ಮಾತ್ರ ಬದುಕಿನಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ. ದಲಿತರಿಗೆ ಜಾಗತೀಕರಣ ಯುಗದಲ್ಲಿ ಮೀಸಲಾತಿ ಸೌಲಭ್ಯಗಳು ಕಡಿಮೆಯಾಗುತ್ತಿವೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗಿ ಸಂಸ್ಥೆಗಳು ದಿನೇ ದಿನೇ ತಮ್ಮ ತೆಕ್ಕೆಗೆ ತೆಗೆದುಕೊಳ್ಳುತ್ತಿವೆ. ಇಂದು ಖಾಸಗೀಕರಣ ದಿಂದಾಗಿ ಮೀಸಲಾತಿ ಭಾರತೀಯ ಸಮಾಜದಲ್ಲಿ ನಗಣ್ಯವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನೂ ಸಹ ಮಾರುಕಟ್ಟೆ ಶಕ್ತಿಗಳು ಇಂದು ನಿಯಂತ್ರಿಸುತ್ತಿವೆ.

ಮಾಧ್ಯಮಗಳೂ ಮಾರುಕಟ್ಟೆ ಶಕ್ತಿಗಳ ಮಾಲೀಕತ್ವಕ್ಕೆ ಒಳಪಟ್ಟಿವೆ. ಸಾಮಾಜಿಕ ನ್ಯಾಯವಿತರಣೆ ಜಾಗತೀಕರಣ ಯುಗದಲ್ಲಿ ಸಾಧ್ಯವಿಲ್ಲವಾಗಿದೆ. ದಲಿತರು ಮತ್ತಿತರ ಶೋಷಿತ ಜನಾಂಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಜಾಗರೂಕತೆಯಿಂದ ವೃದ್ಧಿಸಗೊಳಿಸಬೇಕೆಂಬ ಸಂವಿಧಾನಾತ್ಮಕ ಆಶಯ ನಗಣ್ಯವಾಗಿದೆ. ದಲಿತರು ಇಂದು ಬದುಕುವ ಮೂಲಭೂತ ಹಕ್ಕುಗಳನ್ನು ಕಳೆದುಕೊಂಡು ಅತಂತ್ರರಾಗಿದ್ದಾರೆ. ಬೆರಳೆಣಿಕೆಯಷ್ಟು ಮಂದಿ ದಲಿತರು ಇಂದು ಮುಖ್ಯವಾಹಿನಿಯಲ್ಲಿ ಸಕ್ರಿಯವಾಗಿ ಬೆರೆತು ಅವಕಾಶಗಳನ್ನು ಪಡೆಯುತ್ತಿದ್ದಾರೆ. ಅಸಂಖ್ಯಾತ ದಲಿತರ ಮಾರಣಹೋಮ ಜಾಗತೀಕರಣ ಯುಗದಲ್ಲಿ ಜರುಗುತ್ತಿದೆ.

ಅಮಾರ್ತ್ಯ ಸೇನ್ ಮೊದಲಾದ ಅರ್ಥಶಾಸ್ತ್ರಜ್ಞರು ಜಾಗತೀಕರಣ ಯುಗದಲ್ಲಿ ಶ್ರೀಮಂತರು ಮತ್ತು ಬಡವರ ನಡುವಿನ ಕಂದಕ ದಿನೇ ದಿನೇ ಹೆಚ್ಚಾಗುತ್ತಿರುವುದನ್ನು ಆತಂಕದಿಂದ ಗಮನಿಸಿದ್ದಾರೆ. ಇಂದು ದಲಿತರ ಮೇಲಿನ ದೌರ್ಜನ್ಯಗಳು ಬದುಕಿನ ಎಲ್ಲ ಕ್ಷೇತ್ರಗಳಲ್ಲಿಯೂ ಅವ್ಯಾಹತವಾಗಿ ಜರುಗುತ್ತಿವೆ. ದಲಿತರ ಬಗೆಗಿನ ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿಗಳ ದೃಷ್ಟಿಕೋನದಲ್ಲಿ ಒಳ್ಳೆಯ ಬದಲಾವಣೆ ಕಂಡುಬಂದಿಲ್ಲ. ಮೂಢನಂಬಿಕೆಗಳನ್ನು ಮಾಧ್ಯಮಗಳ ಮೂಲಕ ವೈಭವೀಕರಿಸಿ ಮೌಢ್ಯ ಮತ್ತು ಗುಲಾಮಗಿರಿಯೆಡೆಗೆ ದಲಿತರನ್ನು ದಬ್ಬುವ ಕೆಲಸವನ್ನು ಪಟ್ಟಭದ್ರ ಹಿತಾಸಕ್ತಿಗಳು ಇಂದು ಮಾಡುತ್ತಿವೆ.


ಅಂಬೇಡ್ಕರ್ ಹೇಳಿದಂತೆ ವೈಚಾರಿಕತೆ ಮತ್ತು ವೈಜ್ಞಾನಿಕತೆಗಳ ಆಧಾರದ ಮೇಲೆ ದಲಿತರು ತಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳದಿದ್ದಲ್ಲಿ ಅವರಿಗೆ ಉಳಿಗಾಲವಿಲ್ಲ. ದಲಿತರ ಸರ್ವತೋಮುಖ ಅಭಿವೃದ್ಧಿಗೆ ಮೂಲಭೂತವಾಗಿ ಜಾತಿಪದ್ಧತಿ ಬಹುದೊಡ್ಡ ಅಡ್ಡಗಲ್ಲಾಗಿದೆ. ಅಂಬೇಡ್ಕರ್ ಜಾತಿ ಸಮಸ್ಯೆಯ ಮೂಲಕ್ಕೆ ಹೋಗಿ ವರ್ಣಾಶ್ರಮ ಧರ್ಮವನ್ನು ಉಗ್ರವಾಗಿ ಖಂಡಿಸಿದರು. ಜಾತಿವಿನಾಶವಾಗದ ಹೊರತು ಭಾರತ ಮತ್ತೊಮ್ಮೆ ಪ್ರಬುದ್ಧ ಭಾರತವಾಗಲಾರದು ಎಂಬ ಅಂಬೇಡ್ಕರ್ ನುಡಿಯನ್ನು ಭಾರತದಲ್ಲಿ ಎಲ್ಲರೂ ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಅಸ್ಪೃಶ್ಯತೆಯೆಂಬ ಕ್ಯಾನ್ಸರ್ ಕೇವಲ ದಲಿತರನ್ನಷ್ಟೇ ನಾಶಮಾಡದೇ ಇಡೀ ದೇಶವನ್ನೇ ಸರ್ವನಾಶಮಾಡಬಲ್ಲ ಸಾಮಾಜಿಕ ಕೆಡುಕಾಗಿದೆ. ದಲಿತರು ಬೌದ್ಧ ಧರ್ಮವನ್ನು ಅನುಸರಿಸುವುದರಿಂದ ಅಸ್ಪೃಶ್ಯತೆಯ ಕಳಂಕದಿಂದ ಶಾಶ್ವತವಾಗಿ ಹೊರಬರಬಹುದೆಂಬ ಅಂಬೇಡ್ಕರ್ ಸಂದೇಶವನ್ನು ದಲಿತರು ಅರ್ಥಮಾಡಿಕೊಳ್ಳಬೇಕು.

ಅಂಬೇಡ್ಕರ್ ಹೇಳಿದ 'ವಿದ್ಯಾವಂತರಾಗಿ, ಹಕ್ಕಿಗೆ ಹೋರಾಡಿ ಮತ್ತು ಸಂಘಟಿತರಾಗಿ ಅಭಿವೃದ್ಧಿ ಹೊಂದಿ' ಎಂಬ ಮಾತುಗಳು ಸಾರ್ವಕಾಲಿಕ ಪ್ರಸ್ತುತತೆ ಹೊಂದಿವೆ. ಸ್ವಪ್ರಯತ್ನದಿಂದ ದಲಿತರು ಅಭಿವೃದ್ಧಿ ಹೊಂದಬೇಕೆಂಬ ಅಂಬೇಡ್ಕರ್ ಹಿತನುಡಿಯನ್ನು ದಲಿತರು ಅರ್ಥಮಾಡಿಕೊಳ್ಳಬೇಕು. ಸ್ವಾಭಿಮಾನ ಮತ್ತು ಕಿಚ್ಚಿನಿಂದ ತುಂಬಿದ ಅಂಬೇಡ್ಕರ್ ಅವರ ಉದಾಹರಣೆಯನ್ನು ಅನುಸರಿಸಿ ಕೆಲವು ಜನರು ಜೀವನದಲ್ಲಿ ಮುಂದೆ ಬಂದಿದ್ದಾರೆಂದು ಎಂ.ಸಿ.ಮಥಾಯ್ ನುಡಿದಿದ್ದಾರೆ. ಆದರೆ ಬಹಳಷ್ಟು ಮಂದಿ ಬಹುಜನ ಬಂಧುಗಳು ಆತ್ಮಗೌರವವನ್ನು ವೃದ್ಧಿಸಿಕೊಳ್ಳದೇ ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆಗಳಾಗಿ ಬದುಕುತ್ತಿರುವುದು ಅಂಬೇಡ್ಕರ್ ಹೋರಾಟಕ್ಕೆ ಬಗೆದ ಬಹುದೊಡ್ಡ ದ್ರೋಹವಾಗಿದೆ. ಮೇಲ್ವರ್ಗದ ಕುತಂತ್ರಕ್ಕೆ ದಲಿತರು ಬಲಿಪಶುಗಳಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮೇಲ್ಜಾತಿಯವರು ನಿಮ್ಮ ಮೇಲೆ ಅಧಿಕಾರ ನಡೆಸಲು ಎಂದಿಗೂ ನೀವು ಅವರನ್ನು ಬಿಡಬಾರದು. ಹಾಗೇ ನಿಮ್ಮನ್ನು ನೀವೇ ಆಳಿಕೊಂಡು ಬರುವುದು ಉತ್ತಮ ಹಾದಿ. ನಿಮ್ಮನ್ನು ಬಿಟ್ಟು ಬೇರೆ ಯಾರ ಮೇಲೂ ಪೂರ್ಣ ಅವಲಂಬನೆ ಬೇಡ ಡಬ್ಲ್ಯೂಡಬ್ಲ್ಯೂಡಾಯರ್ ಮಾತುಗಳು ಔಚಿತ್ಯಪೂರ್ಣವಾಗಿವೆ (ಸೋಸಲೆ, 2012).

ದಲಿತರನ್ನು ದೇಶದ ಬೇರೆ ಬೇರೆ ಕಡೆ ನಾನಾ ಹೆಸರುಗಳಲ್ಲಿ ಕರೆಯುತ್ತಾರೆ. ಇಂದು ಪಟ್ಟಭದ್ರ ಹಿತಾಸಕ್ತಿಗಳು ದಲಿತರನ್ನು ಒಟ್ಟಿಗೆ ಸೇರಲು ಬಿಡುತ್ತಿಲ್ಲ. ಉಪಜಾತಿಗಳನ್ನು ಓಲೈಸುವ ಮತ್ತು ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿಕಟ್ಟಿ ಇಡೀ ದಲಿತ ಸಮಾಜವನ್ನು ನಿಷ್ಕ್ರಿಯಗೊಳಿಸುವ ತಂತ್ರವನ್ನು ವೈದಿಕಶಾಹಿ ರೂಪಿಸಿದೆ. ಅಸ್ಪೃಶ್ಯರಿಗೆ ಮಾತ್ರ ಸಂವಿಧಾನಬದ್ಧ ಮೀಸಲಾತಿ ಸೌಲಭ್ಯ ಸಿಗಬೇಕು ಮತ್ತು ಈಗಾಗಲೇ ಅಸ್ಪೃಶ್ಯರಲ್ಲದ ಬಹುಸಂಖ್ಯಾತರು ಪರಿಶಿಷ್ಟ ಜಾತಿ ಪಟ್ಟಿಯಡಿ ಸೇರಿ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮೀಸಲಾತಿ ಸೌಲಭ್ಯವನ್ನು ಲಪಟಾಯಿಸುತ್ತಿದ್ದಾರೆ. ಇಂತಹ ಸ್ಪೃಶ್ಯ ದಲಿತರನ್ನು ಪರಿಶಿಷ್ಟ ಜಾತಿ ಪಟ್ಟಿಯಿಂದ ಕಿತ್ತು ಹಾಕಿ ಅಸ್ಪೃಶ್ಯರ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಅಸ್ಪೃಶ್ಯರು ಒಂದಾಗಿ ಹೋರಾಟ ಮಾಡಬೇಕು. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ದಲಿತ ಹಣೆಪಟ್ಟಿ ಹೊಂದಿದ ಸ್ಪೃಶ್ಯ ದಲಿತರಿಗೆ ಹಿಂದುಳಿದ ವರ್ಗಗಳ ಕೋಟಾಡಡಿಯಲ್ಲಿ ಮೀಸಲು ಸೌಲಭ್ಯವನ್ನು ಕಲ್ಪಿಸಬೇಕು. ಈ ನಿಟ್ಟಿನಲ್ಲಿ ಹೊಸ ರಾಷ್ಟ್ರೀಯ ಜನಗಣತಿ, ಸಂವಿಧಾನ ತಿದ್ದುಪಡಿ ಮತ್ತು ಮೀಸಲು ನೀತಿಗಾಗಿ ಅಸ್ಪೃಶ್ಯ ದಲಿತರು ರಾಷ್ಟ್ರವ್ಯಾಪಿ ಆಂದೋಲನವನ್ನು ರೂಪಿಸಬೇಕು.

ದಲಿತರು ಒಟ್ಟಾಗಿ ಬುದ್ಧನೆಡೆಗೆ ಸಾಗುವುದರಿಂದ ಈ ದೇಶದಲ್ಲಿ ಎಲ್ಲ ಸಂಕೋಲೆಗಳಿಂದ ಬಿಡುಗಡೆ ಹೊಂದಿ ಸಾಮಾಜಿಕ ಐಕ್ಯತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಬುದ್ಧನು ಪ್ರೋತ್ಸಾಹಿಸಿದ ಅಂತರ್-ಧರ್ಮೀಯ ವಿವಾಹ, ಬಸವಣ್ಣ ಪ್ರೋತ್ಸಾಹಿಸಿದ ಅಂತರ್-ಜಾತಿಯ ವಿವಾಹ ಮತ್ತು ಪ್ರಗತಿಪರ ಚಳವಳಿಗಾರರು ಎತ್ತಿ ಹಿಡಿದ ಜಾತಿವಿನಾಶ ಕಾರ್ಯಕ್ರಮಗಳಿಂದ ಭಾರತದಲ್ಲಿ ಜಾತಿಪದ್ಧತಿ ಪ್ರಜಾಸತ್ತಾತ್ಮಕವಾಗಿ ನಾಶಹೊಂದುತ್ತದೆ. ಪೆರಿಯಾರ್ ತಮಿಳುನಾಡಿನಲ್ಲಿ ಜಾರಿಗೆ ತಂದ ಜಾತಿವಿನಾಶ ಕಾರ್ಯಕ್ರಮ ಇಡೀ ದೇಶದಲ್ಲಿ ಅನುಷ್ಠಾನಗೊಳ್ಳಬೇಕು. ನಾರಾಯಣ ಗುರು ಬೋಧಿಸಿದ ಸಮಸ್ತ ಶೋಷಿತರೆಲ್ಲಾ ಪ್ರಕೃತಿಯ ಮಕ್ಕಳು ಮತ್ತು ಸಾಮಾಜಿಕ ನ್ಯಾಯ ವಿತರಣೆ ಎಲ್ಲರಿಗೂ ಲಭಿಸಬೇಕೆಂಬ ವಿಚಾರ ಆಚಾರವಾಗಿ ರೂಪಾಂತರಗೊಳ್ಳಬೇಕು. ಜಾತಿಪದ್ಧತಿ ಮತ್ತು ಆರ್ಥಿಕ ವ್ಯವಸ್ಥೆ ನಮ್ಮ ದೇಶದಲ್ಲಿ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಭಾರತೀಯ ಸಂದರ್ಭದಲ್ಲಿ ಸಾಮಾಜಿಕ ಸುಧಾರಣೆಯಾಗದ ಹೊರತು ಆರ್ಥಿಕವಾಗಿ ದಲಿತರು ಸಬಲರಾಗಲು ಸಾಧ್ಯವಿಲ್ಲ.

ದಲಿತ ಯುವಕರು ಮತ್ತು ಯುವತಿಯರು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ನೀಡಬೇಕು. ವಿದ್ಯಾರ್ಥಿ ದೆಸೆಯಲ್ಲಿ ಯುವಸಮುದಾಯ ರಾಜಕೀಯ ಪಕ್ಷಗಳ ದಾಳಗಳಾಗಿ ತಮ್ಮ ಶೈಕ್ಷಣಿಕ ಪ್ರಗತಿಯಿಂದ ವಂಚಿತರಾಗಬಾರದು. ಅಂಬೇಡ್ಕರ್ ದಲಿತರು ಮತ್ತಿತರ ಶೋಷಿತ ಸಮುದಾಯಗಳನ್ನು ಸಾವಿರಾರು ವರ್ಷಗಳ ಸಂಕೋಲೆಗಳು ಮತ್ತು ಸಂಕೀರ್ಣತೆಗಳಿಂದ ಪಾರುಮಾಡಲು ಅತ್ಯಂತ ಉನ್ನತ ಶೈಕ್ಷಣಿಕ ಅರ್ಹತೆಗಳನ್ನು ಪಡೆದು ವಿಶ್ವಶ್ರೇಷ್ಠ ಸಂವಿಧಾನವನ್ನು ರೂಪಿಸಿ ಸಮಸ್ತ ಶೋಷಿತರ ಸಬಲೀಕರಣದ ರೂವಾರಿಯಾದರು. ದಲಿತ ಯುವ ಸಮುದಾಯ ಅಂಬೇಡ್ಕರ್ ನೀಡಿದ ಹಾಗೆ ವಿದ್ವತ್ತು ಸಂಪಾದನೆಗೆ ಮೊದಲನೆಯ ಆದ್ಯತೆ ನೀಡಬೇಕು. ಜ್ಞಾನಿಗಳಾಗಿ ದಲಿತ ಯುವಸಮುದಾಯ ರೂಪುಗೊಂಡಾಗ ಅಂಬೇಡ್ಕರ್ ಮುನ್ನಡೆಸಿದ ಸಾಮಾಜಿಕ ಪರಿವರ್ತನೆಯ ರಥವನ್ನು ದಿಟ್ಟತನದಿಂದ ಮುಂದೆ ಕೊಂಡೊಯ್ಯಲು ಸಾಧ್ಯವಾಗುತ್ತದೆ. ವಿದ್ಯಾವಂತ ದಲಿತರು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿ ಸಮರ್ಥ ಚುನಾಯಿತ ಪ್ರತಿನಿಧಿಗಳು ಮತ್ತು ಆಡಳಿತಗಾರರಾಗಿ ಸಂವಿಧಾನದ ವಿಧಿ-ವಿಧಾನಗಳನ್ನು ಆಚರಣೆಗೆ ತಂದು ಭಾರತವನ್ನು ಒಂದು ಸುಖೀ ರಾಜ್ಯವನ್ನಾಗಿ ರೂಪಿಸಲು ಸಾಧ್ಯವಾಗುತ್ತದೆ.



ಅಂಬೇಡ್ಕರ್ ನಡೆಸಿದ ದಿಟ್ಟ ಹೋರಾಟ... ದಲಿತರಲ್ಲಿ ಕೆಲವರಾದರೂ ಸರ್ಕಾರಿ ಸಂಸ್ಥೆಗಳ... ಉದ್ಯೋಗಾವಕಾಶಗಳನ್ನು ಪಡೆಯಲು ಸಾಧ್ಯ... ಬಹಳಷ್ಟು ಮಂದಿ ನೌಕರಿಯುಳ್ಳ ದಲಿತರು ನವಬ್ರಾಹ್ಮಣರಾಗಿ ಅಂಬೇಡ್ಕರ್ ವಾದಕ್ಕೆ ತಿಲಾ... ನೀಡಿರುವುದು ದುರದೃಷ್ಟಕರ ಸಂಗತಿ. ಇವರು... ಮೇಲ್ವರ್ಗ ಮತ್ತು ಮೇಲ್ಜಾತಿಯವರನ್ನು ಮೆಚ್ಚಿಸುವುದಕ್ಕೋಸ್ಕರ ಅನರ್ಥಕಾರಿ ಸಂಪ್ರದಾಯಗಳನ್ನು ಪಾಲಿಸಿ ಅಂಬೇಡ್ಕರ್ ಪರಿವರ್ತನೆಯ ರಥವನ್ನು ಹಿಂದೆ ಕೊಂಡೊಯ್ಯುತ್ತಿದ್ದಾರೆ. ತಮ್ಮ ಹಿಂದಿನ ದಿನಗ... ಮರೆತು ಕ್ಷಣಿಕ ಸುಖ ಸಂಪತ್ತಿಗಾಗಿ ಮಾರು... ತಮ್ಮ ಸಾಮಾಜಿಕ ಹೊಣೆಗಾರಿಕೆಯಿಂದ ದಲಿ... ನೌಕರರು ವಿಮುಖರಾಗಿದ್ದಾರೆ. ಇವರು ತಮ್ಮ... ಹಿಂದುಳಿದ ದಲಿತ ಸಮುದಾಯಕ್ಕೆ ಶಿಕ್ಷಣ, ಉದ್ಯೋಗ, ಅಧಿಕಾರ ಮತ್ತು ಅವಕಾಶಗಳನ್ನು ದೊರಕಿಸಿಕೊಡುವ ಪರಿವರ್ತನೆಯ ಹರಿಕಾರರಾಗಬೇಕೆಂಬ ಅಂಬೇಡ್ಕರ್ ಕನಸು ನನಸಾಗಬೇಕು. ಈ ಮಂದಿ ನವ ಬ್ರಾಹ್ಮಣರಾಗುವುದರ ಬದಲಾಗಿ ನವಬೌದ್ಧರಾ... ಪರಿವರ್ತನೆಯೆಡೆಗೆ ಇಡೀ ಸಮುದಾಯವನ್ನು ಕೊಂಡೊಯ್ಯುವ ಕೆಲಸವನ್ನು ಮಾಡಬೇಕು. ಆ... ಮಾತ್ರ ದಲಿತ ವಿದ್ಯಾವಂತರು ಮತ್ತು ನೌಕರರು... ಬಾಬಾ ಸಾಹೇಬರ ಋಣವನ್ನು ತೀರಿಸಿದಂತಾ...

ಅಂಬೇಡ್ಕರ್ ದೊರಕಿಸಿಕೊಟ್ಟ ರಾಜಕೀಯ... ಮೀಸಲಾತಿ ಇಂದು ಕೆಲವೇ ಮಂದಿ ಬಲಾಢ್ಯ... ದಲಿತರ ಪಾಲಾಗಿದೆ. ಪೂನಾ ಒಪ್ಪಂದದಿಂದಾಗಿ... ದಲಿತ ಪ್ರತಿನಿಧಿಗಳು ಪಂಚಾಯ್ತಿ, ಶಾಸನಸಭೆ ಸಂಸತ್ತುಗಳಿಗೆ ಆಯ್ಕೆಯಾಗುವುದರ ಬದಲಿಗೆ ನವಪೀಳಿಗೆಯ ದಲಿತ ಚಮಚಾಗಳು ರಾಜಕೀ... ಅಧಿಕಾರವನ್ನು ಪಡೆದು ದಲಿತ ಸಮುದಾಯದ... ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದಾರೆ... ಪೂನಾ ಒಪ್ಪಂದದಿಂದಾಗಿ ದಲಿತರ ನೈಜ ರಾಜ... ನಾಯಕತ್ವಕ್ಕೆ ಬಹುದೊಡ್ಡ ಕೊಡಲಿಪೆಟ್ಟು ಬಿದ್ದಿ... ಕೆಲವೇ ಮಂದಿ ಬೆರಳೆಣಿಕೆಯಷ್ಟು ಅಂಬೇಡ್ಕರ... ವಾದಿಗಳು ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿ... ಮಾಡಿ ದಲಿತ ಸಮುದಾಯದ ಹಿತವನ್ನು ರಕ್ಷಿಸುತ್ತಿದ್ದಾರೆ. ಆದರೆ ಬಹುಸಂಖ್ಯಾತ ದಲಿತ ಚುನಾಯಿತ ಪ್ರತಿನಿಧಿಗಳು ತಮ್ಮ ಮುಂದಿನ ಜನಾಂಗದ ಅಭ್ಯುದಯವನ್ನು ಮರೆತು ತಮ್ಮ ಮುಂದಿನ ಚುನಾವಣೆಯನ್ನಷ್ಟೇ ಗಮನದಲ್ಲಿಟ್ಟು... ಕೊಂಡು ಮೇಲ್ವರ್ಗದ ಗುಲಾಮರಾಗಿ ಸಾಮಾ... ನ್ಯಾಯವಿತರಣೆಗೆ ಬಹುದೊಡ್ಡ ಅಡ್ಡಗಲ್ಲಾಗಿದ್ದಾ...

ಪೂನಾ ಒಪ್ಪಂದವನ್ನು ರದ್ದುಗೊಳಿಸಿ ಮೀ... ಕ್ಷೇತ್ರಗಳಲ್ಲಿ ಸವರ್ಣೀಯರ ಹಂಗಿನಿಂದ ಗೆದ್ದು ಬರುವುದನ್ನು ತಡೆಗಟ್ಟಿ ಸಾಮಾಜಿಕ ನ್ಯಾಯವ... ಕಾಪಾಡುವ ನೈಜ ನಾಯಕರು ಚುನಾಯಿತರಾ... ಭಾರತದ ದಲಿತ ಸಮುದಾಯವನ್ನು ಸಂಕೋಲೆ... ಮತ್ತು ಸಂಕಷ್ಟಗಳಿಂದ ಪಾರುಮಾಡುವಂತಾಗ... ಈ ಹಿನ್ನೆಲೆಯಲ್ಲಿ ದೇಶದ ಸಮಸ್ತ ದಲಿತರು ... ಒಪ್ಪಂದವನ್ನು ರದ್ದುಗೊಳಿಸಿ ಮೀಸಲು ಕ್ಷೇತ್ರಗಳ... ಪ್ರತ್ಯೇಕ ಮತದಾನ ಪದ್ಧತಿಯನ್ನು ಜಾರಿಗೆ ತರು... ನಿಟ್ಟಿನಲ್ಲಿ ರಾಷ್ಟ್ರವ್ಯಾಪಿ ಆಂದೋಲನವನ್ನು ನಡೆಸ...

ದಲಿತರಿಗೆ ಮಠಗಳು ಬೇಡವೇ ಬೇಡ. ದ... ಢೋಂಗಿ ಮಠಾಧೀಶರ ಸಹವಾಸ ಸಾಕು. ಬು... ನಮ್ಮ ಆಧ್ಯಾತ್ಮಿಕ ಶಕ್ತಿ. ಬಾಬಾಸಾಹೇಬರೇ ನಮ್ಮ... ಸಬಲೀಕರಣದ ಹರಿಕಾರ. ಭಾರತೀಯ ಸಂವಿಧಾ... ನಮ್ಮ ಶ್ರೇಷ್ಠ ಧಾರ್ಮಿಕ ಗ್ರಂಥ. ದಲಿತರು ದೇವಾಲಯಗಳಿಗೆ ಹೋಗಿ ಇಲ್ಲದ ದೇವರುಗಳ... ಪೂಜಿಸಿ ಪೂಜಾರಿಗಳಿಂದ ವಂಚನೆಗೊಳಗಾಗಬ... ದಲಿತರಿಗೆ ದೇವರ ಸಹವಾಸ ಸಾಕು. ಕಾಯಕವ... ಕೈಲಾಸವೆಂಬ ಬಸವಣ್ಣನ ನುಡಿಯಿಂದ ದಲಿತರು... ಪ್ರಭಾವಿತರಾಗಿ ಸ್ವಂತ ಶ್ರಮ ಮತ್ತು ಹೋರಾಟ... ಸಬಲೀಕರಣ ಹೊಂದಬೇಕು. ಬುದ್ಧನ ಜ್ಞಾನಯೋ... ಬಸವನ ಕರ್ಮಯೋಗ ಮತ್ತು ಅಂಬೇಡ್ಕರ್ ಹೋರಾಟ ಯೋಗಗಳಿಂದ ದಲಿತ ಸಮುದಾಯ... 21ನೇ ಶತಮಾನದಲ್ಲಿ ಸರ್ವರೀತಿಯಲ್ಲಿಯೂ ... ಹೊಂದಲು ಸಾಧ್ಯವಾಗುತ್ತದೆ. ಬುದ್ಧ ಬಸವ ... ಅಂಬೇಡ್ಕರ್ ನಿಜವಾಗಿಯೂ ದಲಿತರ ತ್ರಿಮೂರ್ತಿ... ಮತ್ತು ಸಬಲೀಕರಣದ ರೂವಾರಿಗಳು. ದಲಿತರು ಅಂಬೇಡ್ಕರ್ ಬದುಕು, ಬರಹ ಮತ್ತು ಹೋರಾಟಗಳತ್ತ ಮುಖಮಾಡಿ ಅಂಬೇಡ್ಕರ್ ಸಂದೇಶವನ್ನು ಗಂಭೀರವಾಗಿ ಸ್ವೀಕರಿಸಿ ಸಬಲೀಕರಣದತ್ತ ಮುನ್ನಡೆಯುವುದು ಇಂದಿನ ... ಜಾಗತೀಕರಣ ಯುಗದಲ್ಲಿ ಅತ್ಯವಶ್ಯಕ.

ದಲಿತರು 21ನೇ ಶತಮಾನದಲ್ಲಿ ಹಲವಾರು ಸಂಕೀರ್ಣತೆಗಳು ಮತ್ತು ಸವಾಲುಗಳನ್ನು

▶▶

ಬಾಬಾಸಾಹೇಬಾ, ವಸ್ಟೊಂದು ಲೋಕಾ ನಮ್ಗೆ ಬೇಕೇ ಬೇಕು..



ರ್ಲಾಂಜಿ
ದ ರಗತ ಬೆಳದಿಂಗ್ಳು ಸುರಿತು
ಣ್ಣು ಮಾಂಸದ ಮುದ್ದೆ ಹಂಗಾತು
ರಾತ್ರಿ ಆಳೆತ್ರದ ನೀಲಿ ಮೂರ್ತಿ ಕಿರುಚಿ
ರವ ಅಂಬದು ಊ..ಂತ ಗೋಳಿಡ್ತು.

ರಕ್ತ ಇಲ್ಲದ್ ಈ ದೇಸ್ದಾಗೆ
ಸುಲಭ ದಲಿತ್ರ ಕೊಚ್ಚಿ ಕೊಂದ್ ಬಿಸಾಡದು?
ಕಡಿಯೊ ಕೈಗಾದ್ರು ರವಷ್ಟು
ಕರುಣೆ ಅಂತ ಇರಬೌದು;
ಕಡಿಯೊ ಕತ್ತಿಗೂ ಸೈತ
ಕೆ, ಭಯ ಆಗಬೌದು.

ಯ್ಯೊ ಕೈಯಿ
ಬೇಡ್ಕಳೊ ಕೈಯಿ
ೋರ್ಗೆ ಸಾಯ ಮಾಡೊ ಕೈಗುಳೆಲ್ಲ ಇದ್ವಲ
ಡಿತಿದ್ವು ಅವೆಲ್ಲ ಆವಾಗ ಅಲ್ಲಿ?

ಯವ್ವೋ, ಯಕ್ಕೋ
ಬೇರೆ ಎಂಗಸ್ರ ಕೊಂದು ಕೊಚ್ಚಿ
ಸಾಯೊತಂಕ ಜಪ್ಪೊ ಹಂಗೆ
ಕ್ರೂರಪ್ರಾಣಿಗಳಂತ ನಿಮ್ ಗಣಸ್ರ
ಅದೆಂಗ್ ಎತ್ತಿ ಕಟ್ಟಿ ಸುಮ್ನಿದ್ರವ್ವ?

ಎದೆ ಮೇಲ್ನ ಸೆರಗು ರವಷ್ಟು ಕೆಳಗ್ ಸರುದ್ರೆ ಸಾಕು
ಶೀಲನೆ ಹಾಳಾಯ್ತು ಅಂತ ಗಾಬ್ರಿಯಾಯ್ತಿರಿ
ಅಂತೋರು, ಅದೆಂಗೆ ನಿಮ್ಮಂತೋಳೆ ಒಬ್ಬ
ಮೊಲೆ ಕತ್ತರ್ಸಿ ಕಿತ್ ಬಿಸಾಡಿ
ತಾಯಿ ಮಗಳ್ನ ಎದ್ರಾಎದ್ರೆ ರೇಪ್ ಮಾಡ್ರಿ ಅಂತ

ನಿಮ್ ಗಣಸ್ರಿಗೆ ಚುಚ್ಚಿ ಕೊಟ್ರಿವ?
ಇಂಥಾ ಭಯಂಕರವಾದ್ದು ನಿಮ್ ಕಣ್ಣೆದ್ರೆ ನಡಿತಿದ್ರು,
ಅದೆಂಗ್ ಅದಕ್ ಸಾಕ್ಷಿಯಾಗಿ ಸುಮ್ನಿದ್ರಿ ಯವ್ವ?

ಯಮ್ಮೋ, ಭಾರತ್ ಮಾತ
ನಾವು ಸಂಕ್ಟ ಬಟ್ಟು ಅಳ್ತಿದಿವಿ ಕಮ್ಮೊ
ಯೋ ಗಾಂಧಿ
ನಾವ್ ಕಷ್ಟದಾಗಿದಿವಿ ಕಯ್ಯೊ
ಓ ಬಾಬಾಸಾಹೇಬಾ
ಸಿಟ್ನಿಂದ ನಾವ್ ಕುದಿತಿದಿವಿ ಕನಪ್ಪೊ,

ತಲೆಯೆತ್ತಿ ಬದ್ಕಕ್ಕೆ ನಮ್ಗೆ ವಸ್ಟೊಂದು ಲೋಕಾನೆ ಬೇಕು
ಕೊನೆಪಕ್ಸ ನಂ ಯೋನಿ ಮೊಲೆನಾದ್ರು ಸುರಕ್ಷಿತವಾಗಿರೋವಂತ
ವಸ್ಟೊಂದು ಲೋಕಾ ನಮ್ಗೆ ಬೇಕೇ ಬೇಕು..

ತೆಲುಗು ಮೂಲ: ಯೆಂಡ್ಲೂರಿ ಸುಧಾಕರ
ಇಂಗ್ಲಿಷ್‌ಗೆ: ಕೆ. ಪುರುಷೋತ್ತಮ್
ಕನ್ನಡಕ್ಕೆ: ಎಚ್. ಎಸ್. ಅನುಪಮಾ

◀◀

ಸುತ್ತಿದ್ದಾರೆ. ಭಾರತೀಯ ಸಂದರ್ಭದಲ್ಲಿ ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿ ಳಿಂದಾಗಿ ರಾಷ್ಟ್ರೀಯ ಮುಖ್ಯವಾಹಿನಿಯಿಂದ ೂಡಲ್ಪಟ್ಟಿದ್ದಾರೆ. ಇಂದು ದಲಿತರ ಮೇಲೆ ್ಯಗಳು ಭಾರತದ ಎಲ್ಲೆಡೆ ಅವ್ಯಾಹತವಾಗಿ ್ತಿವೆ. ದಲಿತರ ಮೂಲಭೂತ ಹಕ್ಕುಗಳು ಕರಣಯುಗದಲ್ಲಿ ನಗಣ್ಯವಾಗುತ್ತಿದೆ. ಕರಣ ಯುಗ "ಅಭಿವೃದ್ಧಿ ಹೊಂದು, ಇಲ್ಲವೇ ಗು" ಎಂಬ ಸಂದೇಶ ನೀಡಿದೆ. ಯಾವುದೇ ಾಯ ನಾಶವಾಗಲು ಆಸೆಪಡುವುದಿಲ್ಲ, ಆದರೆ ಯ ದಲಿತ ಸಮುದಾಯವನ್ನು ಪಟ್ಟಭದ್ರ ್ತಿಗಳು ಪ್ರಜ್ಞಾಪೂರ್ವಕವಾಗಿ ವಿನಾಶದೆಡೆಗೆ ೊಯ್ಯುತ್ತಿವೆ. ದಲಿತರಿಗೆ ಮೂಲಭೂತ ು, ಅವಕಾಶಗಳು, ಸವಲತ್ತುಗಳು ಾದವುಗಳನ್ನು ಜಾಗತೀಕರಣ ಯುಗದಲ್ಲಿ ಿ ನಿರಾಕರಿಸಲಾಗುತ್ತಿದೆ.

ಸಗೀಕರಣ ಪ್ರಕ್ರಿಯೆಯಿಂದಾಗಿ ದಲಿತರ ಾತಿ ಸೌಲಭ್ಯ ಕೊನೆಗೊಳ್ಳುತ್ತಿದೆ. ಉದಾರೀಕರಣ ಪ್ರಕ್ರಿಯೆಯಿಂದಾಗಿ ದಲಿತರ ಉದಾರೀಕೃತ ಶೋಷಣೆ ಜರುಗುತ್ತಿದೆ. ವಾಣಿಜ್ಯೀಕರಣ ಪ್ರಕ್ರಿಯೆಯಿಂದಾಗಿ ಮಾನವೀಯ ಮೌಲ್ಯಗಳು ನಾಶಗೊಂಡು ದಲಿತರ ಮಾನವ ಹಕ್ಕುಗಳ ಉಲ್ಲಂಘನೆ ದೇಶದೆಲ್ಲೆಡೆ ಜರುಗುತ್ತಿದೆ. ಸಂಸತ್ತು, ಶಾಸನಸಭೆ, ನಗರಸಭೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿರುವ ಬಹುತೇಕ ದಲಿತ ಚುನಾಯಿತ ಪ್ರತಿನಿಧಿಗಳು ದಲಿತರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ಮಾಡುವ ಸ್ಥಿತಿಯಲ್ಲಿಲ್ಲ, ಏಕೆಂದರೆ ಅವರೆಲ್ಲ ಸ್ಥಾಪಿತ ಹಿತಾಸಕ್ತಿಗಳ ಕೈಗೊಂಬೆಗಳಾಗಿದ್ದಾರೆ. ದಲಿತ ಬುದ್ಧಿ ಜೀವಿಗಳು ಸಾಮಾಜಿಕ-ಆರ್ಥಿಕ ನೆಲೆಯಲ್ಲಿ ಗಂಭೀರವಾಗಿ ಚಿಂತಿಸದೇ ಹೋಮ-ಹವನಗಳೆಡೆ ಆಕರ್ಷಿತರಾಗಿ ಅಂಬೇಡ್ಕರ್ ವಿಚಾರಧಾರೆಗಳಿಗೆ ತಿಲಾಂಜಲಿ ನೀಡಿದ್ದಾರೆ. ಆಳುವ ವರ್ಗದ ಕೈಗೊಂಬೆಗಳಾಗಿ ರಾಜಕೀಯ ಅಧಿಕಾರ ಗಳಿಸಿ ಸಾಮಾಜಿಕ ನ್ಯಾಯ ತತ್ವಕ್ಕೆ ತಿಲಾಂಜಲಿ ನೀಡಿರುವ ದಲಿತ ಬುದ್ಧಿಜೀವಿಗಳು ಮತ್ತು ದಲಿತ ನಾಯಕರ ಸಂಖ್ಯೆ ದಿನೇದಿನೇ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆ ಯಾಗಿದೆ. 21ನೇ ಶತಮಾನದಲ್ಲಿ ದಲಿತರ ಸಬಲೀಕರಣಕ್ಕೆ ಇರುವ ಮೂರು ಪ್ರಮುಖ ಪರಿಹಾರ ಗಳೆಂದರೆ - ಬುದ್ಧಮಾರ್ಗವನ್ನು ಅನುಸರಿಸಿ ಪ್ರಬುದ್ಧ ಹಾಗೂ ಸ್ವಾಭಿಮಾನಿ ದಲಿತರಾಗಿ ಅಸ್ಪೃಶ್ಯತೆ, ಜಾತೀಯತೆ, ಕೋಮುವಾದ ಮೊದಲಾದ ಸಂಕೀರ್ಣತೆಗಳಿಂದ ಬಿಡುಗಡೆ ಹೊಂದುವುದು,

ಪೂನಾ ಒಡಂಬಡಿಕೆಯನ್ನು ರದ್ದುಗೊಳಿಸುವ ನಿಟ್ಟಿನಲ್ಲಿ ಅಂಬೇಡ್ಕರ್ ವಾದದಡಿ ರಾಷ್ಟ್ರೀಯ ಆಂದೋಲನವನ್ನು ಸಂಘಟಿಸಿ ಚುನಾಯಿತ ಸವರ್ಣೀಯ ನಿಷ್ಠ ದಲಿತ ಪ್ರತಿನಿಧಿಗಳಿಂದ ದಲಿತ ಸಮುದಾಯವನ್ನು ಪಾರುಮಾಡುವುದು; ಮತ್ತು ಖಾಸಗೀಕರಣ ಯುಗದಲ್ಲಿ ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿರುವ ದಲಿತರಿಗೆ ಖಾಸಗಿ ವಲಯದಲ್ಲಿ ಮೀಸಲಾತಿ ಸೌಲಭ್ಯಕ್ಕಾಗಿ ರಾಷ್ಟ್ರವ್ಯಾಪಿ ಹೋರಾಟವನ್ನು ನಡೆಸಿ ದಲಿತರ ಮಾನವ ಹಕ್ಕುಗಳು ಮತ್ತು ಮೂಲಭೂತ ಹಕ್ಕುಗಳನ್ನು ರಕ್ಷಿಸುವುದು. ಅಂಬೇಡ್ಕರ್‌ರವರ ವಿಚಾರಧಾರೆಯನ್ನು ದಲಿತ ಸಮುದಾಯ ಸಮಗ್ರವಾಗಿ ಅಧ್ಯಯನ ಮಾಡಿ ಹೋರಾಟ ಮಾರ್ಗ ದಿಂದಲೇ ತಮ್ಮ ಮೂಲಭೂತ ಬದುಕುವ ಹಕ್ಕನ್ನು ಗಳಿಸಿಕೊಳ್ಳಬೇಕು.

ಅಂಬೇಡ್ಕರ್ ಅವರಂತೆ ಶಕ್ತಿ ರಾಜಕಾರಣಕ್ಕೆ ತಿಲಾಂಜಲಿ ನೀಡಿ ಹೋರಾಟದ ರಾಜಕಾರಣದಲ್ಲಿ ದಲಿತ ಸಮುದಾಯ ಸಕ್ರಿಯವಾಗಿ ತೊಡಗಬೇಕು. ಜಾಗತೀಕರಣಯುಗದಲ್ಲಿ ತಮ್ಮ ಹಾಗೆಯೇ ವ್ಯವಸ್ಥೆಯ ಬಲಿಪಶುಗಳಾಗಿರುವ ಹಿಂದುಳಿದ ವರ್ಗ, ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಜೊತೆಗೂಡಿ ಪರ್ಯಾಯ ರಾಜಕೀಯ ವ್ಯವಸ್ಥೆಯನ್ನು ರೂಪಿಸುವುದರಿಂದ ದಲಿತರು ಮತ್ತಿತರ ಶೋಷಿತ ವರ್ಗಗಳ ನಾಯಕತ್ವ ಅಭಿವೃದ್ಧಿ ಮತ್ತು ಸರ್ವತೋಮುಖ ಸಬಲೀಕರಣ ಆಶಯಗಳು ಸಾಧ್ಯತೆಗಳಾಗಿ ಪರಿವರ್ತನೆಗೊಳ್ಳುತ್ತವೆ. ಇಂದು ಜಗತ್ತಿಗೆ ಬುದ್ಧ ಮತ್ತು ಅಂಬೇಡ್ಕರ್ ಚಿಂತನೆಗಳು ಅನಿವಾರ್ಯ. ಯುದ್ಧ ಮತ್ತು ವಿನಾಶದೆಡೆಗೆ ಸಾಗುತ್ತಿರುವ ವಿಶ್ವವನ್ನು ಪಾರುಮಾಡುವ ಶಕ್ತಿ ಬುದ್ಧನಿಗಲ್ಲದೆ ಬೇರೆ ಯಾರಿಗೂ ಇಲ್ಲ. ಅಂತೆಯೇ ವಿಶ್ವದೆಲ್ಲೆಡೆ ತಾಂಡವವಾಡುತ್ತಿರುವ ಅಸಮಾನತೆ ಮತ್ತು ಶೋಷಣಾ ಪ್ರವೃತ್ತಿಗಳನ್ನು ನಿವಾರಿಸಲು ಅಂಬೇಡ್ಕರ್ ಕೊಟ್ಟ 'ಅಂತ್ಯೋದಯ' ಅಭಿವೃದ್ಧಿ ಮಾರ್ಗ ಸರ್ವಶ್ರೇಷ್ಠವಾಗಿದೆ.

■ ಪ್ರೊ.ಬಿ.ಪಿ.ಮಹೇಶ ಚಂದ್ರ ಗುರು

ಭ್ರಷ್ಟಾಚಾರ ನಿರ್ಮೂಲನ: ಜನರಿಗೆ ಪಂಗನಾಮ




ಹೆಚ್ಚುಕಮ್ಮಿ ಒಂದು ಬಾಳೆಕಾಯಿ ಜನತಂತ್ರದಂತಾಗಿರುವ ನಮ್ಮ ದೇಶದಲ್ಲಿ ಒಂದು ಕಡೆ ಆ ಪಕ್ಷ ಈ ಪಕ್ಷ ಎನ್ನದೆ ಪ್ರಭಾವಶಾಲಿಗಳು ಕೆಲವರು ಇಡೀ ದೇಶವನ್ನೆ ಕೊಳ್ಳೆ ಹೊಡೆಯುತ್ತಾ ಕಾನೂನಿನ ಕುಣಿಕೆಯಿಂದ ಪಾರಾಗುತ್ತಾ ಹಲವು ತಲೆಮಾರುಗಳಿಗೆ ಸಾಕಾಗುವಷ್ಟು ಸಂಪತ್ತನ್ನು ಕೂಡಿಹಾಕುತ್ತಿದ್ದರೆ ಇನ್ನೊಂದು ಕಡೆ ಬಡವರು ಇನ್ನಷ್ಟು ದರಿದ್ರರಾಗುತ್ತಿದ್ದಾರೆ. ಇದರಿಂದ ಮತ್ತು ಇಲ್ಲಿನ ಅನಿಯಂತ್ರಿತ ಭ್ರಷ್ಟಾಚಾರದಿಂದ ಕಂಗೆಟ್ಟು ರೋಷತಪ್ತರಾಗಿರುವ ಜನಸಾಮಾನ್ಯರಿಗೆ ಅಹಿಂಸಾತ್ಮಕ ರೀತಿಯಲ್ಲಿ ವ್ಯವಸ್ಥೆಯ ಮೇಲೆ ಸೇಡು ತೀರಿಸಿಕೊಳ್ಳಲು ಇರುವ ಏಕೈಕ ಅವಕಾಶವೆಂದರೆ ಚುನಾವಣೆಗಳು. ಇದನ್ನು ಗಮನಿಸಿರುವ ರಾಜಕೀಯ ಪಕ್ಷಗಳು ಇತ್ತೀಚಿನ ಕೆಲವು ವರ್ಷಗಳಿಂದ ಭ್ರಷ್ಟಾಚಾರದ ವಿಷಯವನ್ನೆ ತಮ್ಮ ಬತ್ತಳಿಕೆಯಲ್ಲಿನ ಬ್ರಹ್ಮಾಸ್ತ್ರವಾಗಿ ಮಾಡಿಕೊಂಡಿವೆ. 2014ರ ಚುನಾವಣೆಗಳಲ್ಲಿ ಬಿಜೆಪಿ ಗಳಿಸಿದ ಅಭೂತಪೂರ್ವ ಯಶಸ್ಸಿನ ಗುಟ್ಟು ಇದೇ ಆಗಿದೆ. ಅದು ಕೈಗೊಂಡ ರಾಷ್ಟ್ರವ್ಯಾಪಿ ಪ್ರಚಾರಾಂದೋಲನದಲ್ಲಿ 'ಕಳೆದ 70 ವರ್ಷಗಳ ಕಾಲ ದೇಶವನ್ನಾಳಿದವರ ಭ್ರಷ್ಟಾಚಾರವನ್ನು' ಖಂಡಿಸಲಾಯಿತು. 'ಭ್ರಷ್ಟಾಚಾರ ದೇಶದ್ರೋಹಕ್ಕೆ ಸಮಾನ' ಎನ್ನಲಾಯಿತು. 'ನಾವು ಸ್ವಚ್ಛ ಆಡಳಿತ ನೀಡುವೆವು', 'ವಿದೇಶಗಳಲ್ಲಿರುವ ಕಪ್ಪುಹಣವನ್ನು ತಂದು ಪ್ರತಿಯೊಬ್ಬನಿಗೂ ರೂ. 15 ಲಕ್ಷ ಹಂಚುವೆವು' ಎಂದು ಪುಂಗಿ ಊದಲಾಯಿತು. ಆಡಳಿತದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ಇರಬೇಕು ಎಂಬ ದೊಡ್ಡ ದೊಡ್ಡ ಮಾತುಗಳನ್ನು ತೇಲಿಬಿಡಲಾಯಿತು. ಈಗಲೂ ಹೊರಬೀಳುತ್ತಲೆ ಇರುವ ಇಂತಹ ಬೂಟಾಟಿಕೆಯ ಘೋಷಣೆಗಳ ಇತ್ತೀಚಿನ ಸ್ಯಾಂಪಲ್‌ಗಳು ಹೀಗಿವೆ: 'ಪ್ರಾಮಾಣಿಕತೆಯ ಯುಗ ಪ್ರಾರಂಭವಾಗಿದೆ', 'ಬಡವರನ್ನು ದೋಚಿದವರು 'ಅದನ್ನೆಲ್ಲ' ಅವರಿಗೆ ಮರಳಿಸಲೇಬೇಕಾಗುತ್ತದೆ'. ಆದರೆ ಬರಬರುತ್ತಾ ಇವರ ನಡೆ, ನುಡಿಗಳ ನಡುವಣ ಅಗಾಧ ವ್ಯತ್ಯಾಸಗಳು ಒಂದೊಂದಾಗಿ ಬಯಲಾಗತೊಡಗಿವೆ.

2014ರ ನಂತರ ಭ್ರಷ್ಟಾಚಾರ ಕಡಿಮೆಯಾಗಿದೆಯೇ ಎಂದು ನೋಡಹೊರಟವರಿಗೆ ನಿರಾಶೆ ಕಾದಿದೆ. ಸರಕಾರಿ ಕಚೇರಿಗಳಿಗೆ ಎಡತಾಕುವ ಶ್ರೀಸಾಮಾನ್ಯನನ್ನು ಕೇಳಿದರೆ ಸಾಕು ಲಂಚಾವತಾರ ಯಥಾರೀತಿಯಾಗಿ ಮುಂದುವರಿದಿರುವ ಅಸಲಿಯತ್ತು ತಿಳಿಯುತ್ತದೆ. ಇನ್ನು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಕಾರ್ಪೊರೇಟು ವಲಯ ಮೊದಲಾದೆಡೆಗಳಲ್ಲಿಯೂ ಭ್ರಷ್ಟಾಚಾರ ಇಳಿಕೆಯಾಗಿರುವ ಲಕ್ಷಣಗಳು ಕಾಣಿಸುತ್ತಿಲ್ಲ. ಭ್ರಷ್ಟಾಚಾರ ಅಂದರೆ ಕೇವಲ ದುಡ್ಡಿಗೆ ಸೀಮಿತವಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಹೀಗೆ ನೋಡಿದಾಗ 2002ರ ಗುಜರಾತ್ ನರಮೇಧದ ಆರೋಪಿಗಳಿಗೆ, ನಕಲಿ ಎನ್ಕೌಂಟರ್ ಆರೋಪದಲ್ಲಿ ಜೈಲುಪಾಲಾಗಿದ್ದ ಪೊಲೀಸ್ ಅಧಿಕಾರಿಗಳಿಗೆ ಜಾಮೀನು ದೊರೆಯುವುದು ಭ್ರಷ್ಟಾಚಾರ ಅಲ್ಲವೆ? ಅವರಲ್ಲಿ ಕೆಲವರಿಗೆ ಹಳೆ ಹುದ್ದೆಗಳು ಸಿಕ್ಕರೆ ಇನ್ನಿತರರಿಗೆ ಮೇಲ್ಬಡ್ತಿ ದೊರಕುವುದು; ಸ್ವಾಮಿ ಅಸೀಮಾನಂದ, ಸಾಧ್ವಿ ಪ್ರಜ್ಞಾಸಿಂಗರು ಇದ್ದಕ್ಕಿದ್ದಂತೆ ನಿರ್ದೋಷಿಗಳೆಂದಾಗುವುದು; ಅಮಿತ್ ಶಾ ಮೇಲಿನ ಕ್ರಿಮಿನಲ್ ಪ್ರಕರಣಗಳನ್ನು ಕೈಬಿಡುವುದು ಭ್ರಷ್ಟಾಚಾರ ಅಲ್ಲವೆ?

ವಾಸ್ತವದಲ್ಲಿ ಮೋದಿ ಸರ್ಕಾರ ಜನರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದೆ. ಅದರ ಸ್ವಚ್ಛತೆಯ ಅಭಿಯಾನ ಬರೀ ಕಸಕಡ್ಡಿ ಎತ್ತುವುದಕ್ಕಷ್ಟೆ ಸೀಮಿತ ಎಂದಾಗಿದ್ದು ಒಳಗಿನ ಭ್ರಷ್ಟಾಚಾರದ ಹೊಲಸನ್ನು ಸ್ವಚ್ಛಮಾಡುವ ವಿಷಯದಲ್ಲಿ ಕಿಂಚಿತ್ತಾದರೂ ಧನಾತ್ಮಕ ಬೆಳವಣಿಗೆ ಆಗಿಲ್ಲ. ತದ್ವಿರುದ್ಧವಾಗಿ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡುವ ಕೆಲಸ ನಡೆಯುತ್ತಿರುವಂತಿದೆ. ಮೋದಿ ಸರ್ಕಾರ ಇಂದು ಭ್ರಷ್ಟ ಸರಕಾರಿ ಅಧಿಕಾರಿಗಳನ್ನು ಮತ್ತು ಆ ಮೂಲಕ ಭ್ರಷ್ಟ ರಾಜಕಾರಣಿಗಳನ್ನು ರಕ್ಷಿಸಲು ಹೊರಟಿದೆ. ಇದಕ್ಕೆ ಸಾಕ್ಷಿಯಾಗಿ 1988ರ ಭ್ರಷ್ಟಾಚಾರ ನಿಗ್ರಹ ಕಾಯ್ದೆಗೆ ತಂದಿರುವ ತಿದ್ದುಪಡಿಗಳನ್ನು ಮತ್ತು ನಗದು ವಹಿವಾಟಿಗೆ ಮಿತಿ ಹೇರಿರುವುದನ್ನು ಹೆಸರಿಸಬಹುದು. ಇದರ ಜತೆ ಆದಾಯ ತೆರಿಗೆ ಇಲಾಖೆಗೆ ನೀಡಲಾಗಿರುವಂತಹ ಅನಿಯಂತ್ರಿತ ಅಧಿಕಾರವು ಹುಟ್ಟುಹಾಕಲಿರುವ ತೆರಿಗೆ ಭಯೋತ್ಪಾದನೆಯೂ ಭ್ರಷ್ಟಾಚಾರಕ್ಕೆ ಇಂಬುಗೊಡಲಿದೆ.

ಭ್ರಷ್ಟಾಚಾರ ನಿಗ್ರಹ ಕಾಯ್ದೆ

1988ರ ಭ್ರಷ್ಟಾಚಾರ ನಿಗ್ರಹ ಕಾಯ್ದೆಗೆ ಕೆಲವೊಂದು ತಿದ್ದುಪಡಿಗಳನ್ನು ಮಾಡಲಾಗಿದ್ದು ಅದರಂತೆ ಸರಕಾರಿ ನೌಕರರ ವಿರುದ್ಧ ಕಾನೂನುಕ್ರಮ ಜರುಗಿಸುವ ಮುನ್ನ ಸರ್ಕಾರದ ಅನುಮತಿಯನ್ನು ಪಡೆದುಕೊಳ್ಳುವುದು' ಕಡ್ಡಾಯ ಎಂದಾಗಲಿದೆ. ಆದರೆ ಅಧಿಕಾರಿಗಳು ಲಂಚ ಸ್ವೀಕರಿಸುತ್ತಿರುವಾಗ ಅಥವಾ ಸ್ವೀಕರಿಸಲು ಯತ್ನಿಸುತ್ತಿರುವಾಗ ಸಿಕ್ಕಿಬಿದ್ದ ಸಂದರ್ಭಗಳಲ್ಲಿ ಇಂತಹ ಪೂರ್ವಾನುಮತಿಯ ಅಗತ್ಯ ಇರುವುದಿಲ್ಲ. ತಿದ್ದುಪಡಿಗಳನ್ನು ಮಾಡಿರುವುದರ ಹಿಂದೆ ಎರಡು ಉದ್ದೇಶಗಳಿವೆ ಎಂದು ಮೋದಿ ಸರ್ಕಾರ ಹೇಳುತ್ತಿದೆ. ಒಂದು, ಪ್ರಾಮಾಣಿಕ ಅಧಿಕಾರಿಗಳನ್ನು ರಕ್ಷಿಸುವುದು. ಎರಡು, ಅವರನ್ನು ಭಯಮುಕ್ತಗೊಳಿಸಿ, ಅವರಲ್ಲಿ ಧೈರ್ಯ ತುಂಬಿ, ಅವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಂತೆ ಮಾಡುವುದು. ಆದರೆ ಈ ವಾದದಲ್ಲಿ ಯಾವುದೆ ಹುರುಳಿಲ್ಲ.



ನಿಜವಾಗಿ ಭ್ರಷ್ಟಾಚಾರ ವಿರುದ್ಧದ ಹೋರಾಟದಲ್ಲಿ ಮೂಲ ಕಾಯ್ದೆಯೆ ಅತ್ಯುತ್ತಮ ಅಸ್ತ್ರ ಎನ್ನುವುದು ಅನುಭವದಿಂದ ಸಿದ್ಧವಾಗಿದೆ. ಇವತ್ತು ಬೋಫೋರ್ಸ್, 2ಜಿ ತರಂಗಗುಚ್ಛ, ಕಲ್ಲಿದ್ದಲು ಗಣಿಗಾರಿಕೆ ಮೊದಲಾದವುಗಳಿಗೆ ಸಂಬಂಧಿಸಿದ ಹಗರಣಗಳು ಬೆಳಕಿಗೆ ಬಂದು ತಪ್ಪಿತಸ್ಥ ಅಧಿಕಾರಿಗಳು ಮತ್ತು ರಾಜಕಾರಣಿಗಳ ವಿರುದ್ಧ ಕಾನೂನುಕ್ರಮ ಜರುಗಿಸಲು ಸಾಧ್ಯವಾಗಿದೆ ಎಂದಾದರೆ ಅದಕ್ಕೆ ಮೂಲ ಕಾಯ್ದೆಯೆ ಕಾರಣ. ಮೇಲ್ಕಂಡ ಹಗರಣಗಳು ಬಯಲಾಗುತ್ತಿದ್ದಂತೆ ಅಂದಿನ ಯುಪಿಎ ಸರಕಾರ ಕಾಯ್ದೆಯನ್ನು ಬದಲಾಯಿಸಲು ಹೊರಟಿತು. ಏತನ್ಮಧ್ಯೆ ಚುನಾವಣೆಗಳು ನಡೆದು ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರಕ್ಕೆ ಬಂದಿದೆ. ಆದರೆ ತಾನು ಭ್ರಷ್ಟಾಚಾರ ವನ್ನು ನಿರ್ಮೂಲನ ಮಾಡಲು ಬದ್ಧವೆಂದು ಹೇಳಿಕೊಂಡ ಮೋದಿ ಸರ್ಕಾರ ದಶಕಗಳಿಂದ ತನ್ನ ಉಪಯುಕ್ತತೆಯನ್ನು ಸಾಬೀತು ಪಡಿಸಿರುವಂತಹ ಕಾಯ್ದೆಯನ್ನು ಬಲಪಡಿಸುವ ಬದಲು ಯುಪಿಎ ಉದ್ದೇಶಿಸಿದ್ದ ಅದೇ ತಿದ್ದುಪಡಿಗಳಿಗೆ ಒಪ್ಪಿಗೆ ನೀಡುವ ಮೂಲಕ ಅದನ್ನು ದುರ್ಬಲಗೊಳಿಸಲು ಮುಂದಾಗಿದೆ. ಮೋದಿ ಸರ್ಕಾರದ ಆಷಾಢಭೂತಿತನ, ಅದರ ಮಾತು ಮತ್ತು ಕೃತಿಗಳ ನಡುವಿನ ಅಜಗಜಾಂತರಗಳನ್ನು ತೋರಿಸಲು ಇದಕ್ಕಿಂತ ಉತ್ತಮ ಉದಾಹರಣೆ ಬೇಕಿಲ್ಲ.

ಮೋದಿ ಸರ್ಕಾರ ತಿದ್ದುಪಡಿಗಳನ್ನು ಸಂಸತ್ತಿನ ಸಮಿತಿಯೊಂದಕ್ಕೆ ಕಳುಹಿಸಿ ಪರಿಶೀಲನೆ ನಡೆಸುವಂತೆ ಹೇಳಿತು. ಸಮಿತಿ ಕೆಲವೊಂದು ಪ್ರಸ್ತಾಪಗಳನ್ನು ತಿರಸ್ಕರಿಸಿದೆಯಾದರೂ ಸರಕಾರಿ ಅಧಿಕಾರಿಗಳ ಸಂರಕ್ಷಣೆಗೆ ಸಂಬಂಧಿಸಿದ ತಿದ್ದುಪಡಿಗಳನ್ನು ಹಾಗೇ ಉಳಿಸಿಕೊಂಡಿದೆ. ಅಂತಿಮವಾಗಿ ಇದಕ್ಕೆ ಸಚಿವಸಂಪುಟದ ಒಪ್ಪಿಗೆಯೂ ದೊರೆತಿದೆ. ಇದರ ನಂತರ ಮೋದಿ ಸರ್ಕಾರದ ನಡೆ ನಿಗೂಢವಾಗಿಬಿಟ್ಟಿದೆ. ಸಮಿತಿಯ ಸಲಹೆಗಳ ಬಗ್ಗೆ ಏನು ಮಾಡಲಾಗಿದೆ, ನೂತನ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಲಾಗುವುದೆ ಇಲ್ಲವೆ ಎಂಬ ಕುರಿತು ಯಾವುದೇ ವಿವರಣೆಯನ್ನು ನೀಡಲಾಗುತ್ತಿಲ್ಲ. ಈ ವಿಷಯಕ್ಕೆ ಸಂಬಂಧಿಸಿದ ಮಾಹಿತಿ ಕೋರುವ ಅರ್ಜಿಗಳನ್ನೂ ತಿರಸ್ಕರಿಸಲಾಗುತ್ತಿದೆ. ಇದರರ್ಥ ಮೋದಿ ಸರ್ಕಾರಕ್ಕೆ ಸಾರ್ವಜನಿಕ ಚರ್ಚೆ ಬೇಡವಾಗಿದೆ ಎಂದಲ್ಲವೆ? ಸರ್ಕಾರ ಕಾಯ್ದೆಯನ್ನು ತೆಳುಗೊಳಿಸುವ ನಿರ್ಧಾರಕ್ಕೆ ಬರುವ ಮುನ್ನ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಹೀಗಾಗಿ ದಶಕಗಳ ಕಾಲದಿಂದ ಭ್ರಷ್ಟಾಚಾರ ಪ್ರಕರಣಗಳೊಂದಿಗೆ ವ್ಯವಹರಿಸು ತ್ತಿರುವ ಅನೇಕ ಹಿರಿಯ ಪೊಲೀಸ್ ಅಧಿಕಾರಿಗಳಿಂದು ಆತಂಕಿತರಾಗಿದ್ದಾರೆ.

ಪಿಆರ್‌ಎಸ್ ಸಂಸದೀಯ ಸೇವೆಗಳು ಎಂಬ ಎನ್‌ಜಿಒ ನಡೆಸಿದ ವಿಶ್ಲೇಷಣೆ ಹೇಳುವಂತೆ ತಿದ್ದುಪಡಿಗಳು ಕಾಯ್ದೆಯನ್ನು ತುಂಬಾ ದುರ್ಬಲಗೊಳಿಸಲಿವೆ. ಉದಾಹರಣೆಗೆ

* ಬೋಫೋರ್ಸ್, 2ಜಿ ಮುಂತಾದ ಹಗರಣಗಳಲ್ಲಿ ಹಿರಿಯ ಸರಕಾರಿ ಅಧಿಕಾರಿಗಳ ವಿರುದ್ಧ ಕಾನೂನುಕ್ರಮವನ್ನು ಸಾಧ್ಯವಾಗಿಸಿದ ವಿಧಿ 13(1)ನ್ನು ಕೈಬಿಡಲಾಗಿದೆ. ಮೂಲ ಕಾಯ್ದೆ ಆರು ವಿಭಿನ್ನ ರೀತಿಯ ಅಪರಾಧಗಳನ್ನು ಒಳಗೊಂಡಿದ್ದರೆ ಉದ್ದೇಶಿತ ತಿದ್ದುಪಡಿಗಳು ಕೇವಲ ಎರಡನ್ನಷ್ಟೆ ಒಳಗೊಂಡಿವೆ.
* ಮೂಲ ಕಾಯ್ದೆಯ ಅಡಿಯಲ್ಲಿ ಆರೋಪಿ ಲಂಚ ಸ್ವೀಕರಿಸುವುದನ್ನು, ಸದಾ ಅಪರಾಧ ಎಸಗುವುದನ್ನು, ಅಪರಾಧಕೃತ್ಯಕ್ಕೆ ಕುಮ್ಮಕ್ಕು ನೀಡುವುದನ್ನು ಆತನ ದೋಷಿತ್ವ ಎಂದು ಪರಿಗಣಿಸಲಾಗುತ್ತಿತ್ತು. ಇದರಿಂದಾಗಿ ಭ್ರಷ್ಟ ಅಧಿಕಾರಿಗಳ ವಿರುದ್ಧ ಶೀಘ್ರ ಕಾನೂನುಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿತ್ತು. ಆದರೆ ಉದ್ದೇಶಿತ ತಿದ್ದುಪಡಿಗಳ ಪರಿಣಾಮವಾಗಿ ದೋಷಿತ್ವದ ಎಣಿಕೆ ಕೇವಲ ಲಂಚ ಸ್ವೀಕಾರಕ್ಕೆ ಸೀಮಿತವಾಗಿದೆ.
* ಲಂಚ ನೀಡುವವರಲ್ಲಿ ಸಹಭಾಗಿಗಳು ಮತ್ತು ಬಲಾತ್ಕಾರಕ್ಕೆ ಒಳಗಾಗುವವರು ಎಂಬ ಎರಡು ಗುಂಪುಗಳಿವೆ. ಮೊದಲನೆಯವರು ಸಾಮಾನ್ಯವಾಗಿ ಉನ್ನತ ಭ್ರಷ್ಟಾಚಾರ ಪ್ರಕರಣಗಳಲ್ಲಿ ಕಂಡುಬರುವ ಹವ್ಯಾಸಿ ಅಪರಾಧಿಗಳು. ಆದರೆ ಬಲಾತ್ಕಾರಕ್ಕೆ ಒಳಗಾಗುವವರಲ್ಲಿ ಹೆಚ್ಚಿನವರು ಸಣ್ಣಪುಟ್ಟ ಅಪರಾಧಗಳನ್ನು ಮಾಡಿದವರಾಗಿದ್ದು ಇಂಥವರು ಮಾಫಿ ಸಾಕ್ಷಿಗಳಾಗುವ ಸಾಧ್ಯತೆ ಇದೆ. ಆದರೆ ತಿದ್ದುಪಡಿಗಳ ನಂತರ ಈ ಭಿನ್ನತೆಗಳನ್ನು ತೆಗೆದುಹಾಕಲಾಗಿದೆ. ಪರಿಣಾಮವಾಗಿ ಕಾನೂನುಕ್ರಮ ಜರುಗಿಸುವವರ ಕೆಲಸ ಮೊದಲಿಗಿಂತ ಹೆಚ್ಚು ಕಠಿಣವಾಗಲಿದೆ.

ಭಾರತ ವಿಶ್ವಸಂಸ್ಥೆಯ 'ಭ್ರಷ್ಟಾಚಾರ ವಿರೋಧಿ ಒಪ್ಪಂದ 2011'ಕ್ಕೆ ಸಹಿಹಾಕಿದ ಬಳಿಕ ತಿದ್ದುಪಡಿಗಳು ಅವಶ್ಯವಾಗಿವೆ ಎಂಬುದು ಅನೇಕ ಸರಕಾರಿ ಅಧಿಕಾರಿಗಳ ಸಮರ್ಥನೆಯಾಗಿದೆ. ಆದರೆ ವಾಸ್ತವದಲ್ಲಿ ಈ ತಿದ್ದುಪಡಿಗಳು ಅಂತಾರಾಷ್ಟ್ರೀಯವಾಗಿ ಒಪ್ಪಿತವಾಗಿರುವ ಮಾನದಂಡಗಳನ್ನು ಅನುಸರಿಸುವ ಬದಲು ಇನ್ನಷ್ಟು ದುರ್ಬಲಗೊಳಿಸಲಿವೆ. ಇದರ ಪರಿಣಾಮ ಏನೆಂದರೆ ಮೂಲ ಕಾಯ್ದೆಯಲ್ಲಿರುವ 'ಅಪರಾಧಕ್ಕೆ ಕುಮ್ಮಕ್ಕು' (ವಿಧಿ 10), 'ಹಿತಾಸಕ್ತಿಗಳ ಘರ್ಷಣೆ' (ವಿಧಿ 11), 'ಮಧ್ಯವರ್ತಿಗಳನ್ನು ಬಲೆಗೆ ಬೀಳಿಸುವ' (ವಿಧಿ 8) ವಿಧಿಗಳನ್ನು ಒಂದೋ ರದ್ದುಗೊಳಿಸಲಾಗುವುದು ಅಥವಾ ಬದಲಾಯಿಸಲಾಗುವುದು.

ಅಪಾರದರ್ಶಕ ಆಡಳಿತ

ಇನ್ನು ಕಳೆದ ಮೂರು ವರ್ಷಗಳಲ್ಲಿ ಪಾರದರ್ಶಕತೆ ಹೆಚ್ಚಾಗಿದೆಯೆ ಎಂದು ನೋಡಿದರೆ ಅದೂ ಇಲ್ಲ. ಮಾ... ಹಕ್ಕು ಕಾಯ್ದೆಯನ್ನು ಸದೃಢಗೊಳಿಸುವ ಬದಲು ... ಅಕ್ರಮಗಳನ್ನು ಮುಚ್ಚಿಹಾಕುವ ಸಲುವಾಗಿ ಕಾಯ್... ತೆಳುಗೊಳಿಸುವ ಷಡ್ಯಂತ್ರಕ್ಕೆ ಚಾಲನೆ ನೀಡಲಾಗಿದೆ. ... ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಲಾಗುತ್ತಿ... ಅನಾನುಕೂಲಿ ಪ್ರಶ್ನೆಗಳಿಗೆ ಉತ್ತರಗಳು ದೊರೆಯು... ಉದಾಹರಣೆಗೆ ಮೋದಿಯ ವಿದೇಶ ಪ್ರಯಾಣ... ತಗುಲಿದ ಖರ್ಚು, ಆತನ ಜತೆ ಯಾರೆಲ್ಲ ಇದ್ದರು ... ಪ್ರಶ್ನೆಗಳಿಗೆ ಉತ್ತರ ಸಿಗುತ್ತಿಲ್ಲ.

ನಗದು ವಹಿವಾಟಿಗೆ ಮಿತಿ

ರೂ. 2 ಲಕ್ಷಕ್ಕೂ ಮೇಲ್ಪಟ್ಟ ಎಲ್ಲಾ ನ... ವ್ಯವಹಾರಗಳಿಗೆ ತಡೆ ಹಾಕಿರುವ ಮೋದಿ ಸ... ಇದರಿಂದಾಗಿ ಕಪ್ಪು ಹಣದ ಚಲಾವಣೆ ಕಡಿಮೆಯಾ... ಎಂದು ವಾದಿಸುತ್ತಿದೆ. ಇತ್ತೀಚೆಗೆ ಜಾರಿಯಾಗಿರುವ ... ನಿಯಮಾವಳಿಗಳ ಪ್ರಕಾರ ಒಂದು ದಿನದಲ್ಲಿ ರೂ... ಲಕ್ಷಕ್ಕಿಂತ ಹೆಚ್ಚು ಮೌಲ್ಯದ ನಗದು ವಹಿವಾ... ನಡೆಸಿದುದಾದರೆ ಇಡೀ ಮೊತ್ತದ ಮೇಲೆ (ಬರೀ ಹೆಚ್... ಮೊತ್ತದ ಮೇಲಲ್ಲ) ದಂಡ ವಿಧಿಸಲಾಗುವುದು; ನ... ಹಣ ಸ್ವೀಕಾರ ಒಂದು ದಿನದಲ್ಲಿ ನಡೆದರೂ ಹ... ದಿನಗಳಲ್ಲಿ ನಡೆದರೂ ಪೂರ್ತಿ ದಂಡ ತೆರಲೇ... ಎಂದಾಗಿದೆ.


ಎಲ್ಲಾ ಸರಿ. ಆದರೆ ಸಮಸ್ಯೆ ಏನೆಂದರೆ ರೂ... ಲಕ್ಷಕ್ಕೂ ಅಧಿಕ ಬೆಲೆಯ ವಹಿವಾಟು ನಡೆಯುತ್ತಿದೆ ... ತೆರಿಗೆ ಇಲಾಖೆಗೆ ಹೇಗೆ ತಿಳಿಯುತ್ತದೆ? ನಮ... ಗೊತ್ತಿರುವಂತೆ ಕಪ್ಪು ಹಣದ ವಹಿವಾಟುಗಳೆಲ್ಲ ರಹಸ್... ನಡೆಯುತ್ತವೆ. ಹೊಸ ನಿಯಮಾವಳಿಗಳ ಹೊರತಾಗಿ... ಇಂತಹ ವ್ಯವಹಾರಗಳು ಮುಂದುವರಿಯಲಿರು... ಗ್ಯಾರಂಟಿ. ಏಕೆಂದರೆ ಚುನಾವಣೆಗಳ ಕಾಲದಲ್ಲಿ ರಾಜಕ... ಗಳು ಮತ್ತು ಅಧಿಕಾರಿಗಳಿಗೆ ಬೇಕಾಗುವ ಕೋಟಿಗ... ಹಣ ಬಿಲ್ಡರ್‌ಗಳು ಮತ್ತು ಕಾರ್ಪೊರೇಟುಗಳಿಂದ... ಬೇರೆ ಎಲ್ಲಿಂದ ಬರಬೇಕು? ಇವರುಗಳು ತಂ... ಉದ್ದಿಮೆಗಳನ್ನು ಸಾಂಗವಾಗಿ ಸಾಗಿಸಬೇಕಿದ್ದರೆ ... ಕೈಗಳನ್ನು ಬೆಚ್ಚಗೆ ಮಾಡದೆ ಗತ್ಯಂತರವಿಲ್ಲ. ಬಿಲ್ಡರ್‌ಗ... ಮನೆ ಅಥವಾ ಫ್ಲ್ಯಾಟ್ ಖರೀದಿಸುವ ನಮ್ಮನಿಮ... ಗ್ರಾಹಕರು ಬೆಲೆಯ ಒಂದಂಶವನ್ನು ನಗದುರೂಪ... ನೀಡಲೇಬೇಕಾಗಿರುವುದು ಮುಖ್ಯವಾಗಿ ಇದೇ ಕಾರ... ಮೋದಿ ಸರ್ಕಾರ ಇದನ್ನು ತಡೆಗಟ್ಟಲು ಏನು ಮಾ... ಏನೂ ಇಲ್ಲ. ದಂಧೆ ಯಥಾಪ್ರಕಾರ ಮುಂದುವರಿ...

ಕಾರ್ಪೊರೇಟುಗಳು ತಮ್ಮ ಲಾಭದ ಶೇಕಡಾ 7.5... ಹೆಚ್ಚು ಮೊತ್ತವನ್ನು ರಾಜಕೀಯ ಪಕ್ಷಗಳಿಗೆ ದೇಣಿಗೆ... ನೀಡುವಂತಿಲ್ಲ ಮತ್ತು ಅಂತಹ ದೇಣಿಗೆಯನ್ನು ... ಆಯವ್ಯಯ ಪಟ್ಟಿಯಲ್ಲಿ ತೋರಿಸಬೇಕು ... ನಿಯಮವನ್ನು ತೆಗೆದುಹಾಕಿರುವ ಫಲವಾಗಿ ಇನ್ನು ಮ... ಬಾಂಡ್ ರೂಪದಲ್ಲಿ ಶೇಕಡಾ 50ರಷ್ಟು ದೇಣಿಗೆ ನೀಡಿ... ಅದು ಯಾರೆಂದು ಗೊತ್ತಾಗುವುದಿಲ್ಲ. ಎಂದ... ರಾಜಕೀಯ ಪಕ್ಷಗಳಿಗೆ ಬರುವ ನಗದು ದೇಣಿಗೆ... ರೂ. 20,000ದಿಂದ ರೂ 2,000ಕ್ಕಿಳಿಸಿರುವ ಕ್ರಮ... ಬರೀ ಒಂದು ಕಣ್ಕಟ್ಟು. ಏಕೆಂದರೆ ಮೊದಲು ಒ... ರಶೀದಿ ಬರೆಯುತ್ತಿದ್ದವರು ಇನ್ನುಮುಂದೆ 10 ರ... ಬರೆಯುತ್ತಾರೆ!

ನೋಟುರದ್ದತಿ ಮಾಡಿರುವುದು ಭ್ರಷ್ಟಾ... ತಡೆಗಟ್ಟುವ ಅಭಿಯಾನದ ಭಾಗವಾಗಿದೆ ಎಂದು ಮೋ... ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ ಅತ್ತ ರಾಜಕಾರಣಿ... ಅಧಿಕಾರಿಗಳು ಬಿಲ್ಡರ್‌ಗಳಿಂದ ಮತ್ತು ಕಾರ್ಪೊರೇಟುಗ... ಪಡೆಯುವ ಲಂಚವನ್ನು ತಡೆಗಟ್ಟುವ ನಿಟ್ಟಿನಲ್ಲಿ ... ಮಾಡದೆ ಯಥಾಸ್ಥಿತಿಯನ್ನು ಮುಂದುವರಿಸು... ವಾಸ್ತವದಲ್ಲಿ ಅದು ಭ್ರಷ್ಟಾಚಾರ ನಿಗ್ರಹ ಕಾಯ್ದೆ... ತೆಳುಗೊಳಿಸುತ್ತಿದೆ. ಆದಾಯ ತೆರಿಗೆ ಇಲಾ... ನೀಡಲಾಗಿರುವ ಅನಿಯಂತ್ರಿತ ಅಧಿಕಾರದ ಫಲ... ತಲೆಯೆತ್ತಲಿರುವ ತೆರಿಗೆ ಭಯೋತ್ಪಾದನೆಯೂ ವಾ... ಭ್ರಷ್ಟಾಚಾರಕ್ಕೆ ಇಂಬುಗೊಡದಿರುತ್ತದೆಯೆ? ಇವೆಲ್ಲದರ... ಲೋಕಪಾಲ ಹುದ್ದೆಯನ್ನು ಭರ್ತಿ ಮಾಡ... ಕುಂಟುನೆಪಗಳನ್ನು ಒಡ್ಡುತ್ತಾ ಇರುವುದನ್ನು ಸೇರಿಸಿ... ಭ್ರಷ್ಟಾಚಾರ ನಿರ್ಮೂಲನ, ಪಾರದರ್ಶಕತೆ, ಪ್ರಾಮಾ... ಉತ್ತರದಾಯಿತ್ವದ ಮಾತುಗಳೆಲ್ಲವೂ ಬರೀ ಪೊಳ್ಳು, ... ಕೇವಲ ಜನರನ್ನು ಮೂರ್ಖರಾಗಿಸುವ ತಂತ್ರ... ಇನ್ನೇನೂ ಅಲ್ಲ ಎನ್ನುವುದು ಗೋಡೆ ಬರಹ... ಸ್ಪಷ್ಟವಿಲ್ಲವೆ?

■ ಸುರೇಶ್ ಭಟ್ ಬಾಕ್ರಬೈ...

(ಆಧಾರ: scroll.in ನಲ್ಲಿ ಸೈಕತ್ ದತ್ತ ... ದೈರಿಯಲ್ಲಿ ವಿವೇಕ್ ಕೌಲ್‌ರ ಲೇಖನ...



ಬಾಟಲಿಯಲ್ಲಿ ಹುಲಿ

ಇಂಗ್ಲಿಷ್ ಮೂಲ: ಆರ್ಥರ್ ಪೋವೆಲ್
ಕನ್ನಡಕ್ಕೆ: ವಸಂತ್ ನಡಹಳ್ಳಿ

ಹುಲಿ ಕೈತಪ್ಪಿದ ಬೇಸರದಲ್ಲಿ ಮತ್ತು ಕೆಳಗೆ ಬಿದ್ದ ...ವಿನಲ್ಲಿ ನಾನು ಕಷ್ಟದಿಂದ ಹಳ್ಳವನ್ನು ದಾಟಿಕೊಂಡು ...ಬಂದೆ. ನನ್ನ ಜೊತೆ ಬಂದವರೂ ಎದ್ದುಬಿದ್ದು ಓಡಿ ...ತ್ತಿದ್ದರು. ಅವರು ಹೇಳಿದ ಪ್ರಕಾರ ಹುಲಿ ಅವರು ...ಗಿ ಕೊಂದಿದ್ದ ಜಾಗದತ್ತ ನುಗ್ಗಿ ಅವರನ್ನು ನೋಡಿ ...ಗ್ರವಾಗಿ ತನ್ನ ಬಾಲವನ್ನು ಅಲ್ಲಾಡಿಸಿದಾಗ ಜೀವಭಯ ...ದ ಅವರು ಓಡಿಬಂದಿದ್ದರು. ಹುಲಿಯನ್ನು ನೋಡುವ ...ನ ಬಯಕೆ ಪೂರ್ಣವಾಗಿತ್ತು!

ನಾವು ಇನ್ನೇನು ಹಿಂತಿರುಗಲು ಸಿದ್ಧರಾಗುತ್ತಿರುವಾಗ ...ಲಿ ಬೆಟ್ಟದ ಮೇಲಿನಿಂದ ಮತ್ತೆ ಘರ್ಜಿಸಿತು. ಮೊದಲು ...ದು ಸಾಂಬಾರ್ ಜಿಂಕೆ ಬೆಟ್ಟದಿಂದ ಇಳಿದು ಓಡಿತು. ...ಲಿ ಮತ್ತೆ ಮತ್ತೆ ಘರ್ಜಿಸಿದಂತೆಲ್ಲಾ ಇತರ ವನ್ಯಪ್ರಾಣಿಗಳಿಗೆ ...ಯಹುಟ್ಟಿಸಿ ಅವು ಚಲ್ಲಾಪಿಲ್ಲಿಯಾಗಿ ಓಡುವಂತೆ ...ಡುತ್ತಿತ್ತು. ನಂತರ ಹುಲಿ ಚಲಿಸುತ್ತಿರುವಂತೆ ಅನಿಸಿತು. ...ು ಮತ್ತೆ ಅದನ್ನು ಬೆನ್ನುಹತ್ತುವ ಪ್ರಯತ್ನ ಮಾಡಿದೆ. ...ರೆ ಹುಲಿ ನಮ್ಮಿಂದ ದೂರ ಹೋಗುತ್ತಿತ್ತು ಮತ್ತು ...ಲೇ ಕತ್ತಲು ಕವಿಯತೊಡಗಿತ್ತು. ಹಾಗಾಗಿ ನಾನು ...ತಿರುಗಲು ನಿರ್ಧರಿಸಿದೆ. ನಾನು ಇಲ್ಲಿಯವರೆಗೂ ಕಂಡು ...ರಿಯದ ರೀತಿಯಲ್ಲಿ ಹುಲಿ ವರ್ತಿಸಿತ್ತು. ಅದು ಸಂಗಾತಿ ...ಂದರ ಹುಡುಕಾಟದಲ್ಲಿತ್ತು ಎಂದು ನಾನು ...ರ್ಮಾನಿಸಿದೆ.

ಮರುದಿನ ಬೆಳಗ್ಗೆ ಇನ್ನೊಂದು ಬಲಿಪ್ರಾಣಿಯೊಂದನ್ನು ...ತ್ತೊಯ್ದಿರುವ ಮಾಹಿತಿ ಸಿಕ್ಕಿತು. ಅಬು ಹೇಳಿದ ...ರ ಈ ಪ್ರಾಣಿಯನ್ನು ಎಳೆದುಕೊಂಡು ಹೋಗಿರುವ ...ಲ್ಲಾ ಪ್ರದೇಶ ಬಾಟಲಿಯಂತಹ ಆಕೃತಿಯಲ್ಲಿದ್ದು ಸೋವುಗೆ ...ಡಲು ಅನುಕೂಲವಾಗಿತ್ತು. ಸುತ್ತಲಿನ ಹಳ್ಳಿಗಳಿಂದ ... ಜನರನ್ನು ಒಟ್ಟು ಮಾಡಿಕೊಂಡು ನಾವು ಬೇಟೆಗೆ ...ರಟೆವು.

ಬಲಿಪಶುವಿನ ಬಳಿ ಕಾಣಿಸಿದ ಹೆಜ್ಜೆ ಗುರುತುಗಳನ್ನು ...ಡಿದರೆ ಅದೊಂದು ದೊಡ್ಡ ಗಂಡುಹುಲಿಯಾಗಿತ್ತು. ...ೇ ಎಚ್ಚರವಹಿಸಿ ತಡೆಗೋಡೆಯಾಗಿ ಜನರನ್ನು ಸೂಕ್ತ ...ದಲ್ಲಿ ನಿಲ್ಲಿಸಿದೆ. ಎಲ್ಲಾ ಹೊರದಾರಿಗಳಲ್ಲೂ ನಿಲ್ಲಿಸುವಷ್ಟು ...ಗಳಿಲ್ಲದ್ದರಿಂದ ಕೆಲವು ಪೊದೆಗಳ ಮೇಲೆ ಜನ ಇರುವ ...ು ಹುಟ್ಟಿಸಲು. ಬಟ್ಟೆಗಳನ್ನು ಹಾಕಿದೆವು. ನಾನು ...ವೆಯ ಮೇಲಿನ ಒಂದು ಸಣ್ಣ ಬಂಡೆಯ ಮೇಲೆ ...ತುಕೊಂಡೆ. ನನ್ನಿಂದ 500 ಅಡಿ ದೂರದಲ್ಲಿ ...ವೊಂದಿದ್ದು ಅದರಿಂದ ಆಚೆಗೆ ಅಟ್ಟಾಳುಗಳಿದ್ದರು. ...ಮರಿಗೆ ಇದ್ದ ಇಳಿಜಾರಿನಲ್ಲಿ ಎತ್ತರದ ಹುಲ್ಲುಗಳಿದ್ದರೂ ... ಪ್ರದೇಶ ನನ್ನ ಕಣ್ಣಳತೆಯಲ್ಲಿತ್ತು.

ಸೋವುಗೆ ಶುರುವಾದ ಸ್ವಲ್ಪ ಹೊತ್ತಿನಲ್ಲಿ ನನ್ನೆದುರಿನ ಗುಡ್ಡದ ಮೇಲೆ ಹುಲಿಯೊಂದು ಹಾಯ್ದುಹೋಗುತ್ತಿರುವುದು ಕಾಣಿಸಿತು. ತಲೆಯೆತ್ತಿ ಚುರುಕಾಗಿ ನಡೆಯುತ್ತಿದ್ದ ಅದರ ಅದ್ಭುತ ರೂಪ ಅಷ್ಟು ದೂರದಿಂದ ನನಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಎಡಗಡೆಯ ಯಾವುದಾದರೂ ದಾರಿಯಿಂದ ತಪ್ಪಿಸಿಕೊಳ್ಳಲು ಅದು ಹವಣಿಸುತ್ತಿದೆ ಎಂದುಕೊಂಡೆ. ಹುಲ್ಲುಗಳಡಿಯಲ್ಲಿ ಅದು ಕಣ್ಮರೆಯಾದಾಗ ನನ್ನ ಎಡದಿಕ್ಕಿನಿಂದ ಅದು ಮತ್ತೆ ಬರುತ್ತದೆ ಎಂದು ನಾನು ನೋಡುತ್ತಲೇ ಇದ್ದೆ. ಅಟ್ಟಾಳುಗಳು ಹತ್ತಿರ ಬರುತ್ತಿದ್ದರೂ ಹುಲಿ ಕಾಣಿಸದಿದ್ದಾಗ ಅದು ಬಾಟಲಿಯಿಂದ ತಪ್ಪಿಸಿಕೊಂಡಿರಬಹುದೇ ಎಂದು ನಾನು ಶಂಕಿಸಿದೆ. ಸುಮ್ಮನೆ ಬಲಗಡೆ ದೃಷ್ಟಿಹಾಯಿಸಿದಾಗ ಅಲ್ಲಿದೆ ಹುಲಿ! ಎಚ್ಚರಿಕೆಯಿಂದ ಹೆಜ್ಜೆಗಳನ್ನಿಡುತ್ತಾ ದೇಹವನ್ನು ನೆಲಕ್ಕೇ ತಾಗಿಸಿಕೊಂಡು ಹುಲ್ಲುಗಳಿಂದ ಹೊರಬರುತ್ತಿತ್ತು. ನಾನು ಗುಂಡು ಹಾರಿಸಿದಾಗ ಅದು ನೆಲಕ್ಕೆ ಒರಗಿತು. ಅದು ಸತ್ತುಹೋಗಿದೆಯೋ ಅಥವಾ ಸುಮ್ಮನೆ ಅವಿತುಕೊಂಡಿದೆಯೋ ಎಂದು ತಿಳಿಯಲು ನಾನು ಮತ್ತೊಂದು ಗುಂಡು ಹಾರಿಸಿದೆ. ಆದರೆ ಹುಲಿ ನಿಶ್ಚಲವಾಗಿದ್ದುದರಿಂದ ಅದು ಸತ್ತುಹೋಗಿರುವುದು ಖಾತ್ರಿಯಾಯಿತು.

ನನ್ನ ಹೊಸ ಬಂದೂಕಿನಿಂದ ಕೊಂದ ಮೊದಲ ವನ್ಯಮೃಗವಾದ ಅದು ಯೌವ್ವನದಲ್ಲಿದ್ದ ಅದ್ಭುತ ಗಂಡುಹುಲಿಯಾಗಿತ್ತು.

ಧ್ವನಿ ನಕಲಿನ ಉಪಕರಣ

ಮಿಲಿಟರಿ ಕಂಟೋನ್ಮೆಂಟ್‌ನ ಬಯಲಿನಲ್ಲಿ ಒಂದು ದಿನ ಹುಲಿಯ ಘರ್ಜನೆ ಕೇಳಿಸಿತು. ಪ್ರಾಣಿಗಳನ್ನು ಪ್ರದರ್ಶನಕ್ಕೆ ಇಡುವ ಅಲೆಮಾರಿ ತಂಡವೊಂದು ಅಲ್ಲಿ ಕ್ಯಾಂಪ್ ಹೂಡಿರುವುದು ತಿಳಿದುಬಂತು. ನಾನು ಅಲ್ಲಿಗೆ ಹೋದಾಗ ಹುಲಿ ಗಾಢನಿದ್ದೆಯಲ್ಲಿತ್ತು. ನಾನು ಅಲ್ಲಿದ್ದ ವ್ಯಕ್ತಿಯೊಬ್ಬನಿಗೆ ಈಗಷ್ಟೇ ಕೂಗುತ್ತಿದ್ದ ಹುಲಿಯನ್ನು ತೋರಿಸಲು ಹೇಳಿದೆ. ಸ್ವಲ್ಪ ಹಿಂಜರಿದ ಆತನಿಗೆ ಹಣದ ಆಸೆ ತೋರಿಸಿದಾಗ ಹುಲಿಯ ಬೋನಿನ ಹಿಂದೆ ಇದ್ದ ಒಬ್ಬ ಹುಡುಗನ ಬಳಿ ಕರೆದುಕೊಂಡು ಹೋದ. ಅವನು ಹುಲಿಯ ಶಕ್ತಿಯುತ ಘರ್ಜನೆಯ ಪಕ್ಕಾ ನಕಲನ್ನು ಮಾಡಬಲ್ಲವನಾಗಿದ್ದ! ಆ ಹುಡುಗನಿಗೆ ನಾಲ್ಕಾಣೆಯನ್ನು ನೀಡಿ ಹುಲಿಯ ಧ್ವನಿಯನ್ನು ಹೊರಡಿಸಲು ಅವನು ಉಪಯೋಗಿಸುತ್ತಿದ್ದ ಒಂದು ವಾದ್ಯವನ್ನು ನೋಡಿದೆ. ಜೀವಮಾನವೆಲ್ಲಾ ಪ್ರಯತ್ನಿಸಿದ್ದರೂ ನಾನು ಆವಿಷ್ಕಾರ ಮಾಡಲಾಗದ್ದನ್ನು ಅವನು ನನಗೆ ಪರಿಚಯಿಸಿದ್ದ. ಅಂತಹುದೇ ವಾದ್ಯವನ್ನು ಮಾಡುವ ನನ್ನ ಮೊದಮೊದಲಿನ ಪ್ರಯತ್ನದಲ್ಲಿ ಒರಟು ಶಬ್ದಗಳನ್ನು ಹೊರಡಿಸುತ್ತಿದ್ದ ನಾನು ನಿಧಾನವಾಗಿ ವಾದ್ಯದ ರೂಪರೇಶೆಗಳನ್ನು ಬದಲಾಯಿಸುತ್ತಾ ಹುಲಿಯ ಧ್ವನಿಯನ್ನು ನಕಲು ಮಾಡುವ ವಿದ್ಯೆಯನ್ನು ಕರಗತಮಾಡಿಕೊಂಡೆ. ಹುಲಿ ಮತ್ತಿತರ ವನ್ಯಜೀವಿಗಳನ್ನು ಈ ವಾದ್ಯದ ಮೂಲಕ ಅಭ್ಯಾಸ ಮಾಡಬಹುದೆಂಬ ಯೋಚನೆಯಿಂದ ನಾನು ಪುಳಕಗೊಂಡಿದ್ದೆ.

ನನ್ನ ಹೊಸವಿದ್ಯೆಯ ಪ್ರಯೋಗಕ್ಕಾಗಿ ಅವಕಾಶವನ್ನು ಹುಡುಕುತ್ತಿದ್ದೆ. ಐದು ತಿಂಗಳ ನಂತರ ಕಸೌಲಿಗೆ ಹೋದ ನಾನು ನನ್ನ ವಾದ್ಯವನ್ನು ಪ್ರಯೋಗಿಸತೊಡಗಿದೆ. ಮೊದಲ ಪ್ರಯತ್ನದಲ್ಲಿ ನವಿಲು ಮತ್ತು ಜಿಂಕೆಗಳು ನನ್ನ ಕೂಗನ್ನು ಕೇಳಿ ಹುಲಿಯದೆಂದು ತಿಳಿದು ತಮ್ಮ ಎಚ್ಚರಿಕೆಯ ಕರೆ ಮೊಳಗಿಸಿದವು. ಸೌದೆಗಾಗಿ ಕಾಡಿನಲ್ಲಿದ್ದ ಜನ ಭಯದಿಂದ ಮರವನ್ನೇರಿ ಕುಳಿತುಕೊಂಡರು! ಆದರೂ ನನ್ನ ಕರೆಗೆ ನಿರೀಕ್ಷೆಯಂತೆ ಯಾವ ಹುಲಿಯಿಂದಲೂ ಉತ್ತರ ಬರಲಿಲ್ಲ. ಅಬು ಹೇಳಿದ ಪ್ರಕಾರ ಕೆಲವು ದಿನಗಳ ಹಿಂದೆ ಅಲ್ಲಿಗೆ ಬಂದಿದ್ದ ಬೇಟೆಗಾರರ ತಂಡ ಇಡೀ ಅರಣ್ಯದಲ್ಲಿ ಗೌಜೆಬ್ಬಿಸಿ ಹೋಗಿತ್ತು.

ಹುಲಿಯ ಧ್ವನಿ ನಕಲನ್ನು ಮಾಡುವ ವಾದ್ಯವನ್ನು ರೂಪಿಸಿದ ನಾನು ಸ್ವಪ್ರಯತ್ನದಿಂದ ಚಿರತೆಯ ಕೂಗಿನ ಅಣಕು ಮಾಡುವಂತಹ ಉಪಕರಣವನ್ನೂ ರೂಪಿಸಿದೆ. ಮರುದಿನ ಮಧ್ಯಾಹ್ನ ಇದನ್ನು ಪ್ರಯೋಗಿಸಿದಾಗ ಕೂಡ ಹಿಂದಿನಂತಹುದೇ ಪರಿಣಾಮಗಳು ಕಂಡುಬಂದವು. ಆರೇಳು ಬಾರಿ ಚಿರತೆಯ ಧ್ವನಿ ಹೊರಡಿಸಿದ ಮೇಲೆ ಬೆಟ್ಟದ ಆಚೆಯಿಂದ ಚಿರತೆಯೊಂದು ಉತ್ತರಿಸುತ್ತಾ ನಮ್ಮ ಕಡೆ ಬರತೊಡಗಿತು! ಸಂತೋಷದಿಂದ ನಮ್ಮ ಕಿವಿಗಳನ್ನೇ ನಂಬದಾದೆವು. ಕತ್ತಲಾದ ಮೇಲೆ ನಾವು ಮತ್ತೆ ಅದೇ ಸ್ಥಳಕ್ಕೆ ಹೋಗಿ ಇದೇ ಪ್ರಯೋಗ ನಡೆಸಿದಾಗ ಚಿರತೆಯೊಂದು ಮತ್ತೆಮತ್ತೆ ಉತ್ತರಿಸುತ್ತಿತ್ತು. ಸಂಗಾತಿಯ ಹುಡುಕಾಟದಲ್ಲಿದ್ದ ಅದು ನಮ್ಮ ಧ್ವನಿನಕಲಿನಿಂದ ಸಂಪೂರ್ಣ ಮೋಸ ಹೋಗಿತ್ತು.

ನಾನು ಜಿಂಕೆಯೊಂದನ್ನು ಕೊಂದು ವಾಸನೆಯನ್ನು ಹರಡಲು ಶವವನ್ನು ಮೂರು ದಿಕ್ಕುಗಳಲ್ಲಿ ಸ್ವಲ್ಪ ದೂರ ಎಳೆದುಕೊಂಡು ಹೋಗಿ ನಂತರ ಒಂದು ಗಿಡಕ್ಕೆ ಅದರ ನಾಲ್ಕು ಕಾಲುಗಳನ್ನು ಕಟ್ಟಿದೆ. ಅಂತಹ ಒಳ್ಳೆಯ ಜಿಂಕೆಯ ಮಾಂಸ ನರಿಗಳ ಪಾಲಾಗುವುದು ಅಬುವಿಗೆ ಏನೇನೂ ಇಷ್ಟವಿರಲಿಲ್ಲ. ಅದಕ್ಕೆ ಬದಲಾಗಿ ನಾನು ಅವನಿಗಾಗಿ ಒಂದು ಹಂದಿಯನ್ನು ಹೊಡೆದುಕೊಡುವುದಾಗಿ ಹೇಳಿದರೂ ಅವನ ಬೇಸರ ಹೋಗಲಿಲ್ಲ!

ಕತ್ತಲಾಗುವುದಕ್ಕೆ ಮೊದಲು ಧ್ವನಿನಕಲನ್ನು ಮಾಡಿ ಚಿರತೆಯನ್ನು ಕರೆದೆ. ನನ್ನ ಯೋಜನೆ ಕೆಲಸ ಮಾಡಿತ್ತು. ಮರುದಿನ ಬೆಳಗ್ಗೆ ಚಿರತೆ ಒಳ್ಳೆಯ ಭೋಜನಮಾಡಿ ಹೋಗಿರುವುದು ನಮ್ಮ ಗಮನಕ್ಕೆ ಬಂತು. ಅವತ್ತು ಸಂಜೆ ಹತ್ತಿರದ ಮರದಲ್ಲಿ ಮಚಾನನ್ನು ಕಟ್ಟಿಕೊಂಡು ನಾನು ಚಿರತೆಯನ್ನು ಕೊಂದೆ. ಹೊಸವಿದ್ಯೆಯ ಯಶಸ್ವೀ ಪ್ರಯೋಗದಿಂದ ನನಗೆ ಸಂತೋಷವಾಯಿತು.

ನನ್ನ ರಜಾದಿನಗಳು ಮುಗಿಯುತ್ತಾ ಬಂದಿತ್ತು. ಆದರೆ ಹುಲಿಯ ಹೆಜ್ಜೆಗುರುತುಗಳನ್ನು ಹುಡುಕುವ ನಮ್ಮ ಪ್ರಯತ್ನ ವಿಫಲವಾಗಿತ್ತು. ಇನ್ನು ಎರಡೇ ದಿನಗಳು ಉಳಿದಿರುವಾಗ ಹುಲಿಯೊಂದರ ಹೆಜ್ಜೆಗುರುತುಗಳು ನಮ್ಮ ಕಣ್ಣಿಗೆ ಬಿತ್ತು. ಅವು ನಾನು ಅಲ್ಲಿಯವರೆಗೆ ನೋಡಿರದಷ್ಟು ದೊಡ್ಡ ಹೆಜ್ಜೆಗುರುತುಗಳಾಗಿದ್ದವು. ಅಬುವಿನ ಪ್ರಕಾರ ಆ ಹುಲಿ ಕಡಿಮೆಯೆಂದರೆ 12 ಅಡಿ ಉದ್ದವಿತ್ತು! ಧ್ವನಿನಕಲನ್ನು ಮಾಡಿ ಅದನ್ನು ಕರೆಯುವ ನನ್ನ ಪ್ರಯತ್ನ ಸಫಲವಾಗಲಿಲ್ಲ. ರಾತ್ರಿಯ ಹೊತ್ತು ಕೊಲ್ಲುವುದು ಕಾನೂನುಬಾಹಿರವಾಗಿದ್ದರಿಂದ ನಾನು ಆ ಮಾರ್ಗವನ್ನು ಹಿಡಿಯಲು ಸಿದ್ಧನಿರಲಿಲ್ಲ.

ಮರುದಿನ ನನ್ನ ಪ್ರವಾಸದ ಕೊನೆಯ ದಿನವಾಗಿತ್ತು ಉಲ್ಟಾ ಆರಣ್ಯದಲ್ಲಿ ನಾನು ಕಟ್ಟಿದ್ದ ಬಲಿಪಶುವನ್ನು ಹುಲಿ ಕೊಂದಿತ್ತು. ಆದರೆ ಅವತ್ತು ನಮಗೆ ಸೋವುಗೆ ಮಾಡಲು ದೊರಕಿದ್ದು ಕೇವಲ ಐದು ಜನ ಅಟ್ಟಾಳುಗಳು. ಸಾಧ್ಯವಾದಷ್ಟು ಹಳೆಯ ಬಟ್ಟೆಯನ್ನು ತಡೆಗೋಡೆಯಾಗಿ ಬಳಸಿ ಸೋವುಗೆ ಮಾಡಿದರೂ ಹುಲಿ ತಪ್ಪಿಸಿಕೊಂಡಿತು.

ನಾವು ಇನ್ನೇನು ಹೊರಡಬೇಕೆನ್ನುವಷ್ಟರಲ್ಲಿ ಬೆಟ್ಟದ ತುದಿಯಿಂದ ಹುಲಿಯ ಘರ್ಜನೆ ಕೇಳಿಸಿತು. ಸಾವಿರ ಅಡಿಗಳಷ್ಟು ಎತ್ತರವಿದ್ದ ಆ ಬೆಟ್ಟದ ಮೇಲಿನ ಬಂಡೆಯನ್ನು ಏರಿಹೋದರೆ ಹುಲಿಯನ್ನು ಬೇಟೆಯಾಡುವುದು ಸಾಧ್ಯ ಎಂದು ಅಬು ಹೇಳಿದ. ಪ್ರಯಾಸದಿಂದ ನಾನು ಅದನ್ನು ಹತ್ತಿ ಹೋದ ಮೇಲೆ ಉಳಿದವರು ಕೆಳಗಿನಿಂದ ಪಿಸ್ತೂಲಿನ ಗುಂಡು ಹಾರಿಸಿ ಹುಲಿಯನ್ನು ಬೆಟ್ಟದ ಮೇಲೆ ತಳ್ಳಲು ಪ್ರಯತ್ನಿಸುತ್ತಿದ್ದರು. ಕೊನೆಗೂ ಕಣ್ಣಿಗೆ ಬಿದ್ದ ಹುಲಿಯನ್ನು ಕೊಂದುಹಾಕಿದೆ.

ಭಾರಿ ಗಾತ್ರದ ಅದು ಯೌವ್ವನವನ್ನು ದಾಟಿದ್ದು ಅದರ ಚರ್ಮ ಕಳೆಗುಂದಿತ್ತು. 10 ಅಡಿ 7 ಇಂಚು ಉದ್ದವಿದ್ದ ಅದನ್ನು ಹೊತ್ತುತರುವುದು ಸಾಧ್ಯವಿರಲಿಲ್ಲ. ಹಾಗಾಗಿ ಕಾಡಿನಲ್ಲಿಯೇ ಅದರ ಚರ್ಮವನ್ನು ಬಿಡಿಸಬೇಕಾಯಿತು.

ಮಿಲಿಟರಿಯಲ್ಲಿನ ಉದ್ಯೋಗ ದೇಶದ ವಾಯುವ್ಯ ಸರಹದ್ದಿಗೆ ನನ್ನನ್ನು ಕಟ್ಟಿಹಾಕಿತ್ತು. ಸರಿಯಾದ ಅವಕಾಶಗಳಿಲ್ಲದೆ ಧ್ವನಿನಕಲಿನ ಪ್ರಯೋಗಗಳನ್ನು ನನಗೆ ಮಾಡಲಾಗಲಿಲ್ಲ. ಹುಲಿಯನ್ನು ಕರೆಯುವ ನನ್ನ ಪ್ರಯತ್ನ ಇನ್ನೂ ಸಫಲವಾಗಿರಲಿಲ್ಲ. ಚಿರತೆಗಳನ್ನು ಸ್ವಲ್ಪಮಟ್ಟಿಗೆ ಧ್ವನಿನಕಲಿನಿಂದ ಮೋಸಗೊಳಿಸಿದ್ದರೂ ಅವುಗಳನ್ನು ಹತ್ತಿರ ಕರೆದು ಬೇಟೆಯಾಡುವುದು ನನಗಿನ್ನೂ ಸಾಧ್ಯವಾಗಿರಲಿಲ್ಲ.

(ಮುಂದುವರಿಯುವುದು)

ಆಫ್ರಿಕಾದ ಬೇಟೆಯ ವಿಧಾನ

ಆಫ್ರಿಕಾದಲ್ಲಿ ಸಿಂಹಗಳನ್ನು ಕೊಲ್ಲಲು ಅನುಸರಿಸುವ ಸಾಮಾನ್ಯ ವಿಧಾನವೆಂದರೆ ಜೀಬ್ರಾವೊಂದನ್ನು ಕೊಂದು ಶವವನ್ನು ಕತ್ತರಿಸಿ ಸೂಕ್ತವಾದ ಸ್ಥಳದಲ್ಲಿ ಇಟ್ಟು, ಶವದ ವಾಸನೆಯ ಮೂಲಕ ಸಿಂಹವನ್ನು ಆಕರ್ಷಿಸುವುದು. ಸಿಂಹಗಳ ವಾಸನಾಗ್ರಹಣ ಶಕ್ತಿ ಉತ್ತಮವಾಗಿರುವುದರಿಂದ ಈ ವಿಧಾನ ಕೆಲಸಮಾಡುತ್ತದೆ. ಆದರೆ ಭಾರತದ ಹುಲಿಗಳ ವಾಸನಾಗ್ರಹಣ ಶಕ್ತಿ ಅತ್ಯಂತ ಕಡಿಮೆಯಾಗಿರುತ್ತದೆ. ಚಿರತೆಗಳು ಹುಲಿಗಳಿಗಿಂತ ಉತ್ತಮವಾದರೂ ಸಿಂಹಗಳಷ್ಟು ಚುರುಕಲ್ಲ. ಚಿರತೆ ಮತ್ತು ಹುಲಿಗಳು ತಮ್ಮ ದೃಷ್ಟಿ ಮತ್ತು ಶಬ್ದಗ್ರಹಣ ಶಕ್ತಿಯನ್ನು ಅವಲಂಬಿಸುತ್ತವೆ. ಹಾಗಾಗಿ ಜೀವಂತ ಬಲಿಪಶುವಿನ ಮೂಲಕ ಮಾತ್ರ ಅವುಗಳನ್ನು ಆಕರ್ಷಿಸಬಹುದು.



...ನಿಮಾ ಪ್ರಭಾವ ಮತ್ತು ಮಹಿಳೆಯರ ಚುಡಾವಣೆ

ಉತ್ತರ ಪ್ರದೇಶದಲ್ಲಿ ರೋಮಿಯೋ ನಿಗ್ರಹ ದಳ ಅರ್ಥಾತ್ ಮಹಿಳೆಯರ ಚುಡಾವಣೆ ನಿಗ್ರಹ ಪೊಲೀಸ್ ...ವು ಸಿಕ್ಕ ಸಿಕ್ಕ ಗಂಡು ಹುಡುಗರನ್ನು ಹಿಡಿದು ಭೀಕರವಾಗಿ ಹೊಡೆದು ತಲೆ ಬೋಳಿಸುತ್ತಿದ್ದಾರೆ ಎಂದು ...ದಿಯಾಗುತ್ತಿದೆ. ಆದರೆ ಈ ರೋಡ್ ರೋಮಿಯೋ ಪ್ರವೃತ್ತಿ ಹುಟ್ಟಲು ಮೂಲಕಾರಣ ಹಿಂದಿ ಚಲನಚಿತ್ರಗಳಲ್ಲಿ ...60-70ರ ದಶಕದಲ್ಲಿ ಶುರುವಾದ ಕಳಪೆ ಕಥೆಗಳಲ್ಲಿ ಮೊದಲಾರ್ಧದಲ್ಲಿ ನಾಯಕ ಮತ್ತು ಪೋಲಿ ಗೆಳೆಯರು ...ಯಕಿ ಮತ್ತು ಅವಳ ಗೆಳತಿಯರಿಗೆ ಚುಡಾಯಿಸುವ-ಸತಾಯಿಸುವ ದೃಶ್ಯಗಳನ್ನು ವಿನಾಕಾರಣ ತುರುಕುತ್ತಿದ್ದದ್ದು. ಇಂತಹ ಚಲನಚಿತ್ರಗಳಿಂದ ಉತ್ತೇಜಿತರಾಗಿ ಭಾರತದ ಎಲ್ಲೆಡೆಯ ಯುವಕರೂ ತಮ್ಮೂರಿನ ಹುಡುಗಿಯರನ್ನು ಚುಡಾಯಿಸಿ ಸತಾಯಿಸಿ ವಿಕೃತ ಆನಂದ ಪಡೆಯುತ್ತಾ ತಮ್ಮನ್ನು ತಾವು ಹೀರೋ ಎಂದು ಭ್ರಮಿಸತೊಡಗಿದರು. ಹಿಂದಿ ಚಲನಚಿತ್ರಗಳಲ್ಲಿ ಹಾಗೂ ಭಾರತೀಯ ಇತರ ಸ್ಥಳೀಯ ಭಾಷಿಕ ಚಿತ್ರಗಳಲ್ಲಿ ಇಂತಹ ಚುಡಾವಣೆಯ ದೃಶ್ಯಗಳು ಇಂದಿಗೂ ಇದ್ದೇ ಇರುತ್ತವೆ. ಹಾಗಾಗಿ ಭಾರತದಲ್ಲಿ ಈ ರೀತಿಯ ಹುಡುಗಿಯರ ಚುಡಾವಣೆ ನಿಲ್ಲಬೇಕಾದರೆ ಮೊಟ್ಟಮೊದಲು ಎಲ್ಲಾ ಭಾಷೆಯ ಚಲನಚಿತ್ರಗಳಲ್ಲಿ ಇಂತಹ ಚುಡಾವಣೆಯ ದೃಶ್ಯಗಳನ್ನು ಸೆನ್ಸಾರ್‌ನವರು ನಿರ್ದಾಕ್ಷಿಣ್ಯವಾಗಿ ಕಟ್ ಮಾಡಬೇಕು. ಇಂತಹ ಚುಡಾವಣೆ ದೃಶ್ಯಗಳಲ್ಲಿ ಅಭಿನಯಿಸುತ್ತಿದ್ದ ಹಳೆ ಕಾಲದ ಬಹಳಷ್ಟು ನಾಯಕ-ನಾಯಕಿಯರು ಇಂದು ಬಿಜೆಪಿ ಪಾರ್ಟಿಯಲ್ಲಿಯೇ ಇರುವುದು ಮಾತ್ರ ವಿಪರ್ಯಾಸವಾಗಿದೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿಗೆ ತನ್ನ ರಾಜ್ಯದ ರೋಡ್ ರೋಮಿಯೋಗಳನ್ನು ತಿದ್ದಬೇಕೆಂದು ಪ್ರಾಮಾಣಿಕ ಇಚ್ಛೆ ಇರುವುದೇ ಆಗಿದ್ದರೆ ಮೊದಲು ಇಂತಹ ಈವ್-ಟೀಸಿಂಗ್ ದೃಶ್ಯಗಳಿರುವ ಹಿಂದಿ ಚಲನಚಿತ್ರಗಳ ಪ್ರದರ್ಶನ ತಕ್ಷಣದಿಂದ ತನ್ನದೇ ರಾಜ್ಯದಲ್ಲಿ ಬ್ಯಾನ್ ಮಾಡಲಿ.

ಒಂದು ಪತ್ರ



-ವೀರಪ್ಪ ಡಿ.ಎಸ್, ಮಡಿಕೇರಿ

ಪ್ರತಾಪು ಸಿಮ್ಮನ ನಕಲಿ ದೇಶಭಕ್ತಿ



ಗುಂಡ್ಲುಪೇಟೆಯ ಒಂದು ಸೋಲಿಗಾಗಿ ಆಳಿಗೊಂದ ರಂತೆ ಕಲ್ಲು ಹೊಡೆಯಬೇಡಿ ಎಂದು ಮೈಸೂರು ಸಂಸದ ಪ್ರತಾಪ ಸಿಂಹ ಗೋಗ್ಗೊರೆದಿದ್ದಾರೆ. ಆದರೆ ಪ್ರತಾಪ ಸಿಂಹರೇ- ನೀವು ಕಳೆದ ತಿಂಗಳು ಗುರ್ಮೆಹರ್ ಕೌರಳ ವಿಷಯದಲ್ಲಿ ಅತ್ಯಂತ ಹೃದಯಹೀನ ಟ್ವೀಟ್ ಮಾಡಿ ಆ ಮುಗ್ಧ ಶಾಂತಿಪ್ರಿಯ ಹುಡುಗಿಯನ್ನು ದೇಶದ್ರೋಹಿ ದಾವೂದ್ ಇಬ್ರಾಹಿಂನಿಗೆ ಹೋಲಿಸಿ ಲೇವಡಿ ಮಾಡಿದ್ದು ಮರೆತು ಹೋಯಿತೆ? ಅದರ ಮರುದಿನ ಒಂದು ಇಂಗ್ಲಿಷ್ ಚಾನೆಲ್ಲಿನಲ್ಲಿ ನಿಮ್ಮನ್ನು ಪ್ಯಾನೆಲ್ ಚರ್ಚೆಗೆ ಕರೆದಿದ್ದಾಗ ನೀವು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತನಾಡಲಾಗದೇ ತಪ್ಪು ತಪ್ಪು ಇಂಗ್ಲಿಷ್‌ನಲ್ಲಿ ತೊದಲಿದ್ದು ಇಡೀ ಭಾರತ ನೋಡಿ ನಕ್ಕಿದೆ ಹಾಗೂ ದೇಶವಿಡೀ ಕನ್ನಡಿಗರ ಮರ್ಯಾದೆ ಆ ದಿನ ನಿಮ್ಮಿಂದ ಹರಾಜಾಗಿದೆ. ಕನ್ನಡ ಪತ್ರಿಕೆಯಲ್ಲಿ ಕೊರೆದಷ್ಟು ಸುಲಭವಲ್ಲ ಇಂಗ್ಲಿಷ್ ಟಿವಿ ಚರ್ಚೆಯಲ್ಲಿ ತರ್ಕಬದ್ಧವಾಗಿ ವಾದ-ವಿವಾದ ಮಾಡುವುದು.

ಹಿಂದಿನ ಮೂರು ವರ್ಷದಲ್ಲಿ ಸಂಸತ್ತಿನಲ್ಲಿ ನೀವು ಒಂದೇ ಒಂದು ಅಕ್ಷರ ಮಾತನಾಡಿಲ್ಲ, ಯಾವುದೇ ಪ್ರಶ್ನೆ ಕೇಳಿಲ್ಲ, ಕನ್ನಡಿಗರು ನಿಮ್ಮನ್ನು ಆರಿಸಿ ಕಳುಹಿಸಿರುವುದು ಲೋಕಸಭೆಯಲ್ಲಿ ಕೂತು ಬೆಂಚ್ ಬೆಚ್ಚ ಮಾಡಿ ಲಕ್ಷಗಟ್ಟಲೆ ಅಲವನ್ಸ್ ಜೇಬಿಗೆ ಇಳಿಸಲು ಅಲ್ಲ. ಸಂಸದನಾಗಿ ಕರ್ನಾಟಕಕ್ಕೆ ನಿಮ್ಮಿಂದ ಒಂದು ಪೈಸೆಯ ಕಾಣಿಕೆಯೂ ಇಲ್ಲ, ಇನ್ನಾದರೂ ನೀವು ಇಂಗ್ಲಿಷ್ ಮತ್ತು ಹಿಂದಿ ಕಲಿತು ಲೋಕಸಭೆಯಲ್ಲಿ ಕರ್ನಾಟಕದ ಸಮಸ್ಯೆಗಳ ಚರ್ಚೆ ಮಾಡಿ. ಇಲ್ಲದಿದ್ದರೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮೈಸೂರಿನಲ್ಲಿ ನಿಮಗೆ ಮುಖ ತೋರಿಸಲು ಸಾಧ್ಯವಿಲ್ಲ.


ಉಡುಪಿಯ ಆಸ್ಕರ್ ಫರ್ನಾಂಡಿಸ್ ರಾಜ್ಯಸಭೆಯಲ್ಲಿ ಕನ್ನಡ ಮತ್ತು ತುಳು ಭಾಷೆಯಲ್ಲಿ ಮಾತನಾಡಿ ನಾಡಿಗೆ ಹೆಮ್ಮೆಯ ಕೆಲಸ ಮಾಡಿದ್ದಾರೆ. ನೀವು ಯಾವಾಗ ಲೋಕಸಭೆಯಲ್ಲಿ ಕನ್ನಡದಲ್ಲಿ ಮಾತನಾಡುವುದು? ನಿಮ್ಮ ಸಂಸ್ಕೃತ-ಪ್ರಿಯ ಬಿಜೆಪಿ ಮತ್ತು ಆರೆಸ್ಸೆಸ್ ಸಂಘಿಗಳಿಗೆ ಕನ್ನಡ ಭಾಷೆ ಕಹಿ ಎನಿಸಿದರೆ ಆಶ್ಚರ್ಯವಿಲ್ಲ, ಯಾಕೆಂದರೆ ನಂಜನಗೂಡು ಉಪಚುನಾವಣೆಯಲ್ಲಿ ನಿಮ್ಮ ಬಿಜೆಪಿ ಪಕ್ಷದ ಪ್ರಚಾರದ ಪೋಸ್ಟರ್‌ಗಳು ದೊಡ್ಡ ಸಂಖ್ಯೆಯಲ್ಲಿ ಹಿಂದಿ ಭಾಷೆಯಲ್ಲಿ ಇದ್ದವು. ನಂಜನಗೂಡಿನಲ್ಲಿ ಬೆರಳೆಣಿಕೆಯಲ್ಲಿರುವ ಮಾರ್ವಾಡಿ ಮತ್ತು ಮರಾಠಿ ಭಾಷಿಕ ಬಟ್ಟೆ ವ್ಯಾಪಾರಿಗಳನ್ನು ಬಿಟ್ಟು ಬೇರೆ ಯಾರು ಹಿಂದಿ ಪೋಸ್ಟರ್ ಓದುತ್ತಾರೆ? ಬಿಜೆಪಿಯವರಿಗೆ ಕನ್ನಡಕ್ಕಿಂತ ಹಿಂದಿ ಹೆಚ್ಚು ಪ್ರಿಯ ಎಂಬುದಕ್ಕೆ ಅದುವೇ ಸಾಕ್ಷಿಯಾಗಿತ್ತು ಮತ್ತು ಆದರಿಂದ ಕೆಲವು ವೋಟುಗಳನ್ನು ಬಿಜೆಪಿ ಕಳೆದುಕೊಂಡಿತ್ತು.

ಪ್ರತಾಪ ಸಿಂಹರೇ ಇನ್ನಾದರೂ ಎಚ್ಚೆತ್ತುಕೊಳ್ಳಿ. ಅತ್ಯಂತ ಕೊಳಕು ಭಾಷೆಯಲ್ಲಿ ನಿಮ್ಮ ವಿರೋಧಿಗಳನ್ನು ಹೀಯಾಳಿಸಿ ಹಿಂದೂತ್ವವಾದಿ ಪತ್ರಿಕೆಗಳಲ್ಲಿ ಅಂಕಣ ಬರೆಯುವುದನ್ನು ನಿಲ್ಲಿಸಿ. ನಿಮಗೆ ನಿಜವಾಗಿ ದೇಶಭಕ್ತಿ ತೋರಿಸಬೇಕೇ? ಹಾಗಾದರೆ ದೇಶದ ಗಡಿಗೆ ಹೋಗಿ ನಮ್ಮ ವೀರ ಯೋಧರಿಗೆ ಸಹಾಯ ಮಾಡಿ ನಿಮ್ಮ ದೇಶಪ್ರೇಮ ಪ್ರದರ್ಶಿಸಿ, ಆಗ ಮಾತ್ರ ನಿಮ್ಮದು ನೈಜ ದೇಶಭಕ್ತಿ ಎಂದು ಒಪ್ಪಬಹುದು.

- ಜಿ.ರವಿಕಿರಣ, ಮೈಸೂರು

ಯಡ್ಡಿಗೆ ಸೆಡ್ಡು ಹೊಡೆದು ಗೆದ್ದ ಸಿದ್ದಣ್ಣ

ಕಾಂಗ್ರೆಸ್ ಮುಕ್ತ ಭಾರತ ಮಾಡಿ ತಮಗೆ ಅಧಿಕೃತ ಎದುರಾಳಿಗಳೇ ಇಲ್ಲದಂತೆ ನೋಡಿಕೊಳ್ಳುವ ಮೂಲಕ ದೇಶವನ್ನು ಮನುವಾದಿಗಳ ಪದತಲಕ್ಕೆ ಅರ್ಪಿಸಲು ಪಣ ತೊಟ್ಟ ಉತ್ತರದ ಕರಟಕದಮನಕ ಜೋಡಿಗಳು ಸದ್ಯಕ್ಕೆ ಡೆಲ್ಲಿ ಬದಲು ಕಾಂಗ್ರೆಸ್ಸಿನ ಹೆಡ್ ಕ್ವಾಟ್ರಸ್ ಆಗಿ ಬದಲಾದ ಕರ್ನಾಟಕ ರಾಜ್ಯದಲ್ಲಿ ಉಪಚುನಾವಣೆ ಹೆಸರಲ್ಲಿ ಅಲ್ಲೋಲಕಲ್ಲೋಲವೆಬ್ಬಿಸಲು ಸ್ಕೆಚ್ ಹಾಕಿದ್ದವು. ಎಲ್ಲೂ, ಕೂಡ ನೇರ ದಾರಿಯಲ್ಲಿ ಚುನಾವಣೆ ಗೆಲ್ಲದೇ ಕುಯುಕ್ತಿಯ ತಂತ್ರಗಳ ಮೂಲಕವೇ ಗೆಲ್ಲುತ್ತಿದ್ದ ಈ ಪಡೆ ಇತ್ತೀಚೆಗೆ



ಉತ್ತರ ಪ್ರದೇಶ ಮತ್ತು ಇತರ ಕಡೆ ನಡೆಸಿದ ಆಟಗಳು ಕರ್ನಾಟಕದಲ್ಲಿ ನಡೆಯಲೇ ಇಲ್ಲ. ಯಾವುದಕ್ಕೂ ಪ್ರಯೋಜನ ಬಾರದಂತ ಗೊಡ್ಡು ಹಸುವಂತಿರುವ ಎಸ್.ಎಂ.ಕೃಷ್ಣರನ್ನು ಕರೆತಂದು ಪ್ರಚಾರಕ್ಕೆ ಬಿಟ್ಟಿದ್ದಾಗಲೀ, ಸಂಪುಟ ವಿಸ್ತರಣೆ ಹೆಸರಲ್ಲಿ ತನ್ನ ಕೈಬಿಟ್ಟ ಒಂದೇ ಕಾರಣಕ್ಕಾಗಿ ಆಪ್ತಮಿತ್ರ ಸಿದ್ದರಾಮಯ್ಯ ಎದುರು ಸೇಡಿಗೆ ನಿಂತು ಅನವಶ್ಯಕವಾಗಿ ಜನರ ಕೋಟಿಗಟ್ಟಲೆ ತೆರಿಗೆ ಹಣ ಚುನಾವಣೆಗೆ ವ್ಯಯವಾಗುವಂತಹ ಮಹತ್ಕಾರ್ಯವನ್ನು ಮಾಡಿದಂತಹ ಶ್ರೀನಿವಾಸಪ್ರಸಾದಾಗಲೀ ಸಿದ್ದರಾಮಯ್ಯನಿಗೆ ಮಾಡಿದಂತಹ ದೋಖಾಗಳು ಒಂದೇ ಎರಡೇ? ಆಡಳಿತ ಪಕ್ಷದಲ್ಲಿ ಮಂತ್ರಿಯಾಗಿದ್ದುದಲ್ಲದೇ ಸಿದ್ದರಾಮಯ್ಯನ ಆಪ್ತ ಮಿತ್ರನಾಗಿದ್ದು ಕಾಂಗ್ರೆಸಿಗರ ಎಲ್ಲಾ ಗುಟ್ಟುಗಳನ್ನು ಬಲ್ಲ ಈ ಸೋಕಾಲ್ಡ್ ದಲಿತ ಮುತ್ಸದ್ದಿ ಪ್ರಸಾದ್ ಕೃಷ್ಣನಂತೆಯೇ ಸಿದ್ದರಾಮಯ್ಯರಿದ್ದಂತಹ ಈ ಸಂದಿಗ್ಧ ಪರಿಸ್ಥಿತಿಯಲ್ಲಿಯೇ ಉಂಡ ಮನೆಗೆ ಕನ್ನಹಾಕುವಂತಹ ಕೆಲಸಕ್ಕೆ ಕೈಹಾಕಿದ್ದುದು ವಾಕರಿಕೆ ತರಿಸುವಂತಿತ್ತು. ಉಪಚುನಾವಣೆಯಲ್ಲಿ ಕ್ಷೇತ್ರದ ಮತದಾರರು ಇವರಿಗೆಲ್ಲ ತಕ್ಕ ಉತ್ತರವನ್ನೇ ಕೊಟ್ಟು ಮನೆಗೆ ಕಳುಹಿಸಿದ್ದು ಖುಷಿ ಕೊಡುವಂತಹ ವಿಚಾರ.

ಸಂಸದನಾಗಿಯೂ ತನ್ನ ಹೊಲಸು ಬುದ್ಧಿಯನ್ನು ಬಿಡದ ಪ್ರತಾಪ ಸಿಮ್ಮನ ಕೊಳಕು ಹೇಳಿಕೆಗಳಾಗಲೀ, ಪಕ್ಷದಲ್ಲಿದ್ದೇ ಸಿದ್ದರಾಮಯ್ಯನಿಗೆ ಓಪನ್ ಸುಪಾರಿ ನೀಡುವ ಮಂಗಳೂರಿನ ಜನ್ನು ಪೂಜಾರಿಯಾಗಲೀ ಸಿದ್ದರಾಮಯ್ಯನ ಪ್ರತಿಷ್ಠೆಯನ್ನು ಮತ್ತಷ್ಟು ಹೆಚ್ಚಿಸಿದರೇ (ಇವರೆಲ್ಲರ ಬಾಯ್ ಬಂದ್ ಮಾಡುವ ಮೂಲಕ) ಹೊರತು ಏನೂ ಮಾಡಿಕೊಳ್ಳಲಾಗಲಿಲ್ಲ.

ಯಡ್ಡಿಯಂತೂ ತಾನೇ ಮುಂದಿನ ಮುಖ್ಯಮಂತ್ರಿ ಯೆಂಬ ಭ್ರಮೆಯಲ್ಲೇ ಜನರಲ್ಲಿ ಸುಳ್ಳು ಭರವಸೆಗಳನ್ನು ಬಿತ್ತುತ್ತಾ ಈ ಚುನಾವಣೆ ಗೆಲ್ಲಿಸುವ ಮೂಲಕ ತನ್ನ ತಾಕತ್ತನ್ನು ಕೇಂದ್ರದಲ್ಲಿರುವ ಕ-ದ ಜೋಡಿಗೆ ತೋರಿಸುವ ಹುಮ್ಮಸ್ಸಿನಲ್ಲಿ ಬರೀ ಒದ್ದಾಡಿದ್ದೇ ಬಂತು. ಒಟ್ಟಾರೆ ಇಲ್ಲಿ ಸಿದ್ದು ಮಿಂಚದರೇ ಹೊರತು ವಿರೋಧ ಪಕ್ಷದವರಿಗಾಗಲೀ, ಕಾಂಗ್ರೆಸ್‌ನ ಮನೆಮುರುಕ ಪಾತ್ರಧಾರಿ ಕೃಷ್ಣ- ಶ್ರೀನಿವಾಸ ರಾಗಲೀ, ಮಂಗಳೂರಿನ ಜನ್ನು ಪೂಜಾರಿಯಾಗಲೀ ಏನೂ ಮಾಡಿಕೊಳ್ಳಲಾಗಿಲ್ಲ.

-ಓದುಗ, ಮಂಗಳೂರು

ಯಡ್ಡಿಗೆ ಬೆಂಡೆತ್ತಿದರಂತೆ ಅಮಿತ್ ಶಾ

ಮೊನ್ನೆ ನಂಜನಗೂಡು ಮತ್ತು ಗುಂಡ್ಲುಪೇಟೆಯಲ್ಲಿ ಬಿಜೆಪಿ ಸೋತ ನಂತರ ಒಡಿಶಾದಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ವೇಳೆ ಬಿಜೆಪಿ ಅಧ್ಯಕ್ಷ ಅಮಿತ್ ಶಾ ಮೈಸೂರಿನ ಸಂಸದ ಪ್ರತಾಮ ಸಿಮ್ಮನಿಗೆ ಹಾಗೂ ರಾಜ್ಯಾಧ್ಯಕ್ಷ ಯಡಿಯೂರಪ್ಪನವರಿಗೆ ಚೆನ್ನಾಗಿ ಉಗಿದನಂತೆ. "ನಾನು ನಿಮಗೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಗೋವು ಕಳ್ಳತನದ ನೆಪದಲ್ಲಿ ಮುಸ್ಲಿಮರಿಗೆ ಬಡಿಯಬೇಕು, ಮತಾಂತರದ ನೆಪದಲ್ಲಿ ಕ್ರೈಸ್ತರಿಗೆ ತದುಕಬೇಕು ಹಾಗೂ ಲವ್ ಜಿಹಾದ್ ನೆಪದಲ್ಲಿ ಚಾಮುಂಡಿ ಬೆಟ್ಟದಲ್ಲಿಯೇ ಹುಡುಗ-ಹುಡುಗಿಯರ ಜೋಡಿಗೆ ಹಲ್ಲೆ ಮಾಡಬೇಕು, ಕೊನೆಗೆ ಪಂಚಾಯತ್ ಮತ್ತು ನಗರ ಸಭೆಗಳಲ್ಲಿ ವಂದೇಮಾತರಂ ಹಾಡುವ ನಾಟಕ ಮಾಡಿ ವಿವಾದ ಎಬ್ಬಿಸಬೇಕು ಎಂದು ಸ್ಪಷ್ಟವಾಗಿ ಹೇಳಿದ್ದರೂ ಆ ರೀತಿ ಮಾಡದೇ ಕೇವಲ ಬಾಯಿಮಾತಿನ ಪ್ರಚಾರ ಮಾಡಿ ಸೋತಿದ್ದೀರಿ" ಎಂದು ಅಮಿತ್ ಶಾ ಯಡಿಯೂರಪ್ಪ ಹಾಗೂ ಪೇಪರ್ ತಿಮ್ಮನನ್ನು ತರಾಟೆಗೆ ತೆಗೆದುಕೊಂಡನಂತೆ.


"ಗೋವು ರಾಜಕೀಯ, ಮತಾಂತರದ ಬೊಬ್ಬೆ, ಲವ್ ಜಿಹಾದ್ ಗಲಾಟೆ, ವಂದೇ ಮಾತರಂ ವಿವಾದ, ಇವನ್ನೆಲ್ಲಾ ಮಾಡುವುದು ಹೇಗೆ ಎಂದು ನಿಮ್ಮ ಕರಾವಳಿ ಜಿಲ್ಲೆಗಳ ಸಂಘ ಪರಿವಾರದವರನ್ನು ನೋಡಿ ಸ್ವಲ್ಪ ಕಲಿಯಿರಿ" ಎಂದು ಅಮಿತ್ ಶಾ ಅವರಿಬ್ಬರಿಗೆ ಉಗಿದು ಹೇಳಿದ್ದನಂತೆ.

"ಇನ್ನು 2018 ಮಾರ್ಚ್‌ನಲ್ಲಿ ನಡೆಯಲಿರುವ ಕರ್ನಾಟಕ ವಿಧಾನ ಸಭಾ ಚುನಾವಣೆಗೆ ಈಗಿನಿಂದಲೇ ತಯಾರು ಮಾಡಿಕೊಳ್ಳಿ, ಹಣ ಎಷ್ಟೇ ಖರ್ಚಾಗಲಿ ನಾನು ದಿಲ್ಲಿಯಿಂದ ಕಳಿಸುತ್ತೇನೆ. ಈಗಿನಿಂದಲೇ ನೀವು ಗೋವು-ಲವ್ ಜಿಹಾದ್/ ಮತಾಂತರ-ವಂದೇಮಾತರಂ ಎಂದು ಇಡೀ ರಾಜ್ಯದಲ್ಲಿ ಗಲಾಟೆ ಎಬ್ಬಿಸುತ್ತಾ ಇರಲು ವ್ಯವಸ್ಥೆ ಮಾಡಿ" ಎಂದು ಅಮಿತ್ ಶಾ ಕರ್ನಾಟಕದ ಬಿಜೆಪಿಯವರಿಗೆ ಆದೇಶ ಕೊಟ್ಟನಂತೆ. ಸಣ್ಣಪುಟ್ಟ ಕಾರಣಕ್ಕೆ ದೊಡ್ಡ ದೊಡ್ಡ ಕೋಮು ಗಲಭೆ ಹೇಗೆ ಹಬ್ಬಿಸುವುದು ಎಂದು ಗುಜರಾತಿಗೆ ಹೋಗಿ ಕಲಿತು ಬರಲು ಯಡ್ಡಿ, ಶೋಭಾ ಮತ್ತು ಪೇಪರ್ ತಿಮ್ಮನಿಗೆ ಪಕ್ಕಾ ಅಹಿಂಸಾವಾದಿ ಜೈನ ಅಮಿತ್ ಶಾ ಸಲಹೆ ಕೊಟ್ಟನಂತೆ. "ಗುಜರಾತಿ- ಮಾರ್ವಾಡಿ ಜೈನರಂತೆ ಕರ್ನಾಟಕದ ಲಿಂಗಾಯತರೂ ಶುದ್ಧ ಶಾಕಾಹಾರಿಗಳು ನಿಜ. ಆದರೆ ಗುಜರಾತಿ ಮಾರ್ವಾಡಿ ಜೈನರು ಮಾಡುವಷ್ಟು 'ಆರ್ಥಿಕ ಅಪರಾಧ' ಜಗತ್ತಿನಲ್ಲಿ ಬೇರೆ ಯಾರೂ ಮಾಡುವುದಿಲ್ಲ. ಆ ಹಣದಿಂದ ಕೆಳಜಾತಿಯ ಕ್ರಿಮಿನಲ್ಲುಗಳನ್ನು ಸಾಕಿಕೊಂಡು ಹಿಂಸೆ ಪ್ರಚೋದಿಸುವ ಕೆಲಸ ನಾವು ಅಹಿಂಸಾವಾದಿ ಜೈನರು ಅತ್ಯಂತ ದಕ್ಷತೆಯಿಂದ ಮಾಡುತ್ತೇವೆ. ನೀವು ಲಿಂಗಾಯತರು ಸಹ ಅಹಿಂಸಾವಾದಿ ಸಸ್ಯಾಹಾರಿಗಳಾಗಿದ್ದುಕೊಂಡೇ ಗುಜರಾತಿ-ಮಾರ್ವಾಡಿ ಜೈನರಂತೆ ಕೆಳಜಾತಿಯವರು ಹಿಂಸಾತ್ಮಕ ಕೆಲಸ ಮಾಡುವಂತೆ ಪ್ರಚೋದಿಸಲು ಪ್ರಯತ್ನಿಸಬೇಕು, ನಾವು ಜೈನರೂ



ಲಿಂಗಾಯತರಂತೆಯೇ ಹಿಂದೂಗಳಲ್ಲವೇ ಅಲ್ಲ. ಆದರೂ ಇಂದು ಎಲ್ಲಾ ಹಿಂದೂ ಸಂಘಟನೆಗಳನ್ನು ನಾವು ನಮ್ಮ ಹಿಡಿತದಲ್ಲಿ ಇಟ್ಟುಕೊಂಡಿಲ್ಲವೇ! ಹಾಗೆಯೇ ನೀವು ಲಿಂಗಾಯತರು ಸಹ ಹಿಂದೂ ಸಂಘಟನೆಗಳ ಮೇಲೆ ಹಿಡಿತ ಸಾಧಿಸಿ ಕ್ರಿಮಿನಲ್ಲುಗಳನ್ನು ಸಾಕಿಕೊಂಡು ಮುಸ್ಲಿಮರ ವಿರುದ್ಧ ಪ್ರಚೋದಿಸಿ 2018ರ ಚುನಾವಣೆಯಲ್ಲಿ ಕರ್ನಾಟಕದಲ್ಲಿ 200 ಸೀಟಾದರೂ ಗೆದ್ದು ತೋರಿಸಬೇಕು" -ಎಂದು ನಕಲಿ ಎನ್‌ಕೌಂಟರ್ ಸ್ಪೆಷಾಲಿಸ್ಟ್ ಅಮಿತ್ ಶಾ ಯಡ್ಡಿ-ತಿಮ್ಮರಿಗೆ ಹೇಳಿದನಂತೆ.

ಲಿಂಗಾಯತರು ಈಗೀಗ ಬಿಜೆಪಿಯಿಂದ ದೂರ ಸರಿಯುತ್ತಿರುವುದರಿಂದ ಅವರನ್ನು ಮತ್ತೆ ತಮ್ಮೆಡೆ ಸೆಳೆಯಲು ಉತ್ತರ ಕರ್ನಾಟಕದಲ್ಲಿಯ ಯಾವುದಾದರೂ ಪುರಾತನ ಮಸೀದಿ ಅಥವಾ ದರ್ಗಾದ ಇತಿಹಾಸ ಕೆದುಕಿ ಅದು ಮೂಲದಲ್ಲಿ ಲಿಂಗಾಯತರ ಶಿವಾಲಯವಾಗಿತ್ತು ಅದನ್ನು ಬಹಮನಿ ಸುಲ್ತಾನರು ಬಲಾತ್ಕಾರದಿಂದ ಮಸೀದಿಯಾಗಿ



ಪರಿವರ್ತಿಸಿದರು ಎಂದು ಹೊಸದಾಗಿ ವಿವಾದ ಎಬ್ಬಿ
ಎಂದು ಅಮಿತ್ ಶಾ ಯಡ್ಡಿ-ತಿಮ್ಮರಿಗೆ ಕಾರ್ಯ
ಕೊಟ್ಟನಂತೆ.

ಹಾಗೆಯೇ ತಾನು ಕಳುಹಿಸಿದ್ದ 50 ಕೋಟಿ
ನಂಜನಗೂಡು ಮತ್ತು ಗುಂಡ್ಲುಪೇಟೆಯಲ್ಲಿ ಹೇಗೆ ಖ
ಮಾಡಲಾಯಿತು ಎಂಬುದರ ಲೆಕ್ಕ ಕಳುಹಿಸಿಕೊಡು
ಸಹ ಅಮಿತ್ ಶಾ ಶೋಭಕ್ಕಳ ಹೊಸ ವಜ್ರದ
ಕಡೆ ನೋಡುತ್ತಾ ಯಡಿಯೂರಪ್ಪಗೆ ಆದೇಶಿದ
ಅಮಿತ್ ಶಾಗೆ ಸಂಶಯವೇನೆಂದರೆ ಕರ್ನಾಟಕದ ಬ
ನಾಯಕರು ಆ 50 ಕೋಟಿ ಹಣವನ್ನು ಚುನಾ
ಖರ್ಚು ಮಾಡದೇ ತಾವೇ ತಿಂದು ಹಾಕಿದ್ದ
ಉಪಚುನಾವಣೆಯಲ್ಲಿ ಸೋಲು ಆಗಿರಬಹ
ಎಂಬುದಂತೆ. ಉತ್ತರ ಪ್ರದೇಶದ ಮತದಾರರನ್ನು ಹಣ
ಖರೀದಿಸಿದಂತೆ ಕರ್ನಾಟಕದ ಮತದಾರರನ್ನೂ ಹಣ
ಸುಲಭವಾಗಿ ಖರೀದಿಸಬಹುದಿತ್ತು ಎಂದು ಅಮಿತ
ಭಾವಿಸಿದಂತಿದೆ.


ಹಾಗಾಗಿ ಕನ್ನಡಿಗರೇ, 2018 ವ
ಚುನಾವಣೆಯವರೆಗೆ ಅಮಿತ್ ಶಾ ಪ್ರಾಯೋಜಿತ
ಕೋಮು ಗಲಭೆಗೆ ರೆಡಿಯಾಗಿರಿ. ಜತೆಗೆ ನಿಮ್ಮ
ಯಾವುದಾದರೂ ಅತ್ಯಂತ ಹಳೆಯ ಮಸೀದಿ
ದರ್ಗಾ ಇದ್ದರೆ ಅದರ ಫೋಟೋ ಮತ್ತು ತಿರು
ಇತಿಹಾಸ ಬರೆದು ಅಮಿತ್ ಶಾಗೆ ಕಳುಹಿಸಲು ಮ
ಬೇಡಿ. ಅದು ಮೂಲದಲ್ಲಿ ಲಿಂಗಾಯತ/ಜೈನ/ಹಿಂದ
ಪವಿತ್ರ ಸ್ಥಾನವಾಗಿತ್ತು ಎಂದು ಗುಲ್ಲೆಬ್ಬಿಸಲು ಸಹ
ವಾಗಬಹುದು. ಒಳ್ಳೆಯ ಫೋಟೋ ಮತ್ತು ಕರಾ
ತಿರುಚಿದ ಇತಿಹಾಸ ಕಳುಹಿಸಿದವರಿಗೆ ಬಿಜೆಪಿ
ಬಹುಮಾನ ಉಂಟು. ಸದ್ಯದಲ್ಲಿಯೇ ಬಾಬಾ ಬು
ಗಿರಿ (ಬುಡ್ಡಣ್ಣ ಗವಿ?) ವಿವಾದ ಮತ್ತೆ ಭುಗಿಲೇಳಬ
ಹುಷಾರಾಗಿರಿ.

-ಅಭಿಷೇಕ್ ಪಡಿವಾಳ್.

ನಂಜನಗೂಡಿನ ಪ್ರಬುದ್ಧ ಮತದಾರ

ಜನಾರ್ದನ ಪೂಜಾರಿಯವರು ನಂಜನಗೂ
ಕಾಂಗ್ರೆಸ್ ಸೋಲುವುದು ಖಚಿತ ಎಂದು ಉಪಚುನಾ
ಮುಂಚೆ ಪ್ರೆಸ್ ಮೀಟ್ ಕರೆದು ಭಯಂಕರ
ನುಡಿದಿದ್ದರು. ಆದರೆ ಅವರ ಭವಿಷ್ಯವಾಣಿ ಸುಳ್ಳಾ
ಇನ್ನು ಬೆಂಗಳೂರಿನ ಪೇಡ್ ಮಿಡಿಯಾವೂ ಮೂರ್ಖ
ಹರಡಿ ಬಿಜೆಪಿ ಅಭ್ಯರ್ಥಿಗೆ ಸಹಾಯ ಮಾಡಲು ಶ
ಮಾಡಿದವು. ಇತ್ತೀಚೆಗೆ ನಂಜನಗೂಡಿನ ವಿಶ್ವ
ಶ್ರೀಕಂಠೇಶ್ವರ ರಥೋತ್ಸವದ ವೇಳೆ ಸಂಭವಿಸಿದ
ಅವಘಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನ
ಕಾದಿರುವ ಭಯಂಕರ ಕಂಟಕದ ಮುನ್ಸೂಚನೆ
ಟಿವಿ ಜ್ಯೋತಿಷಿಗಳು ಅರಚಿದರು. ಇದಕ್ಕೆ ಟಿವಿ ಜ್ಯೋ
ಗಳಿಗೆ ಬಿಜೆಪಿಯಿಂದ ದೊಡ್ಡ ಮೊತ್ತ ಸಂದಾಯವಾ
ಗುಟ್ಟಾಗಿ ಉಳಿದಿಲ್ಲ.

ಕಳೆದ ವರ್ಷ ಮೈಸೂರು ದಸರೆ ಮೆರವ
ಸಮಯದಲ್ಲಿ ಆನೆಯ ಮೇಲಿನ ಚಾಮುಂಡೇಶ್ವ
ಅಂಬಾರಿ ಎಡಗಡೆಗೆ ವಾಲಿಕೊಂಡಿದ್ದಕ್ಕೂ ಕಾಲ್ಪನಿಕ
ಹಚ್ಚಿ ಸಿದ್ದರಾಮಯ್ಯ ಸರಕಾರಕ್ಕೆ ಆದೂ ಭಾರಿ ಕ
ತರಲಿದೆ ಎಂದು ಸಂಘಿ ಪೇಡ್ ಮೀಡಿಯಾ ಪ್ರ
ಮಾಡಿತ್ತು. ಕಳೆದ ತಿಂಗಳು ಕಾಸರಗೋಡಿನ ಸಭೆಯೊಂ
ಕಾಗೆಯೊಂದು ಸಿದ್ದರಾಮಯ್ಯ ಮೇಲೆ ಹಿಕ್ಕೆ ಹಾಕಿ
ಟಿವಿಯ ಪೇಡ್ ಜ್ಯೋತಿಷಿಗಳು ವಿಪರೀತ ಅರ್ಥ
ದೊಡ್ಡ ದೊಡ್ಡ ಪ್ಯಾನೆಲ್ ಚರ್ಚೆ ನಡೆಸಿ, ಕಾಂಗ್ರೆಸ್ಸಿ
ಭಯ ಮೂಡಿಸಲು ಪ್ರಯತ್ನಿಸಿದರು. (ಮನುಷ್ಯ ಬಯ
ಕಕ್ಕಸು ಮಾಡುವಾಗ ಅವನ ಹಿಕ್ಕೆ ಎರೆಹುಳು,
ಕ್ರಿಮಿ ಕೀಟಗಳ ಮೇಲೆ ಬಿದ್ದಾಗ ಅವು ಸಹ
ಮೂರ್ಖ ಟಿವಿ ಜ್ಯೋತಿಷಿಗಳೊಟ್ಟಿಗೆ ಪ್ಯಾ
ಚರ್ಚೆ ನಡೆಸಿದರೆ ದೃಶ್ಯ ಹೇಗಿರಬಹು
ಊಹಿಸಿ!)



ಇಂತಹ ಮೌಢ್ಯಗಳ ಬಲದಿಂ
ಭಾರತೀಯ ಸಮಾಜವನ್ನು ಮೂರು
ವರ್ಷದಿಂದ ಆಳಿದ ವೈದಿಕರು ಈ
ಅದೇ ಕುತಂತ್ರವನ್ನು ಮುಂದು

ವಿ.ಸೂ. : ನಿಮ್ಮ ಅನಿಸಿಕೆಗಳ
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.
ಪ್ರತಿಕ್ರಿಯೆಗಳನ್ನು 9980331427 ನಂಬರ್
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹು

ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ Bengaluru

■ ಕೆ.ಫಣಿರಾಜ್ 9

ಯೌವನದ ಕಾತುರ-ಬದುಕಿನ ಭಾರ


ಮೆಲೋ ಮಡ್ (2016)
ನಿರ್ದೇಶನ: ರೆನಾರ್ಸ್ ವಿಂಬ
ದೇಶ: ಲಾಟ್ವಿಯ

ಸಿನಿಮಾ ಶಾಲೆಗಳಲ್ಲಿ ಕಲಿತು, ಹಲವು ಸಿನಿಮಾಗಳಲ್ಲಿ ಸಹಾಯಕನಾಗಿ ಕಸುಬು ಕಲಿತಿರುವ 42 ವರ್ಷದ ವಿಂಬನ ಮೊದಲ ಕಥಾಚಿತ್ರವಿದು. ಖ್ಯಾತ ಬರ್ಲಿನ್ ಚಿತ್ರೋತ್ಸವದಲ್ಲಿ, ಯೌವನಿಗರ ವಸ್ತುವನ್ನುಳ್ಳ ಸಿನಿಮಾಗಳಿಗೆ ಒಂದು ಪ್ರತ್ಯೇಕ ಸ್ಪರ್ಧಾ ವಿಭಾಗವಿದ್ದು, 2016ರಲ್ಲಿ ಆ ವಿಭಾಗದ ಪ್ರಶಸ್ತಿಯನ್ನು ಈ ಚಿತ್ರ ದಕ್ಕಿಸಿಕೊಂಡಿದೆ.

'ಅಲ್ಬಾ'ದ ಹಾಗೆ 'ಬೆಳೆಯುವವರ ತವಕತಲ್ಲಣ' (ಕಮಿಂಗ್ ಆಫ್ ದಿ ಏಜ್) ಎಂಬ ಪರಿಚಿತ ಚಿತ್ರ ವಿಭಾಗಕ್ಕೆ ಇದನ್ನು ಸೇರಿಸಬಹುದಾದರೂ, ಈ ಸಿನಿಮಾಗಳು ಅದಕ್ಕಿಂತ ಹೆಚ್ಚಿನ ಗಮನ ಬೇಡುತ್ತವೆ; ವಸ್ತುವಿನ ದೃಷ್ಟಿಯಿಂದ ಹಲವು ಬಗೆಯ ಪರಿಚಿತ ಸಿನಿಮಾ ವಿಭಾಗೀಕರಣಕ್ಕೆ ಸೇರಬಹುದಾಗಿದ್ದರೂ, ಹೊಸ ಬಗೆಯ ನಿರೂಪಣಾ ವಿಧಾನಗಳ ಮೂಲಕ ಇತ್ತೀಚಿನ ಹಲವು ಸಿನಿಮಾಗಳು 'ಸೂಕ್ಷ್ಮ ಸಂವೇದನೆಯ ಸಿನಿಮಾ' (ಫಿಲ್ಮ್ ಆಫ್ ಸೆನ್ಸಿಬಿಲಿಟಿ) ಎಂಬ ಕಣ್ನೋಟವನ್ನು ಬೇಡುತ್ತಿವೆ. 'ಮೆಲೋ ಮಡ್' ('ಅಲ್ಬಾ', 'ಮಾರೋಸ್', 'ರೋಡ್ ಟು ಮಂಡಲಾಯ್'ಗಳಂತೆ) ಈ ಬಗೆಯ ಚಿತ್ರವಾಗಿದೆ.

ಅಂತರಾಷ್ಟ್ರೀಯ ಪ್ರದರ್ಶನಕ್ಕಾಗಿ ಈ ಸಿನಿಮಾಕ್ಕೆ ನೀಡಲಾಗಿರುವ ಇಂಗ್ಲಿಷ್ ಶಿರೋನಾಮೆ ಮೂಲ ಲಾಟ್ವಿಯ ಭಾಷೆಯ ಶಿರೋನಾಮೆಯ ('ಎಸ್‌ಎಸ್ಮು ಸಿಯಟ್' = 'ನಾನು ಇಲ್ಲಿ ಇದ್ದೇನೆ') ದನಿಶಕ್ತಿಯನ್ನು ಹೊಂದಿಲ್ಲ.

ಸಿನಿಮಾದ ಕಥಾಸಾರಾಂಶ

ಲಾಟ್ವಿಯಾದ ಜಲ-ಸಸ್ಯ ಸಿರಿವಂತ ಹಳ್ಳಿಯೊಂದರಲ್ಲಿ 17ರ ಹರೆಯದ ರಾಯ, ತನ್ನ ತಮ್ಮ ರಾಬಿ ಹಾಗು ಕಾಯಿಲೆ ಹಿಡಿದಿರುವ ಅಜ್ಜಿಯ ಜೊತೆ ಪುಟ್ಟ ಕಟ್ಟಿಗೆ ಮನೆಯಲ್ಲಿ ಬದುಕುತ್ತಿದ್ದಾಳೆ. ತಾಯಿ ತುಂಬಾ ವರ್ಷಗಳ ಹಿಂದೆ ಸಂಸಾರ ತೊರೆದು, ಸ್ವಂತದ ಬದುಕು ಕಂಡುಕೊಳ್ಳಲು ಲಂಡನ್ನಿಗೆ ಹೋಗಿಬಿಟ್ಟಿದ್ದಾಳೆ. ತಂದೆ ತೀರಿದ ನಂತರ, ಕುಟುಂಬ ತೀವ್ರ ಹೊಟ್ಟೆಬಟ್ಟೆಯ ಸಂಕಟಕ್ಕೆ ಸಿಲುಕಿದೆ. ಅಜ್ಜಿಗೆ ಬರುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ಪುಡಿ ಪಿಂಚಣಿಯೇ ಹೊಟ್ಟೆಗಾಧಾರ. ಅಜ್ಜಿ ಬಲು ಪಿರಿಪಿರಿಯ ಹೆಂಗಸು-ಅವಳ ಜೊತೆ ಬದುಕಲು ರಾಯಳಿಗೂ, ಅವಳ ತಮ್ಮನಿಗೂ ಇಷ್ಟವೇ ಇಲ್ಲ; ಆದರೆ ಮನೆ ತೊರೆದರೆ, ಇಬ್ಬರನ್ನೂ ನಿರ್ಗತಿಕರ ಅನಾಥಾಲಯಕ್ಕೆ ಸೇರಿಸಬೇಕಾಗುತ್ತದೆ ಎಂಬ ಎಚ್ಚರವನ್ನು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ನೀಡಿರುತ್ತಾಳೆ. ಪುಟ್ಟಗೂಡಿನ ಸುತ್ತ ಇರುವ ಹಣ್ಣಿನ ಮರಗಳ ವಿಸ್ತಾರವಾದ ಆಸ್ತಿ ರಾಯಳ ಕುಟುಂಬದ್ದಾಗಿರುತ್ತದೆ. ಆದರೆ, ಹಣಕಾಸಿನ ಇಕ್ಕಟ್ಟು ಎದುರಾಗಿ, ಅಜ್ಜಿ ಅದನ್ನು ಕಂಪೆನಿಯೊಂದಕ್ಕೆ ಮಾರಿಬಿಟ್ಟಿರುತ್ತಾಳೆ. ಆ ಕಾನನದಲ್ಲಿ ಬಾಲ್ಯವನ್ನು ಕಳೆದ ರಾಯಳಿಗೆ, ಕಂಪೆನಿಯವರು ಮರಗಳನ್ನುರುಳಿಸುವುದು ಅಗಾಧ ಆಕ್ರೋಶವನ್ನುಂಟುಮಾಡುತ್ತದೆ. ಅವಳು, ಅವಳ ತಮ್ಮ ಮರಗಳನ್ನುರುಳಿಸಲು ಬಂದ ಯಂತ್ರಗಳ ಮೇಲೆ ಕಲ್ಲಿಂದ ದಾಳಿ ಮಾಡಿ ಪೊಲೀಸರ ಎಚ್ಚರಕ್ಕೂ ಗುರಿಯಾಗುತ್ತಾರೆ. ಇಂತು ಬದುಕಿನ ತಳಮಳಕ್ಕೆ ಈಡಾದ ರಾಯ ಹಾಗು ಅವಳ ತಮ್ಮನಿಗೆ ಸರಿಕಟ್ಟು ಶಾಲೆಗೆ ಹೋಗಿ ವಿದ್ಯಾಭ್ಯಾಸ ಪೂರೈಸುವ ಯಾವ ಹಂಬಲವೂ ಇರುವುದಿಲ್ಲ. ಯೌವನಕ್ಕೆ ಕಾಲಿಡುತ್ತಿರುವ ರಾಯಳಿಗೆ, ಅವಳ ಶಾಲೆಯ ತರುಣ ಇಂಗ್ಲಿಷು ಮೇಷ್ಟ್ರ ಮೇಲೆ ಆಕರ್ಷಣೆ; ಬುದ್ಧಿಮತ್ತೆಯಲ್ಲಿ ಚುರುಕಾಗಿದ್ದರೂ, ಅಭ್ಯಾಸದ ಕಡೆ ಇವಳಿಗೆ ಗಮನವಿಲ್ಲ ಎಂಬುದು ಅವನ ದೂರು. ಇಂತಿರಲು, ಅಕ್ಕ-ತಮ್ಮಂದಿರು ಒಂದು ದಿನ ಶಾಲೆಯಿಂದ ಮನೆಗೆ ಮರಳಿದಾಗ ಅಜ್ಜಿ ತೀರಿಕೊಂಡುಬಿಟ್ಟಿರುತ್ತದೆ.



ಇದೀಗ ರಾಯ, ಅಜ್ಜಿಯನ್ನು ದಫನ್ ಮಾಡಿ, ಅವಳ ಮರಣವನ್ನು ಮುಚ್ಚಿಡುವ ತಂತ್ರ ಹೂಡುತ್ತಾಳೆ; ಹಾಗಲ್ಲದೇ ಹೋದರೆ, ಅಜ್ಜಿಗೆ ದೊರಕುವ ಪುಡಿ ಪಿಂಚಣಿಯಿಂದಲೂ ವಂಚಿತವಾಗುವುದು ಅವಳಿಗೆ ಸರಿಕಾಣುವುದಿಲ್ಲ. ಈ ಘಟನೆಯ ನಂತರ, ಅವಳು ಸಂಸಾರದ ಭಾರ ಹೊರುತ್ತಾಳೆ; ಇನ್ನು ಮುಂದೆ ತಾವಿಬ್ಬರೂ ಮುಚ್ಚಿಕೊಂಡು ಶಿಸ್ತಿನಿಂದ ಶಾಲಾಭ್ಯಾಸ ಮಾಡಬೇಕು ಎಂದು ತಮ್ಮನಿಗೆ ಬುದ್ಧಿ ಹೇಳುತ್ತಾಳೆ. ಇದೇ ವೇಳೆಗೆ, ಲಾಟ್ವಿಯಾದ ಹೈಸ್ಕೂಲು ಮಕ್ಕಳಿಗೆ ಇಂಗ್ಲಿಷ್ ಭಾಷೆ ಪ್ರಾವೀಣ್ಯದ ಸ್ಪರ್ಧೆಯೊಂದು ಆಯೋಜನೆಯಾಗಿದ್ದು, ಪ್ರತಿ ಶಾಲೆಯಿಂದ ಒಬ್ಬ ವಿದ್ಯಾರ್ಥಿ ಲಂಡನ್ನಿನಲ್ಲಿ ನಡೆಯುವ ಅಂತಿಮ ಸ್ಪರ್ಧೆಗೆ ಅರ್ಹತೆ ಪಡೆಯಬಹುದಾಗಿರುತ್ತದೆ. ಈ ಸ್ಪರ್ಧೆ ಗೆದ್ದು ಲಂಡನ್ನಿಗೆ ಹೋದರೆ, ತನ್ನ ಅಮ್ಮನನ್ನು ಹುಡುಕಿ, ಸಂಸಾರವನ್ನು ಮತ್ತೆ ಕಟ್ಟಿಕೊಳ್ಳಬಹುದೆಂಬ ಆಶೆಯಿಂದ, ರಾಯ ಹಲ್ಲುಕಚ್ಚಿ ಸ್ಪರ್ಧೆಗಿಳಿಯುತ್ತಾಳೆ-ತರುಣ ಇಂಗ್ಲಿಷ್ ಮಾಸ್ತರ್, ಅವಳಿಗೆ ಆಸರೆಯಾಗಿ ನಿಲ್ಲುತ್ತಾನೆ. ಈ ವಿದ್ಯಮಾನದಲ್ಲಿ ಅವರಿಬ್ಬರೂ ದೈಹಿಕ-ಮಾನಸಿಕ ಸಾಮೀಪ್ಯ ಪಡೆಯುತ್ತಾರೆ; ರಾಯಳಿಗೆ ಯೌವನದ ತವಕಗಳ ಅರಳುವಿಕೆಯ ಜೊತೆ ಮಾನಸಿಕ ಆಧಾರವೂ ಸಿಕ್ಕಂತಾಗಿ, ಅರಳತೊಡಗುತ್ತಾಳೆ. ಸ್ಪರ್ಧೆಯಲ್ಲಿ ಗೆದ್ದು, ಲಂಡನ್ನಿಗೆ ಹೋಗಲು ಟಿಕೆಟು, ಸಹಾಯಧನ ಎಲ್ಲವನ್ನು ಪಡೆಯುತ್ತಾಳೆ. ಅವಳು ಪ್ರೌಢಶಾಲೆಯಿಂದ ಉತ್ತೀರ್ಣಳಾದಾಗ ನಡೆಯುವ ಸಮಾರಂಭದಲ್ಲೂ ಅವಳ ಅಜ್ಜಿ ಕಾಣಿಸಿಕೊಳ್ಳದಿರುವುದು, ಅನುಮಾನಾಸ್ಪದವಾಗಿ ಕಂಡು ರಾಯಳ ಗೂಡಿಗೆ ತಪಾಸಣೆಗೆಂದು ಸಮಾಜ ಕಲ್ಯಾಣ ಅಧಿಕಾರಿ ತಂಡದೊಂದಿಗೆ ತೆರಳಿದಾಗ, ಅವಳ ತಮ್ಮ ಸಿಕ್ಕಿ ಬೀಳುತ್ತಾನೆ; ರಾಯ ತಪ್ಪಿಸಿಕೊಂಡು ಲಂಡನ್ನಿಗೆ ಪಲಾಯನ ಮಾಡುತ್ತಾಳೆ. ಆದರೆ, ಅಲ್ಲಿ ಅವಳಿಗೆ ನಿರಾಶೆ ಕಾದಿರುತ್ತದೆ: ಅಮ್ಮನ ವಿಳಾಸ ಹುಡುಕಿಹೋದರೆ, ಅಮ್ಮ ಬೇರೊಂದು ಸಂಸಾರ ಹೂಡಿಕೊಂಡಿದ್ದು, ಹಳೆಯ ಬದುಕಿಗೆ ಮರಳಲಾಗದ ಸ್ಥಿತಿಯಲ್ಲಿರುತ್ತಾಳೆ. ಇದೀಗ, 18 ವಯಸ್ಸು ತುಂಬಿದ ರಾಯ, ತನ್ನ ಹಳ್ಳಿಗೆ ಮರಳುತ್ತಾಳೆ; ತಮ್ಮನನ್ನು ಅನಾಥಾಶ್ರಮದಿಂದ ಬಿಡಿಸಲು ಹೊರಡುತ್ತಾಳೆ.

ಈ ಸಿನಿಮಾ ಯಾಕೆ ಮುಖ್ಯ

ಮೇಲೆ ಕೊಟ್ಟಿರುವ ಕಥಾ ತುಣುಕನ್ನು ಓದಿದರೆ, ಈ ಸಿನಿಮಾವನ್ನು ಜಗತ್ತಿನ ಯಾವ ಸ್ಥಳದಲ್ಲಾದರೂ ಸ್ಥಳೀಯಗೊಳಿಸಿ ಚಿತ್ರಿಸಬಹುದು ಎನ್ನಿಸುತ್ತದೆಯಲ್ಲವಾ? ಆದರೆ, ವಿಂಬನ ರಾಯ, ಜಗತ್ತಿನ ಇತರೆಡೆಗಳಲ್ಲಿ ಬಿಡಿ, ಲಾಟ್ವಿಯಾದ ಇತರ ನಗರ-ಅರೆನಗರ ಪ್ರದೇಶಗಳಲ್ಲೂ, ಸ್ಥಳಸ್ಥವಾಗಲು ನಿರಾಕರಿಸುವವಳು. ವಿರಳ ಜನವಾಸದ ಲಾಟ್ವಿಯದ ಪುಟ್ಟ ಹಳ್ಳಿ, ಅವಳ ತಿಳಿವಳಿಕೆಯಾರಂಭ ಕಂಡುಂಡು ಬೆಳೆದ ಕಾಡು, ತೋಟ, ನದಿ, ಕಪ್ಪು ಮಣ್ಣು, ಕೆಸರು-ಇವುಗಳೆಲ್ಲ ರಾಯಳ ಸಂವೇದನೆಯ ಅವಿಭಾಜ್ಯ ಭಾಗ. ಹಾಗಾಗಿ ಅವಳು ಹಂಬಲಿಸುವುದು ಹೊಟ್ಟೆ-ಬಟ್ಟೆ ನೆಟ್ಟಗಿರುವ ಸ್ವತಂತ್ರ ಬದುಕನ್ನು ಮಾತ್ರವೇ ಅಲ್ಲ; ಅವಳ ವ್ಯಕ್ತಿತ್ವಕ್ಕೆ ಪ್ರತಿಮೆಯಂತಿರುವ ಕಾಡು ತೋಟದ ಸ್ವಚ್ಛಂದತೆಯಿಂದ, ನದಿ ತೊರೆಗಳಲ್ಲಿ ತೇಲಿ ಮೀನು ಹಿಡಿಯುವುದರಿಂದ, ಕೆಸರಿನ ಗುಡ್ಡಗಳಿಂದ ಜಾರಿ ಪುಂಡಾಟಿಕೆ ಮಾಡುವುದರಿಂದ, ಅರಳುತ್ತಿರುವ ಯೌವನದಲ್ಲಿ ಯೌವನಿಗ ಮಾಸ್ತರನ ಜೊತೆಯ ತುಡುಗು ಪ್ರೀತಿಯಿಂದ-'ತಾನು ವಂಚಿತಳಾಗಿ ಇದ್ದೇನೆ' ಎನ್ನುವುದು ರಾಯಳ ಸ್ವಂತದ ಅಸ್ತಿತ್ವ ಸಂವೇದನೆ. ತಂದೆ ಇದ್ದಿದ್ದರೆ, ತಾಯಿ ತ್ಯಜಿಸಿ ಹೋಗದಿದ್ದರೆ, ಒಂದು ಮಟ್ಟಿಗಿನ ಕುಟುಂಬವೆನ್ನುವುದು ಇದ್ದರೆ, ರಾಯ ಇವುಗಳೆನ್ನವನ್ನು ತನ್ನ ಭಂಡ ಎದೆಗಾರಿಕೆಯಿಂದ ಪಡೆದುಕೊಳ್ಳಬಲ್ಲ ಛಾತಿವಂತಳು; ತನ್ನ ಪುಟ್ಟ ಹಳ್ಳಿಯ ಬದುಕು, ಹತ್ತಿರದ ಅರೆನಗರದ ಶಾಲೆಯ ಸಂಪರ್ಕ-ಇಷ್ಟರಿಂದಲೇ ತನ್ನ ಸ್ವತಂತ್ರ ಅಸ್ತಿತ್ವವನ್ನು ಕಟ್ಟಿಕೊಳ್ಳಲು ಇಚ್ಛಿಸುವವಳು; ಲಂಡನ್ನಾಗಲೀ, ಲಾಟ್ವಿಯಾದ ರಾಜಧಾನಿ ರೀಗಾವಾಗಲೀ ಅವಳಿಗೆ ತನ್ನ ಸ್ಥಳವಲ್ಲ- ತಾನೆಲ್ಲಿ ತನ್ನತನ ಸಾಧಿಸಲು ಪೂರ್ಣ ಅವಕಾಶವಿದೆಯೋ, ಅದು ಅವಳಿಗೆ ತನ್ನದು (ಇಂತಾಗಿ ಮೂಲ ಶೀರ್ಷಿಕೆ 'ನಾನು ಇಲ್ಲಿ ಇದ್ದೇನೆ'). ಇದೆಲ್ಲವನ್ನೂ ಕಳೆದುಕೊಳ್ಳುವ, ತಮ್ಮನ ಬದುಕಿನ ಜವಾಬ್ದಾರಿ ಹೊತ್ತುಕೊಳ್ಳಬೇಕಾದ ಸಂಕಟಮಯ ಇರುವಿಕೆಯ ವಿರುದ್ಧ ಅವಳ ಬಂಡಾಯದ ಸಂವೇದನೆಯನ್ನು, ವಿಂಬ ಪ್ರೇಕ್ಷಕರ ಅರಿವಿಗೆ ತರುವ ಜವಾಬ್ದಾರಿ ಹೊತ್ತುಕೊಂಡಿದ್ದಾನೆ. ಮತ್ತೂ ಅದನ್ನು ಅವನು ಸಾಧಿಸಬೇಕಾದ್ದು ದೃಶ್ಯ-ಶಬ್ದ ಸಿನಿಮಾ ಭಾಷೆಯ ಮೂಲಕ ಮಾತ್ರವೇ.

ಆಡುವ ಭಾಷೆಯಲ್ಲಿ ಈ ಬಗೆಯ ಅಸ್ತಿತ್ವ ವಂಚಿತ ಸಂವೇದನೆಯನ್ನು ಓದುಗರಿಗೆ ಮುಟ್ಟಿಸಲಿಕ್ಕೆ ಕಥನಾ ನಿರೂಪಣೆಯ ಸೂಕ್ಷ್ಮ, ಆಡುನುಡಿಯ ಸೊಬಗು, ನಿರೂಪಣಾಗತಿಯ ಏರಿಳಿತ ಹೇಗೆ ಸೃಜನಾತ್ಮಕ ಸಲಕರಣೆಗಳೋ ಹಾಗೆ, ಸಿನಿಮಾಕ್ಕೆ ಇರುವುದು ಗಟ್ಟಿ ಬಂಧದ ಚಿತ್ರಕತೆ, ಕ್ಯಾಮೆರಾದ ಕಲೆ ಹಾಗು ಕ್ಯಾಮೆರಾದ ಎದುರಲ್ಲಿ ಚಿತ್ರಕತೆಯ ಭಾವಸಂವೇದನೆಯನ್ನು ಸೃಷ್ಟಿಸುವ ಸಂಯಮದಲ್ಲಿ ಮಾತ್ರ ನಟಿಸುವ ಪಾತ್ರಧಾರಿಗಳ ನಟನಾಭಿವ್ಯಕ್ತಿ. ಚಿತ್ರಕತೆ ನಿರ್ದೇಶಕನ ಭಾವದಲ್ಲಿ ಇರುವ ದೃಶ್ಯ ಚಿತ್ರ ಸರಣಿಗಳನ್ನು ಕಾಲ-ದೇಶ-ಸನ್ನಿವೇಶ-ವಾತಾವರಣ ಲಕ್ಷಣ, ಪಾತ್ರದ ಅಭಿನಯ ಮಿತಿಗಳ ಸಹಿತ ಸಚಿತ್ರ-ಸರೂಪಕವಾದ ಭಾಷೆಯ ಮೂಲಕ ಮೂರ್ತಗೊಳಿಸುವ ದೃಶ್ಯ ಸರಣಿಗಳ ರಚನೆ; ಸಿನಿಮಾದ ಎಲುಬಿನ ಹಂದರ. ಕ್ಯಾಮೆರಾದ ಕಸಬುದಾರಿಕೆ ಹಾಗು ಅದರ ಎದುರು ಅಭಿನಯಿಸುವ ಔಚಿತ್ಯಭರಿತ ನಟನೆಯ ಕೌಶಲ, ಸಿನಿಮಾಕ್ಕೆ ರಕ್ತಮಾಂಸ ತುಂಬಿ, ನಿರ್ದೇಶಕನ ಅಮೂರ್ತ ಭಾವಸಂವೇದನೆಯನ್ನು ದೃಶ್ಯ-ಶ್ರವಣ ಸಂವಹನೆಯ ಮೂಲಕ ಪ್ರೇಕ್ಷಕರ ಎದೆಯ ಸಂವೇದನೆಯಾಗಿಸುವ ಸೃಜನಶೀಲ ಜೂಜು!

ಈ ಸಿನಿಮಾವನ್ನು ಕಾಣುವ ಜಾಗತಿಕ ಪ್ರೇಕ್ಷಕರು ಭಿನ್ನ ಸಮಾಜ-ಸಂಸ್ಕೃತಿಗಳ ಬದುಕಿನಾನುಭವದಲ್ಲಿ ಈ ಸಿನಿಮಾ ನೋಡುವವರು. ದೃಶ್ಯ-ಶ್ರವಣಗಳ ಮೂಲಕ ಮಾತ್ರವೇ ಲಾಟ್ವಿಯಾದ ಹಳ್ಳಿಯಲ್ಲಿ ಸ್ಥಳಸ್ಥಳಾದ ರಾಯಳ ಅಸ್ತಿತ್ವ ಸ್ವಾತಂತ್ರ್ಯದ ವಿಶಿಷ್ಟ ಸಂವೇದನೆಯನ್ನು ಕಟ್ಟಿಕೊಡುವ ಸವಾಲನ್ನು ಸ್ವೀಕರಿಸಿ ಸೋತರೂ ಮರ್ಯಾದೆ. ಚಿತ್ರ ಕಥಾಕಾರ-ನಿರ್ದೇಶಕ ವಿಂಬ, ಸಿನಿಮಾಟೋಗ್ರಾಫರ್ ಅರ್ನರ್ ಥೋರಿಸ್ಸನ್ ಹಾಗು ರಾಯಳ ಪಾತ್ರ ನಿರ್ವಹಿಸಿದ ಹುಡುಗಿ ಎಲಿನಾ ವಾಸ್ಕ-ಇವರುಗಳ ಒಟ್ಟು ಸೃಜಶೀಲತೆ ಸಿನಿಮಾವನ್ನು ಗೆಲ್ಲಿಸಿದೆ. ಆ ಮೂಲಕ, ಸೂಕ್ಷ್ಮವಾದ ಸಂವೇದನೆಗಳನ್ನು ನೋಡುಗರಿಗೆ ಕಾಣಿಸುವ ಸಿನಿಮಾ ಕಲೆಯ ಸೃಜನಶೀಲತೆಗೆ ಕಸುವು ತುಂಬಿದ್ದಾರೆ. ಎಷ್ಟೇ ಹಾಡಿ ಹೊಗಳಿದರೂ, ಸಿನಿಮಾ ಕಾಣದೆ ರಾಯಳ ಸಂಘರ್ಷದ ಸಂವೇದನೆಯನ್ನು ದಾಟಿಸಲಾಗದು! ಅದು ಸಿನಿಮಾದ (ಅಥವ ಯಾವುದೇ ಜೀವಂತ ಕಲೆಯ ಆಂತಿಕ) ಅಂತಃಶಕ್ತಿ.

ಮರೆತು ಹೋಗಬಹುದಾದ್ದರಿಂದ ಈ ಬರಹ ಸರಣಿಯ ಕೊನೆಗೆ ಹೇಳಬೇಕೆಂದುಕೊಂಡಿದ್ದ ಮಾತುಗಳನ್ನು, ಮಧ್ಯಂತರದಲ್ಲಿ ಹೇಳಿಬಿಡುವೆ. ಸಮಾಜಜೀವಿಯಾಗಿ ಬದುಕುತ್ತಿರುವ ವ್ಯಕ್ತಿಯೊಬ್ಬ ಸಮಾಜದ ಬಗೆಗಿನ ತನ್ನ ಅಂತರಾಳದ ಸಂವೇದನೆಗಳನ್ನು ಹೇಳಿಕೊಳ್ಳಲಿಕ್ಕೆ ಸದಾ ಒಂದು ಸಂಪರ್ಕ ಮಾಧ್ಯಮಕ್ಕಾಗಿ ತಡಕುತ್ತಲೇ ಇರುತ್ತಾನೆ. ಮನುಷ್ಯ ಒಂದು ಪ್ರಾಣಿಯಾಗಿ, ಪಶುಸಹಜ ದೈಹಿಕ ಸ್ಪರ್ಶ ಭಾವದ ಆದಿಮ ಸಂಪರ್ಕ ಮಾಧ್ಯಮ-ಅದು ನಾಗರಿಕ ಸಮಾಜದ ನಿತ್ಯದ ವಿಧಾನವಾದರೆ, ಅದು ಹಿಂಸೆ-ಅತ್ಯಾಚಾರಗಳ ವಿನಾಶ ವಿಲೋಕವಾದೀತೂ. ಈ ದರ್ಶನದ ಅರಿವಿನಲ್ಲಿ ಕವಿ ಎ.ಕೆ.ರಾಮಾನುಜನ್ ತಮ್ಮ ಹೆಸರಿಲ್ಲದ ಎರಡು ಪದ್ಯಗಳಲ್ಲಿ 'ನೀನು ಇದ್ದಿಯೋ ಇಲ್ಲವೋ / ನಿನ್ನನ್ನು ದೇವರೇ ಎನ್ನದೇ ವಿಧಿಯಿಲ್ಲ..', 'ಮೈ ಮುಟ್ಟಿದ ಹಾಗೆ ಮನಸ್ಸು ಮುಟ್ಟಲಾಗದೇ...', 'ಭಾವದ ಸ್ವಭಾವವನ್ನು ಕಲಿಸಬಾರದೇ' ಎಂಬುದಾಗಿ ವ್ಯಕ್ತಿಗತ ಸಂವೇದನೆಗಳನ್ನು ಲೋಕಕ್ಕೆ ಮುಟ್ಟಿಸುವ ಕಾಯಕದ ಕಷ್ಟವನ್ನು ತೋಡಿಕೊಳ್ಳುತ್ತಾರೆ; 'ಮೈಮುಟ್ಟಿದ ಹಾಗೆ ಮನಸ್ಸು ಮುಟ್ಟುವ ಭಾವ ಸ್ವಭಾವದ ಅರಿಸುವಿಕೆ ಕಾವ್ಯದ ಕಲಾವಂತಿಕೆ ಎಂದು ಕಾಣಿಸುತ್ತಾರೆ. ಇದನ್ನು ಚಲನಾದೃಶ್ಯಕಾವ್ಯವಾದ ಸಿನಿಮಾಕ್ಕೂ ಅನ್ವಯಿಸಬಹುದಾದರೆ, ಮೆಂಡೋಜ (ಮಾರೋಸ), ಮಿಡಿ (ರೋಡ್ ಟು ಮಂಡಲಾಯ್), ಪ್ಲೊಲಾನ್ (ಇಟ್ಸ ದಿ ಓನ್ಲಿ ಎಂಡ್ ಆಫ್ ದಿ ವರ್ಲ್ಡ್), ಬರ್ರಗನ (ಅಲ್ಬಾ), ಪುಜು (ಸಿಯೆರನೆವಡ), ವಿಂಬ ಹಾಗು ಮುಂದೆ ನಾನು ಪ್ರಸ್ತುತಪಡಿಸಲು ಇಚ್ಛಿಸಿರುವ ಮತ್ತಷ್ಟು ಸಿನಿಮಾ ನಿರ್ದೇಶಕ- ಚಿತ್ರಕಥಾಕಾರ-ಸಿನಿಮಾಟೋಗ್ರಾಫರ್ ಸಾಮೂಹಿಕರು, 'ಭಾವದ ಸ್ವಭಾವವನ್ನು' ಸಿನಿಮಾ ಕಲೆಯ ಮೂಲಕ ಕಾಣಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. ಹೀಗೆ ನಾಗರಿಕ ಲೋಕಕ್ಕೆ ಸಿನಿಮಾ ಕಲೆ ಹೇಗೆ ಮುಖ್ಯವಾಗುತ್ತದೆ ಎನ್ನುವುದರ ಕಡೆಯ ವಿವೇಚನೆ ಈ ಸರಣಿಯ ಉದ್ದೇಶವಾಗಿದೆ. ■

ದ್ದಾರೆ. ಆದರೆ ನಂಜನಗೂಡಿನ ಪ್ರಬುದ್ಧ ಮತದಾರರು ಕಪಟ ಟಿವಿ ಜ್ಯೋತಿಷಿಗಳು ಹರಡಿದ್ದ ಮೌಢ್ಯದ ಬಲೆಗೆ ಬೀಳಲಿಲ್ಲ ಇದು ಶುಭ ಸಂಕೇತ!

-ಆರ್. ಭಾಸ್ಕರ್ ಅಮೀನ್, ಮಂಗಳೂರು

ಕೇಶವಮೂರ್ತಿಯವರಿಗೆ ಶ್ರದ್ಧಾಂಜಲಿ

ಓದುಗರೊಂದಿಗೆ ಸುಮಧುರ ಬಾಂಧವ್ಯ ಇಟ್ಟುಕೊಂಡು ತಮ್ಮ ಲೇಖನಿಯಿಂದ ಪರಿಣಾಮಕಾರಿ ಲೇಖನಗಳನ್ನು ಹೊರಹೊಮ್ಮಿಸುತ್ತಿದ್ದ ದಿವಂಗತ ಎಚ್.ಎಲ್. ಕೇಶವಮೂರ್ತಿಯವರ ಬಗ್ಗೆ 'ಅಂಚಿನಿಂದ' ಅಂಕಣದಲ್ಲಿ ಡಾ. ವಾಸು ಎಚ್.ವಿ., ಗೌರಿ ಲಂಕೇಶರು ತಮ್ಮ ಸಂಪಾದಕೀಯದಲ್ಲಿ ಮತ್ತು ಬಿ. ಚಂದ್ರೇಗೌಡರ ಲೇಖನಗಳು ಎಚ್‌ಎಲ್‌ಕೆ ಅವರ ವ್ಯಕ್ತಿತ್ವವನ್ನು ಎಳೆಎಳೆಯಾಗಿ ತೆರೆದಿಟ್ಟಿವೆ.

ಪತ್ರಿಕೆಯ ಹಲವು ಪುಟಗಳನ್ನು ಮೀಸಲಿಟ್ಟು ಎಚ್.ಎಲ್. ಕೇಶವಮೂರ್ತಿ ಅವರಿಗೆ ಮೀಸಲಿಡುವ ಮೂಲಕ ಅವರಿಗೆ ಶ್ರೇಷ್ಠ ಶ್ರದ್ಧಾಂಜಲಿಯನ್ನು ಸಲ್ಲಿಸಿದಂತಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ.

- ಕಾಳೀಹುಂಡಿ ಶಿವಕುಮಾರ್, ಮೈಸೂರು

ದಕ್ಷಿಣಾಯಣ ವಿಸ್ತರಿಸಲಿ

ಪ್ರಜಾಪ್ರಭುತ್ವದ ಕಲಾದೃಷ್ಟಿಯನ್ನು ಚಾಚೂತಪ್ಪದೆ ಕಾಪಾಡಿಕೊಂಡು ಹೋಗುತ್ತಿರುವ ನಿಮಗೆ ಹಾಗೂ ಪತ್ರಿಕಾತಂಡಕ್ಕೆ ನಮನ.

ಶಿವಮೊಗ್ಗದಲ್ಲಿ ನಡೆದ ದಕ್ಷಿಣಾಯಣಕ್ಕೆ ಸಮಯ ಸಾಧ್ಯವಾಗದೆ ಹಾಜರಿಯಾಗಲು ಸಾಧ್ಯವಾಗಿರಲಿಲ್ಲ, ಆದರೆ ಪತ್ರಿಕೆಯಲ್ಲಿ ಈ ಕುರಿತ ಸಮರ್ಪಕ ವರದಿ ಓದಿ ನಾನು ಹಾಜರಾದಷ್ಟೇ ಸಂತಸಪಟ್ಟೆ.

"ಈ ಪ್ರಭುತ್ವವನ್ನು ಯಾವುದೇ ಅಳುಕೂ ಇಲ್ಲದೆ ಪ್ರಶ್ನೆ ಮಾಡುವ ಶಕ್ತಿ ಬೆಳೆಸಿಕೊಳ್ಳಬೇಕು", "ಅಭಿವ್ಯಕ್ತಿಯ ಆತ್ಮಹತ್ಯೆಯಾಗಬಾರದು", "ಭ್ರಷ್ಟಾಚಾರರಹಿತ ರಾಜಕೀಯ ತಳಹಾಯದಿಂದ ಮಾತ್ರ ಜನಾಂದೋಲನ ಯಶಸ್ವಿಯಾಗುತ್ತದೆ" ಎಂಬ ಚಿಂತನೆಯ ವಾಣಿ ನನ್ನಲ್ಲೂ ಪ್ರತಿಧ್ವನಿಸಿತು.

ಶಿವಮೊಗ್ಗದಲ್ಲಿ ಮೊದಲ ಬಾರಿಗೆ ನಡೆದ ದಕ್ಷಿಣಾಯಣ ಬೇರೆ ಜಿಲ್ಲೆಗಳಿಗೂ ವಿಸ್ತರಿಸುವ ಪ್ರಯತ್ನ ತೀವ್ರಗತಿಯಲ್ಲಿ ಸಾಗಿ ಸಾರ್ಥಕವಾಗಬೇಕು.

ಮತೀಯ ದಾಳಿಗಳ ವಿರುದ್ಧ ಪ್ರತಿರೋಧವನ್ನು ಹೇಗೆ ಕಟ್ಟಬೇಕೆಂಬ ಮುಖ್ಯಚಿಂತನೆ ನಮ್ಮೆಲ್ಲರ ಜವಾಬ್ದಾರಿ.

- ಜ್ಯೋತಿ ಗುರುಪ್ರಸಾದ್, ಕಾರ್ಕಳ

ಇದೂ ಪ್ರಜಾಪ್ರಭುತ್ವವಾ?

ಕಾಶ್ಮೀರದ ರಾಜಧಾನಿ ಶ್ರೀನಗರ. ಈ ಶ್ರೀನಗರ ಲೋಕಸಭಾ ಕ್ಷೇತ್ರದ ಉಪಚುನಾವಣೆ ಈಗತಾನೆ ನಡೆದಿದ್ದು ಅಲ್ಲಿನ 12,60,000 ಮತದಾರರ ಪೈಕಿ ಮತದಾನ ಮಾಡಿದ್ದು 89,883 ಜನ ಮಾತ್ರ! (11,70,117 ಜನ ತಮ್ಮ ಮತದಾನದ ಹಕ್ಕನ್ನೇ ಚಲಾಯಿಸಿಲ್ಲ) ಅಂದರೆ 100ಕ್ಕೆ 7 ಜನ ಮಾತ್ರ ಮತ ಚಲಾಯಿಸಿದ್ದಾರೆ!

ಅದರಲ್ಲಿ ಗೆದ್ದ ಅಭ್ಯರ್ಥಿಗೆ (ಅವರೊಬ್ಬ ಮಾಜಿ ಮುಖ್ಯ ಮಂತ್ರಿಯಾಗಿದ್ದಾಗ್ಯೂ) ಬಿದ್ದ ಮತಗಳ ಸಂಖ್ಯೆ 48,554 ಮಾತ್ರ. ಅಂದರೆ 100ಕ್ಕೆ 4 ಮತಗಳು ಮಾತ್ರ (ಅದರಲ್ಲೂ ಆ ಗೆದ್ದ ಅಭ್ಯರ್ಥಿ ಗಳಿಸಿದ ಮತಗಳೆಷ್ಟೋ, ಕೊಂಡ ಮತಗಳೆಷ್ಟೋ?).

ಅಂದರೆ, 100ಕ್ಕೆ 4ಕ್ಕಿಂತ ಕಡಿಮೆ ಜನರ ವಿಶ್ವಾಸ ಪಡೆದ ಅಭ್ಯರ್ಥಿಯೊಬ್ಬ ಸಂಸದನಾಗುತ್ತಾನೆ. ಇದು ನಮ್ಮ 'ಪ್ರಜಾಪ್ರಭುತ್ವ' ಎಂದರೆ ಯಾರೇ ಆಗಲಿ ನಗುವುದಿಲ್ಲವೇ? ಇದು ನಾವೆಲ್ಲಾ ನಾಚಿಕೆ ಪಟ್ಟುಕೊಳ್ಳಬೇಕಾದ ಸಂಗತಿಯಲ್ಲವೇ?

-ವಿರೂಪ್ಯಾಕ್ಷಯ್ಯ, ಬೆಂಗಳೂರು

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 03-05-2017 RNI No. KARKAN2005

ಸಾವಿರ ಕೋಟಿ ಸಿನಿಮಾ

ಇದೇ ಮೊದಲ ಬಾರಿಗೆ ಭಾರೀ ಬಜೆಟ್‌ನ ಸಿನಿಮಾವೊಂದು ಭಾರತದಲ್ಲಿ ಮೂಡಿಬರುತ್ತಿದೆ. ಇದು ದಾಖಲೆಯ ಬಜೆಟ್‌ನ ಸಿನಿಮಾ ಆಗಲಿದೆ. ಯುಎಇ ಮೂಲದ ಕನ್ನಡಿಗ ಉದ್ಯಮಿ ಬಿ.ಆರ್.ಶೆಟ್ಟಿ ಇಂಥದ್ದೊಂದು ಮೆಗಾ ಕನಸಿಗೆ ಮುಂದಾಗಿದ್ದು ಚಿತ್ರಕ್ಕೆ 'ದ ಮಹಾಭಾರತ' ಎಂದು ಹೆಸರಿಡಲಾಗಿದೆ. ಬರೋಬ್ಬರಿ ಸಾವಿರ ಕೋಟಿ ರೂಪಾಯಿ ಬಂಡವಾಳದಲ್ಲಿ ಸಿನಿಮಾ ಮೂಡಿಬರಲಿದೆ.

ಬೃಹತ್ ಜಾಹೀರಾತು ಸಿನಿಮಾಗಳ ನಿರ್ದೇಶಕ ವಿ.ಎ.ಶ್ರೀಕುಮಾರ್ ಚಿತ್ರದ ನಿರ್ದೇಶಕರು. ಸದ್ಯ ಸ್ಕ್ರಿಪ್ಟ್ ಕೆಲಸ ನಡೆದಿದ್ದು, ಸೆಪ್ಟೆಂಬರ್ 2018ರಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಮೂರು ಗಂಟೆಯಲ್ಲಿ ಮಹಾಭಾರತವನ್ನು ಹೇಳುವುದು ಕಷ್ಟ. ಹಾಗಾಗಿ ಎರಡು ಭಾಗವಾಗಿ ಈ ಸಿನಿಮಾವನ್ನು ತಯಾರಿಸಲಿದ್ದಾರೆ ನಿರ್ದೇಶಕರು. ಸೆಪ್ಟೆಂಬರ್ 2018 ರಲ್ಲಿ ಚಿತ್ರೀಕರಣ ಪ್ರಾರಂಭವಾದರೆ, 2020ರ ಆರಂಭದಲ್ಲಿ ರಿಲೀಸ್ ಆಗಲಿದೆ. ಮೊದಲನೇ ಭಾಗ ಬಿಡುಗಡೆಯಾದ 90 ದಿನಗಳ ನಂತರ ಎರಡನೇ ಭಾಗ ಬಿಡುಗಡೆ ಮಾಡುವ ಪ್ಲಾನ್ ನಿರ್ಮಾಪಕರದ್ದು. ಹೆಚ್ಚು ಕಡಿಮೆ ಎಲ್ಲಾ ಭಾರತೀಯ ಭಾಷೆಗಳಲ್ಲಿ ಸಿನಿಮಾ ಮೂಡಿಬರಲಿದ್ದು, ಇಂಗ್ಲಿಷ್‌ನಲ್ಲೂ ನಿರ್ಮಾಣವಾಗಲಿದೆ. ಕನ್ನಡ, ಹಿಂದಿ, ಮಲಯಾಳಂ, ತೆಲುಗು, ತಮಿಳು ಭಾಷೆಗಳಲ್ಲಿ ನೇರವಾಗಿ ಚಿತ್ರೀಕರಣವಾಗಲಿದ್ದು, ನಂತರ ಪ್ರಮುಖ ಭಾರತೀಯ ಮತ್ತು ವಿದೇಶಿ ಭಾಷೆಗಳಿಗೆ ಡಬ್ ಮಾಡುವ ಯೋಜನೆ ನಿರ್ಮಾಣ ಸಂಸ್ಥೆಯದ್ದು.

ನಿರ್ಮಾಪಕರೇ ಹೇಳಿದಂತೆ ಆಸ್ಕರ್ ಪ್ರಶಸ್ತಿ ವಿಜೇತ ನಟರೂ ಸೇರಿದಂತೆ, ಭಾರತೀಯ ಸಿನಿಮಾ ರಂಗದ ನಟರು ಮತ್ತು ತಂತ್ರಜ್ಞರು ಈ ಚಿತ್ರಕ್ಕಾಗಿ ಕೆಲಸ ಮಾಡಲಿದ್ದಾರೆ. ಸದ್ಯಕ್ಕೆ ಮಲಯಾಳಂ ಖ್ಯಾತ ನಟ ಮೋಹನ್ ಲಾಲ್ ನಟಿಸಲು ಒಪ್ಪಿಕೊಂಡಿರುವ ಸುದ್ದಿಯೂ ಇದೆ.



ಕತ್ತಿಗುಪ್ಪೆಯ ರಿಯಲ್ ಸ್ಟೋ

ಆಕೆ ಬೆಂಗಳೂರಿನ ಎಂಜಿ ರೋಡ್‌ನಲ್ಲಿ ಅಡಿಡಾಸ್ ಮತ್ತು ಶೋರೂಮ್ ಹೊಂದಿದ್ದ ಕೇರಳದ ಖ್ಯಾತ ಉದ್ಯಮಿಯ ಮಗಳು. ಕತ್ತಿಗುಪ್ಪೆಯಲ್ಲಿ ಕಟಿಂಗ್ ಶಾಪ್‌ನಲ್ಲಿ ಕೆಲಸ ಮಾಡುವ ಹುಡುಗ. ಪ್ರೇಮಾಂಕುರ. ನಂತರ ಈ ಪ್ರೇಮಿಗಳ ಬದುಕು ದುರಂತ ಅಂತ್ಯ ಯಾವುದೋ ಕಾಲ್ಪನಿಕ ಕತೆಯಲ್ಲ. ಬೆಂಗಳೂರಿನಲ್ಲಿ ನಡೆದ ದುರಂತ ಕತೆ. ಸಿನಿಮಾವಾಗಿಸುತ್ತಿದ್ದಾರೆ ಪ್ರಖ್ಯಾತ. ಈ ದುರಂತ ಕತೆಯ ನಾಯಕ ಶಾಪ್‌ನಲ್ಲಿ ಕೆಲಸಕ್ಕಿದ್ದ ಕಾರಣದಿಂದಾಗಿ ಚಿತ್ರಕ್ಕೆ 'ಕತ್ತಿಗುಪ್ಪೆ ಕಟಿಂಗ್ ಶಾಪ್' ಹೆಸರಿಟ್ಟಿದ್ದಾರೆ. ಕೇರಳ ಮೂಲದ ಶ್ರೀಮಂತ ಕ್ರಿಶ್ಚಿಯನ್ ಉದ್ಯಮಿಗೆ ಎಂಬ ಮಗಳಿದ್ದಳು. ಆಕೆ ಓದಿದ್ದೆಲ್ಲವೂ ಮೌಂಟ್ ಕಾರ್ಮೆಲ್ ಕಾಲೇ ಆದರೆ ಆಕೆ ಪ್ರೀತಿಸಿದ್ದು ಮಾತ್ರ ಪಕ್ಕಾ ಲೋಕಲ್. ಅದೂ ಕತ್ತಿಗುಪ್ಪೆಯ ಶಾಪ್‌ನಲ್ಲಿ ಕೆಲಸಕ್ಕಿದ್ದ ಕೃಷ್ಣನನ್ನು.

ಮನೆಯವರ ವಿರೋಧದ ನಡುವೆಯೂ ರೋಸಿ, ತಾನು ಪ್ರೀತಿಸಿ ಕೃಷ್ಣನ ಜತೆ ಮದುವೆ ಆಗುತ್ತಾಳೆ. ಆನಂತರ ಅವರ ಜೀವನ ಹೇಗೆಲ್ಲ ಪಡೆದುಕೊಳ್ಳುತ್ತದೆಂಬುದೇ ಸಿನಿಮಾ. ರೋಸಿಯ ತಂದೆಯಾಗಿ ಪ್ರಕಾ ನಟಿಸಲಿದ್ದಾರೆ ಅನ್ನುವ ಸುದ್ದಿ ಇದೆ. ಆದರೆ, ಈವರೆಗೂ ಸಿನಿಮಾ ತಂಡ ಸಂಪರ್ಕ ಮಾಡಿಲ್ಲ ಅಂತಿದ್ದಾರೆ ರೈ.

ರಾಜಮೌಳಿ, ಪಿ.ಕುಮಾರ್ ಸೇರಿದಂತೆ ಹಲವು ಪ್ರಖ್ಯಾತ ನಿರ್ದೇಶಕ ಕೆಲಸ ಮಾಡಿರುವ ಪ್ರಖ್ಯಾತ್‌ಗೆ ಇದು ಮೊದಲ ಸಿನಿಮಾ. ಹಾಗಾಗಿ ಮಟ್ಟದಲ್ಲಿಯೇ ಈ ಸಿನಿಮಾ ಮಾಡುವ ಪ್ಲಾನ್ ಅವರದ್ದು. ತೆಲುಗು ಜಗಪತಿಬಾಬು, ಚರಣ್‌ರಾಜ್, ಕರಿಸುಬ್ಬು ಪದ್ಮಜಾ ರಾವ್ ಸೇರಿದಂತೆ ಮತ್ತು ಕನ್ನಡ ನಟರು ಈ ಸಿನಿಮಾದಲ್ಲಿ ನಟಿಸಲಿದ್ದಾರೆ. ಶಿವಮೊಗ್ಗ ಕ್ಯಾಥರಿನ್ ಚಿತ್ರದ ನಾಯಕಿ. ನಾಯಕನ ಆಯ್ಕೆ ಇನ್ನೂ ಆಗಬೇಕಿದೆ.

ಡಬ್ಬಿಂಗ್ ಮಾಡಿ ಅಂತಿದ್ದಾರೆ ಸೂರಿ

ದುನಿಯಾ ಸೂರಿ ಪ್ರತಿಭಾನ್ವಿತ ನಿರ್ದೇಶಕ ಅನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಡಬ್ಬಿಂಗ್ ಬರಲಿ ಅನ್ನುವ ಅವರ ನಡೆ ಮಾತ್ರ ಚರ್ಚೆಗೆ ಕಾರಣವಾಗಿದೆ. ಡಬ್ಬಿಂಗ್ ಅನ್ನುವುದು ಕೇವಲ ಭಾಷೆ ಕೊಲ್ಲುವ ಹುಳುವಲ್ಲ; ಅದು ಉದ್ಯೋಗವನ್ನು ಕಸಿದುಕೊಳ್ಳಲಿದೆ ಎಂಬ ಆತಂಕ ಕೆಲವರದ್ದು. ಅದರಲ್ಲೂ ಟಿವಿ ಮಾಧ್ಯಮದಲ್ಲಿ ಕೆಲಸ ಮಾಡುವ ಬಹುತೇಕರು ನಿರುದ್ಯೋಗಿಗಳಾಗಲಿದ್ದಾರೆಂಬ ಭಯ ಕೂಡ ಇದೆ. ಕಿರುತೆರೆಯ ಕ್ಷೇತ್ರದಿಂದ ಬಂದ ಸೂರಿಗೆ ಇದೆಲ್ಲವೂ ಗೊತ್ತಿದ್ದರೂ ಡಬ್ಬಿಂಗ್ ಪರ ಮಾತಾಡಿದ್ದಕ್ಕೆ ಕೆಲವರು ಬೇಸರಿಸಿಕೊಂಡಿದ್ದಾರೆ. ಸೂರಿ ಈಗ ಎಲ್ಲವನ್ನೂ ಮಾಡಿಕೊಂಡಿದ್ದಾರೆ. ಹಾಗಾಗಿ ನಡೆದುಬಂದ ದಾರಿಯನ್ನು ಅವರು ಮರೆಯುತ್ತಿದ್ದಾರೆಂದು ಸೂರಿ ಸ್ನೇಹಿತರೇ ಮಾತಾಡಿಕೊಳ್ಳುತ್ತಿದ್ದಾರೆ.

ಅಷ್ಟಕ್ಕೂ ಸೂರಿ ಡಬ್ಬಿಂಗ್ ಬೇಕು ಅನ್ನುವುದಕ್ಕೆ ಅವರದ್ದೇ ಆದ ಕಾರಣ ಕೊಟ್ಟಿದ್ದಾರೆ. ಡಬ್ಬಿಂಗ್ ಬೇಕು ಅಥವಾ ಬೇಡ ಅನ್ನುವುದಕ್ಕಿಂತ ನಾವೆಲ್ಲ ಡಬ್ಬಿಂಗ್ ಎದುರಿಸೋಕೆ ರೆಡಿಯಾಗಿರಬೇಕು ಅಂತಾರೆ. ಎಂತಹ ಸಿನಿಮಾ ಮಾಡಿದರೂ ನಡೆಯುತ್ತದೆ ಎಂಬ ಉಡಾಫೆತನ ನಮ್ಮಲ್ಲಿದೆ. ಬೇರೆ ಭಾಷೆಯ ಸಿನಿಮಾಗಳ ಜತೆ ನಾವು ಫೈಟ್ ಮಾಡದಿದ್ದರೆ ಹೇಗೆ? ನಾವು ಸುಖದಲ್ಲಿ ಮೈಮರೆತಿದ್ದೇವೆ. ಹಾಗಾಗಿ ಡಬ್ಬಿಂಗ್ ಬಂದರೆ ನಮಗೂ ಜಾಗ್ರತೆ ಉಂಟಾಗುತ್ತದೆ. ಕಾಂಪಿಟೇಷನ್ ಬೆಳೆಯುತ್ತದೆ. ಹಾಗಾಗಿ ಡಬ್ಬಿಂಗ್ ಬರಲಿ ಬಿಡಿ ಅನ್ನುವುದು ಅವರ ವಾದ.

ಟಾಲಿವುಡ್‌ನತ್ತ ಶ್ರದ್ಧಾ ಶ್ರೀನಾಥ್

ಮಣಿರತ್ನಂ ನಿರ್ದೇಶನದ ಸಿನಿಮಾದ ಮೂಲಕ ತಮಿಳಿಗೆ ಹಾರಿದ್ದ ಕನ್ನಡದ ನಟಿ ಶ್ರದ್ಧಾ ಶ್ರೀನಾಥ್, ಇದೀಗ ಟಾಲಿವುಡ್‌ನತ್ತ ಮುಖ ಮಾಡಿದ್ದಾರೆ. ನಿರ್ಮಾಪಕರ ಅಧಿಕೃತ ಘೋಷಣೆಗಾಗಿ ಅವರು ಕಾಯುತ್ತಿದ್ದಾರೆ. ಟಾಲಿವುಡ್‌ನಲ್ಲಿ ಒಂದಲ್ಲ, ಎರಡು ಸಿನಿಮಾಗಳಿಗೆ ಶ್ರದ್ಧಾ ಸಹಿ ಮಾಡಿದ್ದು, ಸಿನಿಮಾ ತಂಡವೇ ಆ ವಿಷಯ ಹೇಳಲಿ ಅಂತಾರೆ. "ಹೌದು, ನಾನು ತೆಲುಗು ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ. ಪಾತ್ರ ಮತ್ತು ಕತೆ ಕೂಡ ಇಷ್ಟವಾಗಿದೆ. ಆದರೆ ಈ ಸಿನಿಮಾಗಳ ಕುರಿತು ನಾನೇನೂ ಹೇಳಲಾರೆ. ಸಿನಿಮಾದ ನಿರ್ದೇಶಕರು ಮತ್ತು ನಿರ್ಮಾಪಕರು ಅಧಿಕೃತ ಘೋಷಣೆ ಮಾಡಲಿ. ಮಲೆಯಾಳಂ, ತಮಿಳು ಮತ್ತು ಕನ್ನಡ ಸಿನಿಮಾಗಳಲ್ಲಿ ಈಗಾಗಲೇ ನಟಿಸಿದ್ದೇನೆ. ತೆಲುಗು ಸಿನಿಮಾ ರಂಗ ಹೊಸದು. ಅದೊಂದು ಹೊಸ ಅನುಭವ" ಎನ್ನುತ್ತಾರೆ ಶ್ರದ್ಧಾ. ಸದ್ಯ ಶ್ರದ್ಧಾ ತೆಲುಗಿನ 'ಪೆಳ್ಳಿ ಚೂಪುಲು' ಸಿನಿಮಾದ ಕನ್ನಡ ರಿಮೇಕ್ ಚಿತ್ರ 'ಶಾದಿ ಭಾಗ್ಯ'ದಲ್ಲಿ ನಟಿಸುತ್ತಿದ್ದಾರೆ. ಈ ಸಿನಿಮಾದ ಶೂಟಿಂಗ್ ಮುಗಿಯುತ್ತಿದ್ದಂತೆಯೇ ತೆಲುಗು ಚಿತ್ರದ ಚಿತ್ರೀಕರಣದಲ್ಲಿ ಅವರು ಭಾಗಿಯಾಗಲಿದ್ದಾರೆ. 'ಯು ಟರ್ನ್' ಸಿನಿಮಾದಿಂದ ಪ್ರೇಕ್ಷಕರಿಗೆ ಹತ್ತಿರವಾದ ಶ್ರದ್ಧಾ ನಂತರ ಸಡನ್ನಾಗಿ ಮಣಿರತ್ನಂ ನಿರ್ದೇಶನದ 'ಕಾಟ್ರು ವೇಳಿಯಿದೈ' ಸಿನಿಮಾದಲ್ಲಿ ನಟಿಸುವ ಮೂಲಕ ಅಚ್ಚರಿ ಮೂಡಿಸಿದ್ದರು. ಆನಂತರ ತಮಿಳಿನಲ್ಲಿ ಮತ್ತೆರಡು ಚಿತ್ರಗಳನ್ನು ಒಪ್ಪಿಕೊಂಡರು. ಈಗ ತೆಲುಗಿಗೆ ಹೊರಟುನಿಂತಿದ್ದಾರೆ. ಯಾವುದೇ ಕಾರಣಕ್ಕೂ ಕನ್ನಡ ಸಿನಿಮಾಗಳಲ್ಲಿ ನಟಿಸುವುದನ್ನು ಮಿಸ್ ಮಾಡಲ್ಲ ಅಂತಾರೆ.

ತೆಲುಗಿನಲ್ಲಿ ಕಿರಕ

ಕನ್ನಡ ಬ್ಲಾಕ್‌ಬಸ್ಟರ್ ಸಿನಿಮಾ 'ಕಿರಿಕ್ ಪಾರ್ಟಿ' ಇದೀಗ ತೆಲುಗಿಗೆ ಆಗುತ್ತಿದೆ. ರಕ್ಷಿತ್ ಶೆಟ್ಟಿ ನಟನೆಯ ಈ ಸಿನಿಮಾ ಮೊನ್ನೆಯಷ್ಟೇ ಶತದಿನ ಅಲ್ಲದೇ, ಬಾಕ್ಸ್ ಆಫೀಸ್ ಕೂಡ ಕೊಳ್ಳೆ ಹೊಡೆದಿದೆ. ಹೀಗಾಗಿ ಸಹಜವಾ ರಿಮೇಕ್‌ಗೆ ಡಿಮಾಂಡ್ ಕ್ರಿಯೇಟ್ ಆಗಿತ್ತು. ಭಾರೀ ಮೊತ್ತಕ್ಕೆ ತೆಲುಗಿಗೆ ರೈಟ್ಸ್ ಖರೀದಿಯಾಗಿದೆ.

ಎಲ್ಲವೂ ಅಂದುಕೊಂಡಂತೆ ಆದರೆ, ಜೂನ್‌ನಿಂದ ತೆಲುಗಿನ 'ಕಿರಿಕ್ ಚಿತ್ರೀಕರಣ ಪ್ರಾರಂಭ. ನಿಖಿಲ್ ಸಿದ್ಧಾರ್ಥ ಚಿತ್ರದ ಹೀರೋ. ಅನಿಲ್ ಅವರ ಎಕೆ ಎಂಟರ್‌ಟೈನ್‌ಮೆಂಟ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ನಿರ್ಮಾಣಗೊ

'ಕಿರಿಕ್ ಪಾರ್ಟಿ' ಸಿನಿಮಾವನ್ನು ರಿಮೇಕ್ ಮಾಡುತ್ತಿದ್ದರೂ, ಇಡೀ ಸಿನಿ ಹಾಗೆಯೇ ಭಟ್ಟಿ ಇಳಿಸುವುದಿಲ್ಲವಂತೆ. ತೆಲುಗಿನ ಪ್ರೇಕ್ಷಕರಿಗೆ ಏನೆಲ್ಲ ಬೇಕೋ, ಎಲ್ಲವನ್ನೂ ಬೆರೆಸುವ ಯೋಚನೆ ನಿರ್ಮಾಪಕರದ್ದು. ಅಲ್ಲದೇ ಕಾ ದೃಶ್ಯಗಳಿಗೆ ಹೆಚ್ಚು ಮಹತ್ವ ನೀಡುತ್ತಿದ್ದು, ಅಗತ್ಯಬಿದ್ದರೆ ಮತ್ತಷ್ಟು ಕಾ ದೃಶ್ಯಗಳನ್ನು ಸೇರಿಸಲಿದ್ದಾರಂತೆ.

ಖ್ಯಾತ ನೃತ್ಯ ನಿರ್ದೇಶಕ ರಾಜು ಸುಂದರಂ ಈ ಸಿನಿಮಾವನ್ನು ನಿರ್ದೇಶಿ ಅನ್ನುವುದು ನಿರ್ಮಾಪಕರ ಆಸೆ. ಹಾಗಾಗಿ ರಾಜು ಅವರ ಜತೆ ಒಂದು ಮಾತುಕತೆ ಕೂಡ ಮುಗಿದಿದೆಯಂತೆ. ಬಹುತೇಕ ಇವರೇ ನಿರ್ದೇಶಕರು ಮಾತೂ ಕೇಳಿ ಬರುತ್ತಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com